# ಯುಗಶಕ್ತಿ

- ದೇವರು ಇದ್ದಾನೆಯೋ?
- ಬಹುಪತ್ನಿತ್ವ
- ಸ್ತ್ರೀಯರ ಹಕ್ಕುಗಳನ್ನು ಮನ್ನಿಸಿದ ಪ್ರವಾದಿ
- ಯೇಸುಕ್ರಿಸ್ತ ಕಾಶ್ಮೀರದಲ್ಲಿ ಮೃತನಾಗಿರುವನೇ?
- ಯೇಸುಕ್ರಿಸ್ತರು ಮೃತರಾದುದು ಎಲ್ಲಿ?

ತ್ರೈಮಾಸಿಕ

ಜೂನ್ 1978

ಇಹ್‌ಸಾನ್. 1357

ಬೆಲೆ: ರೂ. 1-00

ಸುಖದ ಸಂದರ್ಭದಲ್ಲೂ ಕಷ್ಟಾವಸ್ಥೆಯಲ್ಲೂ ಸತ್ಕಾರ್ಯಕ್ಕಾಗಿ ವ್ಯಯಮಾಡುವ, ಕೋಪವನ್ನು ತಡೆದು ಹಿಡಿಯುವ, ಜನರಿಗೆ ಕ್ಷಮೆಯನ್ನು ನೀಡುವ ಸದ್ಧರ್ಮಿಗಳನ್ನು ಅಲ್ಲಾಹು ಪ್ರೀತಿಸುತ್ತಾನೆ.

—ಪವಿತ್ರ ಖುರ್‌ಆನ್ (3 : 135)

# ಯು ಗ ರ ಶ್ಮಿ

**ತ್ರೈಮಾಸಿಕ**

23/1008, ಅನ್ಸಾರಿ ರೋಡ್, ಬಂದರ್, ಮಂಗಳೂರು–575001.

ಸಂಪುಟ: **4** ಎಪ್ರಿಲ್–ಜೂನ್ 1978/ಶಹಾದತ್–ಇಹ್‌ಸಾನ್ 1357 ಸಂಚಿಕೆ: **1**

ಸಂಪಾದಕ: **ಮುಹಮ್ಮದ್ ಯೂಸುಫ್**

ಬಿಡಿಪ್ರತಿ: ಒಂದು ರೂಪಾಯಿ ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು


**ವಿಷಯ ಸೂಚಿಕೆ:**


* ಯುಗರಶ್ಮಿಯ ನಾಲ್ಕನೆಯ ವರುಷ
* ಖುರ್‌ಆನ್ — ಅದ್ಭುತ ನಿಧಿ
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು
* ದೇವರು ಇದ್ದಾನೆಯೇ ?
* ಬಹುಪತ್ನಿತ್ವ
* ಸ್ತ್ರೀಯರ ಹಕ್ಕುಗಳನ್ನು ಮನ್ನಿಸಿದ ಪ್ರವಾದಿ
* ಯೇಸುಕ್ರಿಸ್ತ ಕಾಶ್ಮೀರದಲ್ಲಿ ಮೃತನಾಗಿರುವನೇ?
* ಆಹ್ಮದಿಯಾ ವಾರ್ತೆಗಳು
* ಸಂಪಾದಕರಿಗೆ ಪತ್ರ
* ಯೇಸುಕ್ರಿಸ್ತರು ಮೃತರಾದುದು ಎಲ್ಲಿ ?



## Ahmadiyya English Litrate

1. Islam - The Need of the Hour
2. Why I believe in Islam ?
3. Islam and Universal Brotherhood
4. Islamic Teachings on the Moral Condition of Man
5. The Contribution of Islam to the Solution of World Problems
6. Muhammad, the Kindred to Humanity
7. Muhammad, the Liberator of Women
8. Meaning of Khatamun Nabiyyin
9. A Rejoinder to the Qadiyanies A non Muslim Minority in Pakistan

**Will be sent free.**

Apply with 25 Paise stamp to:
**The Editor, Yugarashmi Kannada Quarterly,**
23/1008, Ansari Road, Bunder,
Mangalore-575 001.

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

| ಸಂಪುಟ: 4 | ಎಪ್ರಿಲ್-ಜೂನ್ 1978/ ಶಹಾದತ್-ಇಹ್‌ಸಾನ್ 1357 | ಸಂಚಿಕೆ: 1 |
|---|---|---|

## ಯುಗರಶ್ಮಿಯ ನಾಲ್ಕನೆಯ ವರುಷ

ಇದೀಗ "ಯುಗರಶ್ಮಿ" ತನ್ನ ನಾಲ್ಕನೆಯ ಕಿರಿಯ ಹೆಜ್ಜೆಯನ್ನಿಟ್ಟು ಮುಂದೊತ್ತುತ್ತಿದೆ. ಈ ಶುಭ ಮುಹೂರ್ತದಲ್ಲಿ ನಾವು ಪರಮಾತ್ಮನಿಗೆ ಸ್ತೋತ್ರಗಳನ್ನು ಸಲ್ಲಿಸುತ್ತಾ ಯುಗರಶ್ಮಿಯ ವಾಚಕರಿಗೂ ಅಭ್ಯುದಯಕಾಂಕ್ಷಿಗಳಿಗೂ ಶುಭಾಶಂಸನೆಗಳನ್ನು ಕೋರುತ್ತೇವೆ.

ಈಗಾಗಲೇ ಯುಗರಶ್ಮಿಯ ಪ್ರಸಾರಸಂಖ್ಯೆಯು ಮೊದಲಿನ ಇಮ್ಮಡಿಯಾಗಿ ವರ್ಧಿಸಿದೆ. ಇದು ವಾಚಕರು ಯುಗರಶ್ಮಿಗೆ ನೀಡಿದ ಸ್ವಾಗತ ಹಾಗೂ ತೋರಿದ ಆಸಕ್ತಿಯ ದ್ಯೋತಕವಾಗಿದೆ. ಕಳೆದ ಸಂಚಿಕೆಗಳಲ್ಲಿ ಯುಗರಶ್ಮಿ ಇಸ್ಲಾಮಿನ ಅಧ್ಯಾಪನೆಗಳ ಕುರಿತು, ಅಹ್ಮದಿಯಾ ವಿಶ್ವಾಸಾದರ್ಶಗಳ ಬಗ್ಗೆ ಹಾಗೂ ವಿವಿಧ ಮತಸ್ಥರೆಡೆಯಲ್ಲಿ ಮೈತ್ರಿಯನ್ನು ಸ್ಥಾಪಿಸಲಿಕ್ಕಾಗಿ ಲೇಖನಗಳನ್ನು ಪ್ರಕಟಿಸಿದೆ. ಇನ್ನು ಮುಂದೆಯೂ ಅದೇ ಗತಿಯಲ್ಲಿ ಸಾಗಲು ನಮಗೆ ಅತಿಯಾದ ಇಚ್ಛೆಯಿದೆ. ಅದಕ್ಕೆಲ್ಲಾ ವಾಚಕ ಮಹಾಶಯರ ಸಹಕಾರದ ಬಹಳ ಅಗತ್ಯವಿದೆ. ಅವರು ತಮ್ಮ ಹಿಂದಿನ ಬಾಕಿಯನ್ನೂ ಮುಂದಿನ ಚಂದಾವನ್ನೂ ಸಕಾಲದಲ್ಲಿ ಕಳುಹಿಸಿಕೊಟ್ಟು ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ಕೇಳಿಕೊಳ್ಳುತ್ತೇವೆ.

—ಸಂಪಾದಕ.

# ಖುರ್ ಆನ್ — ಅದ್ಭುತ ನಿಧಿ

ತಿಳಿದುಕೊಳ್ಳಿರಿ, ಇಂಡಿಯಾದವನಾಗಲಿ, ಇರಾನಿಯಾಗಲಿ, ಅಮೇರಿಕದವನಾಗಲಿ, ಇತರ ಜನವಿಭಾಗದ ಯಾರೇ ಯಾವುದೇ ಭಾಷೆಯನ್ನಾಡುವವನಾಗಲಿ, ಅವರೆಲ್ಲರಿಗೂ ವ್ಯಕ್ತಪಡಿಸಿ ತೋರಿಸಲು ಸಾಧ್ಯವಿರುವ, ಆ ಮೂಲಕ ಅವರನ್ನು ಪ್ರಜ್ಞಾವಂತರನ್ನಾಗಿ ಮಾಡಲೂ ಅವರ ತಪ್ಪಭಿಪ್ರಾಯಗಳನ್ನು ಖಂಡಿಸಲೂ ಸಾಧ್ಯವಿರುವ ಪವಿತ್ರ ಖುರ್ ಆನಿನ ಪ್ರತ್ಯಕ್ಷಾದ್ಭುತವೇನೆಂದರೆ, ಅದು ದಿವ್ಯಜ್ಞಾನಗಳ, ಆಧ್ಯಾತ್ಮಿಕ ಸತ್ಯಗಳ, ಸ್ವರ್ಗೀಯ ಶಾಸ್ತ್ರಗಳ ಮತ್ತು ಆತ್ಮಿಕ ತತ್ವಜ್ಞಾನಗಳ ಭಂಡಾರವೆಂಬುದೂ, ಮನುಷ್ಯ ಕುಲದ ಸದಾ ಕಾಲದ ಆವಶ್ಯಕತೆಗಳಿಗನುಸಾರವಾಗಿ ಅದರಲ್ಲಿ ಅವುಗಳನ್ನು ಕಾಣುತ್ತಿರಬಹುದೆಂಬುದೂ ಆಗಿದೆ. ಪವಿತ್ರ ಖುರ್-ಆನ್ ಅದರ ಅರ್ಥದಲ್ಲೂ ವ್ಯಾಖ್ಯಾನದಲ್ಲೂ, ಸೀಮಿತವೆಂದಾದರೆ ಅದೊಂದು ಪರಿಪೂರ್ಣವಾದ ದಿವ್ಯದ್ಭುತವೆಂದು ಪರಿಗಣಿಸಲಾಗುವುದಿಲ್ಲ. ಕೇವಲ ಪದಸೌಂದರ್ಯ ಮತ್ತು ಭಾಷಾಶುದ್ಧಿ ಮಾತ್ರ ಅತ್ಯದ್ಭುತಕರವೆಂದಾಗಿದ್ದರೆ ಸಹ ಅದನ್ನು ನಿರಕ್ಷರನಿಗೂ ಅಭಿಜ್ಞನಿಗೂ ಸಮಾನ ರೀತಿಯಲ್ಲಿಯೂ ಆಸ್ವಾದಿಸಲು ಸಾಧ್ಯವಾಗಲಾರದು. ಪವಿತ್ರ ಖುರ್ಆನಿನ ಅತ್ಯಂತ ದೊಡ್ಡ ಅದ್ಭುತವೇನೆಂದರೆ, ಅದರಲ್ಲಿ ಅಡಕವಾಗಿರುವ ಜ್ಞಾನನಿಧಿಗಳು ಅಕ್ಷಯವೆಂಬುದು. ಈ ದಿವ್ಯ ಅದ್ಭುತವನ್ನು ಕಾಣಲು ಸಾಧ್ಯವಾಗದವನು ಖುರ್ಆನಿನ ಯಥಾರ್ಥ ಜ್ಞಾನವನ್ನು ಗಳಿಸದವನಾಗಿದ್ದಾನೆ. ............................ವಿವಿಧ ಕಾಲಘಟ್ಟಗಳಲ್ಲಿ, ನಿರಂತರ ಬದಲಾಗುತ್ತಿರುವ ಲೋಕದಲ್ಲಿ ಉದ್ಭವಿಸುವ ಎಲ್ಲಾ ಸಂದೇಹಗಳಿಗೂ, ವಿಷಮ ಸಮಸ್ಯೆಗಳಿಗೂ ಪೂರ್ಣ ಪರಿಹಾರಗಳೂ, ಹೊಸತಾದ ತಿಳುವಳಿಕೆ ಮತ್ತು ನವೀನ ಸಂಶೋಧನೆಗಳನ್ನಾದರಿಸಿದ ಎಲ್ಲಾ ವಿಮರ್ಶೆಗಳಿಗೆ ಉತ್ತರಗಳೂ ಖುರ್ಆನಿನಲ್ಲಿ ಅಡಕವಾಗಿವೆ.

—ಹಜ್ರತ್ ಅಹ್ಮದ್
ಅಹ್ಮದಿಯಾ ಸಂಘಟನೆಯ ಸ್ಥಾಪಕರು.


ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಜ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

## ಮೈತ್ರಿ ಸಂದೇಶ

"........ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ.

"........ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ.

ಪುಟಗಳು: **48** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: The Editor, YUGARASHMI Kannada Quarterly,
23/1008, Ansari Road, Bunder, Mangalore-575 001.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ಒಳ್ಳೆಯ ನಡೆವಳಿಕೆ ಸತ್ಯ ವಿಶ್ವಾಸದ ಅರ್ಧಾಂಶವಾಗಿದೆ.

2. ನಡೆವಳಿಕೆಯಲ್ಲಿ ಅತ್ಯಂತ ಉತ್ತಮರು ನನಗೆ ನಿಮ್ಮ ಪೈಕಿ ಅತ್ಯಂತ ಇಷ್ಟವುಳ್ಳವರಾಗಿದ್ದಾರೆ.

3. ದೀರ್ಘದೃಷ್ಟಿಗಿಂತ ದೊಡ್ಡ ಜ್ಞಾನವಿಲ್ಲ; ಕೆಡುಕಿನಿಂದ ದೂರವಿರುವುದಕ್ಕಿಂತ ದೊಡ್ಡ ಭಕ್ತಿಯಿಲ್ಲ; ಒಳ್ಳೆಯ ನಡೆವಳಿಕೆಗಿಂತ ದೊಡ್ಡ ಓಳಿತಿಲ್ಲ.

4. ಸೌಮ್ಯವಾದ ಮಾತು ಒಂದು ದಾನವಾಗಿದೆ.

5. ಕೆಟ್ಟ ನಡೆವಳಿಕೆ ದುಷ್ಟಗುಣವಾಗಿದೆ.

6. ಎರಡು ದುರ್ಗುಣಗಳು ಒಬ್ಬ ಸತ್ಯ ವಿಶ್ವಾಸಿಯೊಂದಿಗೆ ಸೇರಲಿಕ್ಕಿಲ್ಲ; ಕೃಪಣತನ ಮತ್ತು ಕೆಟ್ಟ ನಡೆವಳಿಕೆ.

7. ಹೋರಾಟದಲ್ಲಾದರೂ ಸರಿ, ನೀವು ನಿಮ್ಮ ಸಹೋದರನ ಮುಖದ ಮೇಲೆ ಹೊಡೆಯದಿರಿ.

8, ನಿಮ್ಮ ಕೆಲಸದಾಳುವಿನೊಂದಿಗೆ ಕುಳಿತು ಆಹಾರ ಸೇವಿಸುವುದು ವಿನಯಾದರವಾಗಿದೆ.

9. ನಿಮ್ಮನ್ನು ನಂಬಿದವರೊಡನೆ ಪ್ರಾಮಾಣಿಕತೆಯನ್ನು ಪಾಲಿಸಿರಿ. ನಿಮ್ಮನ್ನು ಮೋಸಗೊಳಿಸಿದವನನ್ನು ಎಂದಿಗೂ ಮೋಸ ಮಾಡದಿರಿ.

10. ಸತ್ಯ ನಿಷ್ಠೆಯಿರುವವರು ಯಾರಾದರೂ ಎಲ್ಲಿದ್ದರೂ ನನಗೆ ಅತಿ ಹತ್ತಿರದವರು.

11. ಅಧಿಕಾರಯುತ ವ್ಯಕ್ತಿಯೂ ವಿದ್ಯಾವಂತನೂ ಬಹುಮಾನಿಸಲ್ಪಡಲು ಯೋಗ್ಯನು.

12. ತನ್ನ ಜನಾಂಗದೆಡೆಯಲ್ಲಿ ಗೌರವಿಸಲ್ಪಡುವ ವ್ಯಕ್ತಿ ನಿಮ್ಮನ್ನು ಸಂದರ್ಶಿಸುವಾಗ, ನೀವು ಆತನನ್ನು ಗೌರವದಿಂದ ಸ್ವಾಗತಿಸಿರಿ.


## ಅಹ್ಮದಿಯಾ ಸಂದೇಶ

ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ

ಗ್ರಂಥಕರ್ತ: ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್

ಪುಟ: **60** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: The Editor, YUGARASHI Kannada Quarterly,
23/1008, Ansari Road, Bunder, Mangalore-575001.

# ದೇವರು ಇದ್ದಾನೆಯೇ?

ಪ್ರೊಫೆಸರ್ ಹಬೀಬುಲ್ಲಾ ಖಾನ್, M.Sc.

ದೈವಾಸ್ತಿತ್ವ ಸರ್ವಮತಗಳ ಮೂಲವಾಗಿದೆ. ಮನುಷ್ಯ ಸಮುದಾಯದ ಒಳಿತಿಗಾಗಿರುವ ಸರ್ವವೂ ಭ್ರಮಣ ಮಾಡುತ್ತಿರುವುದು ಈ ಒಂದು ಅಕ್ಷದಲ್ಲಾಗಿದೆ. ಸತ್ಯಕ್ಕೂ ಜ್ಞಾನಕ್ಕೂ ಸಂಬಂಧಿಸಿದ ನಮ್ಮ ಪರೀಕ್ಷಣಗಳ ಆದಿಯೂ ಅವಸಾನವೂ ಅದೇ ಆಗಿದೆ. ಸೃಷ್ಟಿಕರ್ತನನ್ನು ಪತ್ತೆಹಚ್ಚುವುದು, ಅವನ ವಿಶಿಷ್ಟತೆಗಳನ್ನು ತಿಳಿಯುವುದು, ಅವನೊಡನೆ ಯಥಾರ್ಥ ಸಂಬಂಧವನ್ನು ಸ್ಥಾಪಿಸುವುದು ಎಂಬುದಕ್ಕಾಗಿ ನಾವು ಸೃಷ್ಟಿಸಲ್ಪಟ್ಟಿದ್ದೇವೆ. ಈ ಉದ್ದೇಶ ನಿರ್ವಹಣಕ್ಕಾಗಿ ಎಲ್ಲಾ ಕಾಲಗಳಲ್ಲಿ ಸಾವಿರಾರು ಪ್ರವಾದಿಗಳು ಲೋಕದ ವಿವಿಧ ಭಾಗಗಳಲ್ಲಿ ಅವತರಿಸಿದರು. ಅವರು ನಮಗೆ ಮಾರ್ಗದರ್ಶನ ನೀಡಿ ಹೇಗೆ ಉದ್ದೇಶಸಿದ್ಧಿಯನ್ನು ಗಳಿಸಲು ಸಾಧ್ಯವೆಂಬುದನ್ನು ತೋರಿಸಿಕೊಟ್ಟರು. ಮನುಷ್ಯನೂ ಮನುಷ್ಯನೂ ಪರಸ್ಪರ, ಮನುಷ್ಯನೂ ದೇವರೂ ಪರಸ್ಪರ, ಆಯಾಯ ಮಂಡಲಗಳಲ್ಲಿ ಸ್ನೇಹಬಂಧಗಳನ್ನೂ ಸೌಹಾರ್ದವನ್ನೂ ಸ್ಥಾಪಿಸುವರೆ ಪರಿಸ್ಥಿತಿಗಳು ಹಲವಾರು ಬಾರಿ ಪ್ರತಿಕೂಲವಾಗಿದ್ದರೂ ಸಹ ಅವರು ಜಯಗಳಿಸಿ, ಆ ಮೂಲಕ ಲೋಕದಲ್ಲಿ ಸಮಾಧಾನವೂ ಐಶ್ವರ್ಯವೂ ಪ್ರಾಪ್ತವಾಯಿತು. ಪ್ರವಾದಿಗಳು ದೇವರ ಸತ್ಯಸಂದೇಶ ವಾಹಕರೆಂಬುದಕ್ಕೂ ಕರುಣಾನಿಧಿಯೂ ದಯಾಳುವೂ ಆದ ಒಬ್ಬ ಸೃಷ್ಟಿಕರ್ತನಿದ್ದನೆಂಬುದಕ್ಕೂ ಇದು ಸ್ಪಷ್ಟ ಪುರಾವೆಯಾಗಿದೆ.

ಆದರೆ ನಿರ್ಭಾಗ್ಯವಶಾತ್, ದೈವವಿಶ್ವಾಸ ಬರೇ ಮಿಥ್ಯೆಯೆಂದು ಹೇಳುವ ಅನೇಕರು ಇದ್ದಾರೆ. ಪ್ರಕೃತಿ ನಿಯಮಗಳು ಲೋಕಗತಿಯನ್ನು ಕ್ರಮಪಡಿಸುತ್ತವೆಯೆಂದೂ ಲೋಕದ ಸಕಲ ಚಲನಗಳು ಅದಕ್ಕನುಸಾರವಾಗಿ ನಡೆಯುತ್ತವೆಯೆಂದೂ ಅವರು ಹೇಳುತ್ತಾರೆ.

ಇದು ಪಾಶ್ಚಾತ್ಯ ತತ್ವಚಿಂತನೆಯ ಸ್ವಾಧೀನ ವಲಯದಲ್ಲಿ ಸಿಲುಕಿದವರ ಅಭಿಪ್ರಾಯವಾಗಿದೆ. ಇದರ ಕುರಿತು ನಾವು ಹೆಚ್ಚಾಗಿ ಚರ್ಚಿಸುವ ಮೊದಲು ವಿರುದ್ಧ ಅಭಿಪ್ರಾಯಗಳ ಪೈಕಿ ಕೆಲವನ್ನು ಪರ್ಯಾಲೋಚಿಸೋಣ.

ದೇವರನ್ನು ನಂಬುವುದರ ಅಗತ್ಯವೇನು ? ಇದು ಸಾಮಾನ್ಯವಾಗಿ ಮೊತ್ತಮೊದಲಿಗೆ ಪ್ರಶ್ನಿಸಲ್ಪಡುವ ಒಂದು ಸವಾಲು. ದೇವರು ಇದ್ದಾನೆಯೇ ಇಲ್ಲವೇ ಎಂಬುದರ ಕುರಿತು ನಾವೇಕೆ ವಿವಾದ ಮಾಡುವುದು? ನಮಗೆ ಜೀವನ ನಡೆಸಲು ಬಹಳ ಕಷ್ಟಪಟ್ಟು ದುಡಿದು ಹಣವನ್ನು ಸಂಪಾದಿಸಲೇಬೇಕು ಎಂದಿರುವಾಗ ನಾವು ದೇವರನ್ನು ನಂಬಿದರೂ ನಿಷೇಧಿಸಿದರೂ ಅದರಲ್ಲೇನು ವ್ಯತ್ಯಾಸ?

ಮತ ವಿಶ್ವಾಸಿಗಳು ಮಾತ್ರವಲ್ಲ ಪಾಶ್ಚಾತ್ಯ ತತ್ವ ಚಿಂತಕರಲ್ಲಿ ಕೆಲವರು ಈ ಪ್ರಶ್ನೆಗಳಿಗೆ ಉತ್ತರ ನೀಡಿರುವರು. ಈ ತತ್ವಚಿಂತಕರ ಮನಸ್ಸಿನಲ್ಲಿ ದೇವರೊಡನೆ ಸಂಪೂರ್ಣ ತುಚ್ಛಭಾವ ತುಂಬಿಕೊಂಡಿದೆ. ಹಾಗಿದ್ದರೂ ಲೋಕದಲ್ಲಿ ಶಾಂತಿ ಸಮಾಧಾನಗಳನ್ನು ಪಾಲಿಸಲು ಸಹಕಾರಿಯಾಗುವುದರಿಂದ ದೈವ ವಿಶ್ವಾಸವನ್ನು ಬೆಂಬಲಿಸಬೇಕಾಗಿದೆ ಎಂದು ಅವರು ಹೇಳುತ್ತಾರೆ. ಹೆಚ್ಚಿನ ಜನರು ದುಷ್ಕರ್ಮಗಳನ್ನು ಮಾಡಲು ಹಿಂಜರಿಯುವುದು ದೇವರ ಮುಂದೆ ಅದಕ್ಕೆ ಉತ್ತರ ಹೇಳಬೇಕಾಗುವುದೆಂದು ಹೆದರಿಕೊಂಡೆಂದೂ, ಆದರೆ ಅವರ ಈ ಭಯಕ್ಕೆ ಅರ್ಥವಿಲ್ಲವೆಂದೂ ಈ ತತ್ವ ಚಿಂತಕರು ಭಾವಿಸಿಕೊಂಡಿದ್ದಾರೆ. ಹಾಗೆ ಈ ತತ್ವಚಿಂತಕರ ದೃಷ್ಟಿಯಲ್ಲಿ ದೈವ ವಿಶ್ವಾಸವೆಂಬುದು ಸತ್ಯವನ್ನು ಅಂಗೀಕರಿಸುವುದಲ್ಲ; ಬದಲಾಗಿ ಒಂದು ಆವಶ್ಯಕತೆಯ ಪೂರೈಕೆ ಮಾತ್ರವಾಗಿದೆ.

ಇದು ದಾರಿತಪ್ಪಿದ ಚಿಂತಾಗತಿಯೆಂಬುದು ಸ್ಪಷ್ಟ. ದೇವರು ಇಲ್ಲವೆಂದಾದರೆ ಜನರೊಡನೆ ಏಕೆ ಒಂದು ಸಂಕಲ್ಪ ದೇವರನ್ನು ನಂಬಲು ಹೇಳುವುದು? ಪಾಪವನ್ನು ಸುಳ್ಳು ಮತ್ತು ವಂಚನೆಯ ಮೂಲಕ ತಡೆಯುವುದೆಂಬುದೇ ಒಂದು ದೊಡ್ಡ ಪಾಪವಾಗಿದೆ. ಇದು ಬುದ್ಧಿ ಇರುವ ಯಾರಿಗೂ ತಿಳಿಯುವ ಸಂಗತಿಯಾಗಿದೆ.

ಈ ಪ್ರಶ್ನೆಗೆ ಸರಿಯಾದ ಉತ್ತರ ಇದಾಗಿದೆ: ನಾವು ದೇವರನ್ನು ನಂಬಬೇಕು, ಏಕೆಂದರೆ ದೇವರು ಇದ್ದಾನೆ ಎಂಬುದಕ್ಕಾಗಿದೆ. ಅವನ ಅಸ್ತಿತ್ವ ಯಥಾರ್ಥವೂ ಸತ್ಯವೂ ಆಗಿದೆ. ಆದುದರಿಂದ ಇತರ ಸತ್ಯಗಳಂತೆಯೇ ಇದನ್ನೂ

ಅಂಗೀಕರಿಸಬೇಕಾಗಿದೆ. ಎರಡು ಮತ್ತು ಎರಡು ನಾಲ್ಕೆಂದು ನಾವು ಹೇಳುವಾಗ ಹಾಗೆ ಹೇಳುವ ಅಗತ್ಯವೇನೆಂದು ಯಾರೂ ಪ್ರಶ್ನಿಸುವುದಿಲ್ಲ. ಅಗತ್ಯವಿದ್ದರೂ ಇಲ್ಲವಾದರೂ ಅದು ಸತ್ಯವಾದುದರಿಂದ ನಾವು ಅದನ್ನು ಒಪ್ಪುತ್ತೇವೆ. ಆದ್ಯಕಾಲದಲ್ಲಿ ಆಕಾಶದಲ್ಲಿರುವ ಗ್ರಹಗಳ ಚಲನೆಯ ಕುರಿತು ಜನರು ಸೂಕ್ಷ್ಮವಾಗಿ ನಿರೀಕ್ಷಿಸುತ್ತಿರುವಾಗ ಅಂತಹ ವಿಜ್ಞಾನದಿಂದ ಏನಾದರೂ ಪ್ರಯೋಜನವುಂಟಾದೀತೇ ಎಂದು ಅವರು ಚಿಂತಿಸಲಿಲ್ಲ. ಅವರ ಪರಮ ಲಕ್ಷ್ಯ ಸತ್ಯವನ್ನು ಗ್ರಹಿಸಿ ಯಥಾರ್ಥವನ್ನು ಕಂಡುಹಿಡಿಯುವುದು ಮಾತ್ರವಾಗಿತ್ತು.

ಇಲ್ಲಿ ಪ್ರಸ್ತುತ ಪ್ರಶ್ನೆಯೇ ನಿರರ್ಥಕವಾಗಿದೆ. ನಿಜವಾಗಿ ನೋಡಿದರೆ, ಮೊದಲಿಗೆ ನಾವು ದೇವರ ಕುರಿತು ಚಿಂತಿಸಲು ತೊಡಗುವುದಿಲ್ಲ. ದೇವರು ಪ್ರತಿಯೊಂದು ಕಾಲದಲ್ಲಿ ತನ್ನ ಸಂದೇಶವಾಹಕರನ್ನು ಕಳುಹಿಸಿ ಅವನ ಆಜ್ಞೆಗಳನ್ನು ನಾವು ಅನುಸರಿಸಬೇಕಾಗಿದೆಯೆಂದು ಇಚ್ಛಿಸುತ್ತಾನೆ. ತನ್ನ ಪ್ರವಾದಿಗಳಿಗೆ ಅವನು ಸಹಾಯಮಾಡುವ ಮಾರ್ಗ ಮತ್ತು ಅವರಿಗೆ ಅನುಕೂಲವಾಗಿ ಅವನು ತೋರಿಸಿಕೊಡುವ ಮಹತ್ತಾದ ಲಕ್ಷಣಗಳು ನಮ್ಮ ಸಂಪೂರ್ಣ ಶ್ರದ್ಧೆಯನ್ನು ಆ ವಿಷಯದ ಕಡೆಗೆ ಹರಿಯಿಸಬೇಕೆಂದು ಸ್ಪಷ್ಟಪಡಿಸುತ್ತವೆ. ಅದರ ಮೌಲ್ಯವೂ ಪ್ರಾಧಾನ್ಯವೂ ಶಂಕಿಸಲಿಕ್ಕೋ ಅವಗಣಿಸಲಿಕ್ಕೋ ತಕ್ಕುದ್ದಲ್ಲ.

ಕೆಲವರ ವಿಚಾರ ಹೀಗಿರುತ್ತದೆ: ಹೇವರಿದ್ದರೆ ಅವನನ್ನು ನಾವೇಕೆ ಕಾಣುವುದಿಲ್ಲ?

ಈ ಪ್ರಶ್ನೆಯನ್ನು ಕೇಳುವಾಗ ಅವರು ಮನುಷ್ಯನ ಕಣ್ಣುಗಳ ಪರಿಮಿತಿಯನ್ನು ಅವಗಣಿಸುತ್ತಾರೆ. ನಮ್ಮ ಕಣ್ಣುಗಳಿಗೆ ಒಂದು ನಿರ್ದಿಷ್ಟ ದೂರದಿಂದ ಮಾತ್ರವೇ ವಸ್ತುಗಳನ್ನು ನೋಡಿ ತಿಳಿಯುವರೆ ಸಾಧ್ಯವಿದೆ. ಈ ಕಾಗದವನ್ನು ನಾವು ಕಣ್ಣಿನ ಬಹಳ ಸಮೀಪ ನಮ್ಮ ಹಣೆಗೆ ತಾಗುವಂತೆ ಹಿಡಿದರೆ ನಮಗೆ ಅದರಲ್ಲೇನನ್ನೂ ಕಾಣಲು ಸಾಧ್ಯವಿಲ್ಲ. ಹಾಗೆಯೇ ಕಾಗದವನ್ನು ಎರಡು ಮೂರು ಗಜ ದೂರ ಹಿಡಿದರೂ ನಮಗೆ ಅದರಲ್ಲಿ ಬರೆದುದನ್ನು ಓದಲು ಸಾಧ್ಯವಾಗಲಿಕ್ಕಿಲ್ಲ. 'ಕಾಣು' ಎಂಬುದು ಒಂದು ವಸ್ತು ಇದೆ ಅಥವಾ ಇಲ್ಲ ಎಂಬುದಕ್ಕೆ ನಿದರ್ಶನವಲ್ಲ. ದೇವರು ಮನುಷ್ಯನ ಕಂಠನಾಳಕ್ಕಿಂತ ಸಮೀಪದಲ್ಲಿದ್ದಾನೆಂದು ಪವಿತ್ರ ಖುರ್‌ಆನ್ (50 : 17) ಹೇಳುತ್ತದೆ. ನಮ್ಮ ಬಹಳ ಸಮೀಪವುಳ್ಳದ್ದನ್ನು ನಮಗೆ ಕಣ್ಣುಗಳಿಂದ ಕಾಣಲು ಸಾಧ್ಯವಿಲ್ಲ.

ಹಾಗೆ, ಎಲ್ಲವನ್ನೂ ನೋಡಿ ತಿಳಿಯಲು ಸಾಧ್ಯವಿಲ್ಲ. ನಮ್ಮ ಪಂಚೇಂದ್ರಿಯಗಳಲ್ಲಿ ಇತರ ಇಂದ್ರಿಯಗಳನ್ನು ನಾವು ಅದಕ್ಕಾಗಿ ಉಪಯೋಗಿಸುತ್ತೇವೆ. ಗುಲಾಬಿ ಹೂವಿನ ಸುಗಂಧವನ್ನು ಕಣ್ಣಿನಿಂದ ಕಾಣಲು ಹಠ ಹಿಡಿಯುವವನು ಮೂರ್ಖನಾಗಿದ್ದಾನೆ. ಅಯಸ್ಕಾಂತ ಶಕ್ತಿ, ವಿದ್ಯುಚ್ಛಕ್ತಿ ಮೊದಲಾದವನ್ನು ಅವುಗಳ ಪ್ರವರ್ತನೆಗಳಿಂದ ಮಾತ್ರ ನಮಗೆ ತಿಳಿಯುವರೆ ಸಾಧ್ಯ. ಹಾಗೆ ಒಂದು ವಸ್ತುವಿನ ಇರುವಿಕೆ ಅಥವಾ ಇಲ್ಲದಿರುವಿಕೆಯನ್ನು ಅದರ ಗೋಚರಿಸುವಿಕೆಯಿಂದ ಮಾತ್ರ ತೀರ್ಮಾನಿಸಲು ಸಾಧ್ಯವಿಲ್ಲವೆಂದು ಸ್ಪಷ್ಟವಾಗುತ್ತದೆ. ವಿವಿಧ ವಸ್ತುಗಳ ಅಸ್ತಿ ಅಥವಾ ನಾಸ್ತಿಯನ್ನು ತಿಳಿಯಲಿಕ್ಕೂ ರುಜು ಪಡಿಸಲಿಕ್ಕೂ ವ್ಯತ್ಯಸ್ತ ಮಾರ್ಗಗಳಿವೆ.

ದೇವರನ್ನು ಕುರಿತು ಖುರ್‌ಆನ್ ಹೀಗೆ ಹೇಳುತ್ತದೆ: "ಕಣ್ಣುಗಳು ಅವನನ್ನು ತಲಪಲಾರವು. ಆದರೆ ಅವನು ಕಣ್ಣುಗಳನ್ನು ತಲಪುತ್ತಾನೆ. ಅವನು ಅತಿ ಸೂಕ್ಷ್ಮನೂ, ಸರ್ವವನ್ನು ಸೂಕ್ಷ್ಮವಾಗಿ ತಿಳಿಯುವವನೂ ಆಗಿರುವನು" (6:104). ದೇವರು ಉದ್ದೇಶಿಸುವ ಮಾರ್ಗ ಮೂಲಕ ಅವನು ನಿಶ್ಚಯಿಸುವ ಪ್ರತ್ಯೇಕ ರೀತಿಯಲ್ಲಿ ಸೃಷ್ಟಿಗಳಿಗೆ ಅನುಭವವಾಗುವುದರ ಹೊರತು ನಮ್ಮ ಇಂದ್ರಿಯಗಳ ಮೂಲಕ ಅವನನ್ನು ಕಾಣಲಿಕ್ಕೋ ಅವನ ಕುರಿತು ಸರಿಯಾಗಿ ಅರಿಯಲಿಕ್ಕೋ ಸಾಧ್ಯವಿಲ್ಲವೆಂದು ಇದರ ಅರ್ಥ. ಅವನ ಅಸ್ತಿತ್ವದ ಕುರಿತಿರುವ ಜ್ಞಾನವು ಅವನ ಮಾರ್ಗದರ್ಶನ ಮತ್ತು ಅನುಗ್ರಹದ ಸಹಾಯದ ಹೊರತು ಯಾರಿಗೂ ಲಭ್ಯವಲ್ಲ.

ಖುರ್‌ಆನಿನಲ್ಲಿ ಪರಮಾತ್ಮನು ಘೋಷಿಸುತ್ತಾನೆ: "ಒಬ್ಬ ಮುನ್ನೆಚ್ಚರಿಕೆಗಾರನು ನಿಯೋಗಿಸಲ್ಪಡದ ಯಾವುದೇ ಜನಾಂಗವಿಲ್ಲ" (35:25). ಇಸ್ಲಾಮಿಕ ಅಧ್ಯಾಪನೆಯನು ಸಾರ ದಿವ್ಯ ಸಂದೇಶವಾಹಕರು ಅಥವಾ ದೈವಿಕ ಪ್ರವಾದಿಗಳು ಎಲ್ಲಾ ರಾಜ್ಯದಲ್ಲೂ ಎಲ್ಲಾ ಜನತೆಯಲ್ಲೂ ಅವತರಿಸಿದ್ದರು. ಆ ಕಾರಣದಿಂದಲೇ, ಅತ್ಯಂತ ಪ್ರಾಕೃತರೂ ಅನಾಗರಿಕರೂ ಆಗಿರುವ ಜನರೆಡೆಯಲ್ಲಿ ಕೂಡ ದೇವರ ಕುರಿತು ಏನಾದರೂ ವಿಶ್ವಾಸಗಳು ಕಂಡುಬರುತ್ತವೆ. ನಿರೀಶ್ವರವಾದವನ್ನು ನ್ಯಾಯೀಕರಿಸಲು ಅನೇಕ ಲೇಖನಗಳನ್ನು ಬರೆದ ಸ್ಪೆನ್ಸರ್ ಸಹ ಹೀಗೆ ಹೇಳಬೇಕಾಯಿತು: "ಸಾರ್ವತ್ರಿಕವಾಗಿ ಅಂಗೀಕಾರ ಪಡೆದ ಯಾವುದೇ ನಿರರ್ಥವಾಗುವುದಿಲ್ಲ. ಯಾವಾಗಲೂ ಅದರಲ್ಲಿ ಸತ್ಯಾಂಶಗಳು ಸೇರಿಕೊಂಡಿರುತ್ತವೆ."

ಧರ್ಮಗಳಿಗೆದುರಾಗಿ ಕಮ್ಯುನಿಸ್ಟರ ಮತ್ತು ನಿರೀಶ್ವರವಾದಿಗಳ ನಿರಂತರ ಹಾಗೂ ಸುಶಕ್ತವಾದ ಪ್ರಚಾರವಿದ್ದು ಸಹ ಜನರ ಹೃದಯದಿಂದ ದೈವವಿಶ್ವಾಸವನ್ನು ಸಂಪೂರ್ಣವಾಗಿ ಹೋಗಲಾಡಿಸಲು ಸಾಧ್ಯವಾಗಲಿಲ್ಲ. ಕೆಲವು ಸಂದರ್ಭಗಳಲ್ಲಿ ಅವರ ದೈವ ವಿಶ್ವಾಸ ಹೊರಗೆ ಬಂದುಬಿಡುತ್ತದೆ.

ಪ್ರಖ್ಯಾತ ಸರ್ಜನ್ ಆಗಿರುವ ಓರ್ವ ಅಹ್ಮದಿ ಡಾಕ್ಟರ್ ಮಿರ್ ಮುಹಮ್ಮದ್ ಇಸ್ಮಾಯಿಲ್ ಒಂದು ಸಂಭವದ ಕುರಿತು ಹೇಳಿದ್ದರು: ಅವರ ಕ್ಲಾಸಿನಲ್ಲಿ ನಿರೀಶ್ವರವಾದಿಯಾದ ಒಬ್ಬ ಹಿಂದು ವಿದ್ಯಾರ್ಥಿ ಇದ್ದನು. ದೈವಾಸ್ತಿಕ್ಯದ ಕುರಿತು ಪ್ರಶ್ನಿಸುತ್ತಾ ವಿವಾದಗಳಲ್ಲಿ ಆತನು ಯಾವಾಗಲೂ ಆಸಕ್ತನಾಗಿರುತ್ತಿದ್ದನು. ಒಂದು ದಿನ ಅವರು ದೈವಾಸ್ತಿಕ್ಯದ ಕುರಿತು ಕ್ಲಾಸು ರೂಮಿನಲ್ಲಿ ಚರ್ಚೆ ಮಾಡುತ್ತಿರುವಾಗ ಒಂದು ಭೂಕಂಪ ಉಂಟಾಯಿತು. ಕೂಡಲೇ ಆ ನಿರೀಶ್ವರವಾದಿಯಾದ ವಿದ್ಯಾರ್ಥಿ 'ರಾಮ, ರಾಮ' ಎಂದು ಆರ್ತನಾದ ಮಾಡುತ್ತಾ ಕ್ಲಾಸುರೂಮಿನಿಂದ ಹೊರಗೆ ಹಾರಿದನು. 'ರಾಮ' ಎಂದು ಹಿಂದೂ ಜನರು ದೇವರನ್ನು ಉದ್ದೇಶಿಸಲ್ಲವೇ ಕರೆಯುವುದು ? ನಂತರ ಡಾಕ್ಟರ್,ಆ ವಿದ್ಯಾರ್ಥಿಯೊಡನೆ ನೀನೇಕೆ ದೇವರನ್ನು ಕರೆದು ಆರ್ತನಾದ ಮಾಡಿದ್ದು? ಎಂದು ಪ್ರಶ್ನಿಸಿದುದಕ್ಕೆ ತೃಪ್ತಿಕರವಾದ ಉತ್ತರನೀಡಲು ಆ ನಿರೀಶ್ವರತ್ವವನ್ನು ವಾದಿಸುವ ವಿದ್ಯಾರ್ಥಿಗೆ ಸಾಧ್ಯವಾಗಲಿಲ್ಲ.

ಹಾಗೆ, ಆಪತ್ಕಾಲದಲ್ಲಿ, ಮರಣ ಮುಂದೆ ಬಂದು ನಿಲ್ಲುವಾಗ ದೊಡ್ಡ ದೊಡ್ಡ ನಿರೀಶ್ವರವಾದಿಗಳು ಸಹ ಕೆಲವೊಮ್ಮೆ ದೇವರನ್ನು ಕೂಗಿ ಕರೆಯುತ್ತಾರೆ. ಅದು ಪ್ರಕೃತಿಯ ವೈಶಿಷ್ಟ್ಯವಾಗಿದೆ. ಅದನ್ನು ಯಾವಾಗಲೂ ಅದುಮಿಟ್ಟುಕೊಳ್ಳಲು ಸಾಧ್ಯವಾಗದು.

ಲೋಕದಲ್ಲಿರುವ ಎಲ್ಲಾ ರಾಷ್ಟ್ರಗಳಲ್ಲೂ ಗೋತ್ರಗಳಲ್ಲೂ ಇರುವ ಜನರು ಪರಸ್ಪರ ಕಾಣಲು ಸಂದರ್ಭ ಪೊದಗಿರಲಿಕ್ಕಿಲ್ಲ, ಆದರೂ ಅವರೆಲ್ಲರಲ್ಲೂ ಸ್ವಾಭಾವಿಕವಾಗಿ ದೈವ ವಿಶ್ವಾಸ ನೆಲೆಗೊಂಡಿರುವುದೇ ದೇವರಿದ್ದಾನೆ ಎಂಬುದಕ್ಕೂ, ನಾಗರಿಕರೋ, ಅನಾಗರಿಕರೋ ಎಂದು ನೋಡದೆ ದೇವರು ಸರ್ವ ಸಮುದಾಯದಲ್ಲೂ ಅವನ ಪ್ರಭಾವವನ್ನು ತೋರಿಸಿದ್ದಾನೆ ಎಂಬುದಕ್ಕೂ ಉತ್ತಮ ಸಾಕ್ಷ್ಯವಾಗಿದೆ. ವ್ಯತ್ಯಸ್ತ ಜನತೆಯಲ್ಲಿ ದೈವವಿಶ್ವಾಸ ವ್ಯತ್ಯಸ್ತ ರೀತಿಯಲ್ಲಿರಬಹುದು. ದೇವರ ಗುಣ ಮಹಾತ್ಮೆಗಳ ಕುರಿತು ಭಿನ್ನ ಭಿನ್ನ ಅಭಿಪ್ರಾಯಗಳಿರಬಹುದು. ಜನರು ನಂಬಬೇಕಾದದ್ದು ಏಕ ದೇವನನ್ನೋ ಬಹು ದೈವಗಳನ್ನೋ ಎಂಬುದು ಬೇರೊಂದು ಸಂಗತಿ. ಒಂದು ದಿವ್ಯ ಶಕ್ತಿಯ ಕುರಿತಿರುವ ವಿಶ್ವಾಸ ಸಾಮಾನ್ಯವಾಗಿ ಎಲ್ಲರಿಗೂ ಇದೆ. ಈ ನಂಬಿಕೆಯ ಸಾರ್ವತ್ರಿಕತೆಯೇ ದೇವರಿದ್ದಾನೆ ಎಂಬುದಕ್ಕೆ ಸ್ಪಷ್ಟ ಪುರಾವೆಯಾಗಿದೆ.

ಖುರ್‌ಆನಿನಲ್ಲಿ ಹೇಳಿದ ಈ ಸಂಗತಿಗೆ ಸಹ ಅದು ಸಾಕ್ಷ್ಯವಾಗಿದೆ: "ಒಬ್ಬ ಮುನ್ನೆಚ್ಚರಿಕೆಗಾರನು ಬಂದಿರದ ಯಾವುದೇ ಸಮುದಾಯವಿಲ್ಲ."

(Review of Religionsನಿಂದ)

READ

MINARET

ENGLISH QUARTERLY JOURNAL

Single Copy: Re. 1/- Annual Subscription: Rs. 4/-

Apply to: The Manager, Minaret Quarterly,
Ahmadiyya Building, West Silk Street, CALICUT-673001.

# ಬಹುಪತ್ನಿತ್ವ

● ಎನ್. ಅಬ್ದುರ್ರಹೀಮ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಬಹುಪತ್ನಿತ್ವಕ್ಕೂ ವಿವಾಹ ವಿಚ್ಛೇದನೆಗೂ ಪರಸ್ಪರ ಅಬೇಧ್ಯ ಬಂಧವಿದೆ. ವಿವಾಹ ವಿಚ್ಛೇದನವನ್ನು ಅಂಗೀಕರಿಸುವ ಒಂದು ಸಮಾಜವ್ಯವಸ್ಥೆಯಲ್ಲಿ ಬಹುಪತ್ನಿತ್ವಕ್ಕೆ ನಿಯಮಾನುಮತಿ ಇಲ್ಲದಿರುವುದು ವಿವೇಕಯುತವಲ್ಲವೆಂದು ತಿಳಿದುಕೊಳ್ಳಲು ಹೆಚ್ಚು ಚಿಂತಿಸುವ ಅಗತ್ಯವಿಲ್ಲ. ಹಾಗೆಯೇ, ಗಂಡನ ಮರಣದ ಕಾರಣದಿಂದ ನವಯೌವನದಲ್ಲೋ, ಪ್ರೌಢಾವಸ್ಥೆಯಲ್ಲೋ ವಿಧವೆಯರಾಗಬೇಕಾದ ಸ್ತ್ರೀಯರ ಪುನರ್ವಿವಾಹ ಸಹ ಒಂದು ಸಮಸ್ಯೆಯಾಗಿದೆ. ಕಾರಣವೇನೆಂದರೆ ಓರ್ವ ವಿಧವೆಯನ್ನು ಅಸಾಮಾನ್ಯವಾದ ತ್ಯಾಗಶೀಲವೂ ವಿನಯ ಬುದ್ಧಿಯೂ ಇಲ್ಲದೆ ಒಬ್ಬ ಯುವಕ ವರಿಸಲು ಸನ್ನದ್ಧನಾಗಲಿಕ್ಕಿಲ್ಲ. ಆ ವಿಧವೆ ಮಕ್ಕಳನ್ನು ಹೊಂದಿದ್ದರೆ, ಆ ಮಕ್ಕಳನ್ನು ಪೋಷಿಸುವ ಭಾರವನ್ನು ವಹಿಸುವರೆ ಧೈರ್ಯ ಪಡುವ ಎಷ್ಟು ಮಂದಿ ಇರುವರೆಂಬುದು ಸಹ ಚಿಂತಾರ್ಹವಾಗಿದೆ. ಆದ ಕಾರಣ ವಿವಾಹ ವಿಚ್ಛೇದನ ಮಾಡಲ್ಪಟ್ಟ ಸ್ತ್ರೀಯರು ಹೆಚ್ಚಾಗಿ ಪರಿತ್ಯಕ್ತೆಯರಾಗುವುದು ವಾಡಿಕೆ.

ಸಂಕ್ಷಿಪ್ತವಾಗಿ, ಒಬ್ಬ ಗಂಡಸಿಗೆ ಓರ್ವ ಪತ್ನಿ ಎಂಬ ನಿಯಮವನ್ನು ಕಡ್ಡಾಯ ಮಾಡುವುದಾದರೆ, ಸ್ತ್ರೀಯರು ವರ್ಧಿಸುವ ಸಂದರ್ಭದಲ್ಲಿ, ಅಧಿಕ ಸಂಖ್ಯೆಯ ಕಾರಣದಿಂದ ಬಾಕಿಯುಳಿಯುವ ಅವಿವಾಹಿತ ಕನ್ಯೆಯರಲ್ಲದೆ, ವಿವಾಹ ವಿಚ್ಛೇದನ ಮಾಡಲ್ಪಟ್ಟ ಮತ್ತು ವಿಧವೆಯರಾದ ಯುವತಿಯರೂ, ಮಧ್ಯ ವಯಸ್ಸಿನ ಸ್ತ್ರೀಯರೂ, ಅವರು ದೌರ್ಭಾಗ್ಯವಶಾತ್ ಸೌಂದರ್ಯವತಿಯರಲ್ಲವಾದರೆ ಪ್ರತ್ಯೇಕವಾಗಿ, ಜೀವಿತ ಕಾಲವೆಲ್ಲಾ ಗಂಡನ ಸ್ಪರ್ಶವಿಲ್ಲದೆ ದಿನ ಕಳೆಯಬೇಕಾಗುವುದು ಅಥವಾ ಅನಭಿಲಕ್ಷಣೀಯಕ್ಕೆ ಹೋಗಲೆಡೆಯುಂಟಾದೀತು. ಇದನ್ನು ಇಸ್ಲಾಂ ಕ್ಷಮಿಸುವುದಿಲ್ಲ. ಅನುಲ್ಲಂಘನೀಯವಾದ ಪ್ರಕೃತಿ ನಿಯಮಗಳ ಕಾರಣದಿಂದ ವೈಧವ್ಯ ಶಾಪಕ್ಕೆ ಗುರಿಯಾಗುವ ಅಂತಹ ದುರ್ಭಾಗ್ಯವತಿಯರನ್ನು ವರಿಸಿ ಒಂದು ಸಾಮಾಜಿಕ ಭಾಧ್ಯತೆಯೆಂಬಂತೆ ಬಹುಪತ್ನಿತ್ವದ ದೊಡ್ಡ ಭಾರವನ್ನು ಹೊರಲಿಕ್ಕೂ ಸಮುದಾಯದಲ್ಲಿರುವ ಸಾಮರ್ಥ್ಯವಂತರು— ಆರೋಗ್ಯ, ಧೃಢ ಮನಸ್ಸು ಮತ್ತು ಐಶ್ವರ್ಯವುಳ್ಳ ಪುರುಷರು–ಸಿದ್ಧರಾಗಿರಬೇಕೆಂದು ಇಸ್ಲಾಂ ಉಪದೇಶಿಸುತ್ತದೆ. ವ್ಯಭಿಚಾರವನ್ನು ಯಾವುದೇ ಸಂದರ್ಭದಲ್ಲೂ ಅಂಗೀಕರಿಸಲು ತಯಾರಿಲ್ಲದ ಒಂದು ಸಮುದಾಯದಲ್ಲಿ, "ವ್ಯಭಿಚಾರವನ್ನು ಸಮೀಪಿಸದಿರಿ" ಎಂಬ ಶಾಸನಕ್ಕೆ ವಿಧೇಯರಾಗಿ ಜೀವಿಸಲು ನಿರ್ಬಂಧಿತರಾದ ಒಂದು ಜನಾಂಗದಲ್ಲಿ, ವ್ಯಭಿಚಾರವನ್ನು ತೊಲಗಿಸಲು ಆತ್ಮಾರ್ಥವಾಗಿ ಯತ್ನಿಸುವವರಿಗೆ, ಮೇಲಿನ ಸಂದರ್ಭಗಳಲ್ಲಿ, ಒಬ್ಬಳಿಗಿಂತ ಹೆಚ್ಚಿನ ಸ್ತ್ರೀಯರನ್ನು ವಿವಾಹ ಮಾಡಿಕೊಳ್ಳುವರೆ ಪುರುಷರಿಗೆ ಅನುಮತಿಯನ್ನೀಯುವುದೆಂಬ ಒಂದೇ ಒಂದು ದಾರಿಯಲ್ಲದೆ ಬೇರೇನನ್ನೂ ನಿರ್ದೇಶಿಸಲು ಸಾಧ್ಯವಿಲ್ಲವೆಂದು ಯಾರಿಗೆ ತಿಳಿದಿಲ್ಲ? ಬೇರೊಂದು ಪರಿಹಾರವನ್ನು ಸೂಚಿಸುವ ತನಕ ಬಹುಪತ್ನಿತ್ವಕ್ಕೆ ವಿರುದ್ಧವಾಗಿ ಶಬ್ದವೆತ್ತಲು ಯಾರಿಗೂ ಅವಕಾಶವಿಲ್ಲ. ಪರಿಹಾರ ಮಾರ್ಗಗಳು ಸೂಚಿಸಲ್ಪಟ್ಟರೆ ನಮಗೆ ಅದರ ಪ್ರಾಯೋಗಿಕತೆಯ ಕುರಿತು ಪರ್ಯಾಲೋಚಿಸಬಹುದು. ಅದರ ನಂತರ ಬಹುಪತ್ನಿತ್ವದ ಕೆಡುಕುಗಳ ಕುರಿತು ಚರ್ಚಿಸಬಹುದು. ಅದಕ್ಕೆ ತಯಾರಿಲ್ಲದೆ, ಅದು ಸಾಧ್ಯವಿಲ್ಲದೆ ಇರುವಾಗ ಬಹುಪತ್ನಿತ್ವವನ್ನು ಆಕ್ಷೇಪಿಸುವುದು ವಿವೇಕಯುತವಾಗುವುದು ಹೇಗೆ? ಅದನ್ನು ಆಕ್ಷೇಪಿಸುವವರು ಸ್ತ್ರೀಯರೊಡನೆ ದಾಕ್ಷಿಣ್ಯವಿಲ್ಲದವರೂ ವ್ಯಭಿಚಾರವನ್ನು ಅಂಗೀಕರಿಸಲು ವೈಮನಸ್ಯವಿಲ್ಲದವರೂ ಆಗಿದ್ದಾರೆಂದು ಬಹಿರಂಗವಾಗಿ ತಪ್ಪು ಹೊರಿಸಲು ನಾನು ಧೈರ್ಯಪಡುತ್ತೇನೆ.

**ಪುತ್ರಲಾಭೇಚ್ಛೆ**

ತನಗೆ ಒಬ್ಬ ಪುತ್ರನು ಜನಿಸಿ ಕಾಣಬೇಕೆಂದು ಇಚ್ಛಿಸದವರಿರಲಿಕ್ಕಿಲ್ಲ. ಪುತ್ರಲಾಭಾರ್ಥ ಎಂತಹ ತ್ಯಾಗವನ್ನೂ

ಸಹಿಸಲು ಹಿಂಜರಿಯದವರಿದ್ದಾರೆ. ತಮ್ಮ ಗ್ರಹಚಾರವೆಂದು ತಿಳಿದುಕೊಂಡು ಒಬ್ಬಳೇ ಪತ್ನಿಯಲ್ಲಿ ತೃಪ್ತಿಹೊಂದಿ ಜೀವಿಸುವವರು ಅನೇಕರಿದ್ದರೂ ಈ ಒಂದು ಕಾರಣವನ್ನೇ ಮುಂದಿಟ್ಟು ಬಹುಪತ್ನಿತ್ವವನ್ನು ಸ್ವೀಕರಿಸುವಂತಹ ಮಹಾತ್ಯಾಗವನ್ನು ಅನುಭವಿಸಲು ತಯಾರಾಗಿರುವ ಲಕ್ಷಗಟ್ಟಲೆ ಜನರು ಈ ಲೋಕದಲ್ಲಿದ್ದಾರೆ. ಒಂದು ಗಂಡು ಮಗುವನ್ನು ಪಡೆಯಲು ಇಚ್ಛಿಸಿದ ಇರಾನಿನ ಷಾ ಮೊದಲಿಗೆ ಫೌಜಿಯಾಳನ್ನೂ ಆ ಬಳಿಕ ಸುರಯ್ಯಾಳನ್ನೂ ವಿವಾಹ ವಿಚ್ಛೇದನ ಮಾಡಿದರು. ಇರಾನಿನ ಸಿಂಹಾಸನದ ಉತ್ತರಾಧಿಕಾರಿಯಾಗಲು ಒಂದು ಗಂಡು ಮಗು ತನಗೆ ಹುಟ್ಟಿ ಕಾಣಬೇಕೆಂದು ಷಾ ಇಚ್ಛಿಸಿದಾಗ ಇಬ್ಬರು ಸ್ತ್ರೀಯರು ಗಂಡನಿಂದ ವಿಚ್ಛೇದನವನ್ನು ಪಡೆಯಬೇಕಾಯಿತು. ಸ್ತ್ರೀಯರನ್ನು ಹಾಗೆ ಅಪಮಾನಿಸಬೇಕೆಂದಿಲ್ಲವೆಂದು ಇಸ್ಲಾಂ ಕಲಿಸುತ್ತದೆ. ಇಸ್ಲಾಂ ಮತ ತತ್ವಗಳನ್ನು ಅನುಸರಿಸಲು ಷಾ ಸಿದ್ಧರಾಗಿದ್ದರೆ ಆ ಸ್ತ್ರೀಯರನ್ನು ಉಪೇಕ್ಷಿಸದೆಯೇ ಅವರಿಗೆ ತನ್ನ ಭಾಗ್ಯವನ್ನು ಪರೀಕ್ಷಿಸಬಹುದಿತ್ತು. ತನ್ನಲ್ಲಿ ಅರ್ಪಿತವಾದ ರಾಷ್ಟ್ರವ್ಯಾಪಕವಾದ ಜವಾಬ್ದಾರಿಕೆಗಳನ್ನು ನಿರ್ವಹಿಸಲಿಕ್ಕೆ ಸಾಧ್ಯವಾಗುವಂತೆಯೂ, ಪುತ್ರಸಿದ್ಧಿಗಾಗಿರುವ ಅಪ್ರತಿಹತ ಅಭಿಲಾಷೆಯ ಕಾರಣದಿಂದಲೂ ಬಹುಪತ್ನಿತ್ವವನ್ನು ಸ್ವೀಕರಿಸಬೇಕಾದ ಸಂದರ್ಭಗಳು ಒಬ್ಬ ರಾಷ್ಟ್ರನಾಯಕನ ಜೀವಿತದಲ್ಲುಂಟಾಗಬಹುದು. ಸಾಮಾನ್ಯನನ್ನು ಸಂಬಂಧಿಸಿಯೂ ಪುತ್ರಮೋಹ ವ್ಯಕ್ತಿಜೀವಿತವನ್ನೂ ಕುಟುಂಬಜೀವಿತವನ್ನೂ ಅಡಿಮೇಲು ಮಾಡುವ ಸಂದರ್ಭಗಳುಂಟಾಗುತ್ತವೆ. ಅಂತಹ ಪರಿಸ್ಥಿತಿಯಲ್ಲಿ ವಿವಾಹ ವಿಚ್ಛೇದನ ಮಾಡುವುದು ಅಥವಾ ಇನ್ನೋರ್ವ ಪತ್ನಿಯನ್ನು ವರಿಸಬೇಕಾದ ಸಂದರ್ಭವುಂಟಾಗುತ್ತದೆ.

## ಬಹುಪತ್ನಿತ್ವ ಇತರ ಮತಗಳಲ್ಲಿ

ಇಸ್ಲಾಮಿನ ಒಂದು ಕೊರತೆಯೆಂದು ಚಿತ್ರೀಕರಿಸಲ್ಪಡುವ ಬಹುಪತ್ನಿತ್ವ ಇಸ್ಲಾಮ್ ಧರ್ಮದಲ್ಲಿ ಮಾತ್ರ ಅಂಗೀಕರಿಸಲ್ಪಟ್ಟದ್ದೋ ಅಥವಾ ಪೂರ್ವಿಕ ಮತಗಳಲ್ಲಿ ಸಹ ಅದಕ್ಕೆ ಅಂಗೀಕಾರವಿದೆಯೋ ಎಂದು ನಾವು ಪರಿಶೋಧಿಸಬೇಕಾಗಿದೆ.

ಅತ್ಯಂತ ಸಾತ್ವಿಕತೆಯಿಂದ ಶೋಭಿಸಿದವರೂ ಚಾರಿತ್ರ್ಯದ ಬಾಹುಳ್ಯವನ್ನು ಹೊಂದಿದವರೂ ಮತಾಚಾರ್ಯರೂ ಆದ ಎಷ್ಟೋ ಮಹಾಪುರುಷರು ಮತ್ತು ಮಹಾತ್ಮರು ಬಹುಪತ್ನಿತ್ವವನ್ನು ಕೈಗೊಂಡಿದ್ದರೆಂದು ಲೋಕಚರಿತ್ರೆಯೂ ಮತಚರಿತ್ರೆಗಳೂ ಕಲಿಸುತ್ತವೆ. ಮುಹಮ್ಮದ್ ಪೈಗಂಬರರ ಕಾಲಕ್ಕೆ ಮೊದಲಿದ್ದ ಎಲ್ಲಾ ಪ್ರಧಾನ ಮತಗಳಲ್ಲೂ ಬಹುಪತ್ನಿತ್ವಕ್ಕೆ ಸಮ್ಮತಿ ಇದೆ.

ಹಿಂದೂಮತದಲ್ಲೂ, ಯಹೂದ್ಯ ಮತದಲ್ಲೂ ಕ್ರೈಸ್ತಮತದಲ್ಲೂ ಬಹುಪತ್ನಿತ್ವವು ಅಂಗೀಕರಿಸಲ್ಪಟ್ಟಿರುತ್ತದೆ. ಇಸ್ಲಾಮಿನ ಮುಖಕ್ಕೆ ಮಸಿಬಳಿದು ತೋರಿಸಲಿಕ್ಕಾಗಿ ಮಾತ್ರ ಇಸ್ಲಾಮಿನ ವಿರೋಧಿಗಳು ಮಾಡುವ ಪ್ರಚಾರದ ಕಾರಣದಿಂದ ಬಹುಪತ್ನಿತ್ವ ಅತಿ ನಿಂದ್ಯವಾದ ಒಂದು ಏರ್ಪಾಡೆಂದು ಚಿತ್ರೀಕರಿಸಲ್ಪಡುತ್ತಿದೆ. ಹಿಂದಿನ ಕಾಲಗಳಲ್ಲಿ ಹಿಂದುಮತದಲ್ಲೂ ಕ್ರೈಸ್ತಮತದಲ್ಲೂ ಬಹುಪತ್ನಿತ್ವ ನೀಚಮಟ್ಟದಲ್ಲಲ್ಲ, ಉಚ್ಛಮಟ್ಟದಲ್ಲಿ ಪರಿಗಣಿಸಲ್ಪಡುತ್ತಿತ್ತೆಂದು ಕಾಣಬಹುದು. ವ್ಯಭಿಚಾರವನ್ನು ತಡೆಯಲಿಕ್ಕಿರುವ ಒಂದು ಮಾರ್ಗವೆಂಬಂತೆ ಬಹುಪತ್ನಿತ್ವವು ಅಂಗೀಕರಿಸಲ್ಪಟ್ಟಿತ್ತು.

## ಬಹುಪತ್ನಿತ್ವ ಹಿಂದೂಮತದಲ್ಲಿ

ಹಿಂದೂಧರ್ಮವೂ ಇತಿಹಾಸವೂ ಬಹುಪತ್ನಿತ್ವದ ಕುರಿತು ಏನು ಹೇಳುತ್ತದೆಯೆಂದು ನೋಡೋಣ. ಹಿಂದೂಮತದ ಮೂಲಾಧಾರ ವೇದಗಳಾಗಿವೆಯೆಂದು ಹಿಂದೂಗಳು ಸಮ್ಮತಿಸುತ್ತಾರೆ. ಮಹಾ ಪಂಡಿತರಾದ ಸರ್ದಾರ್ ಕೆ. ಎಂ. ಪಣಿಕ್ಕರ್ ವಳ್ಳತ್ತೋಳ್‌ರವರ ಋಗ್ವೇದ ಭಾಷಾಂತರಕ್ಕೆ ಬರೆದ ಮುನ್ನುಡಿಯಲ್ಲಿ ವೇದಪಾಠಗಳನ್ನು ಸೂಚಿಸುತ್ತಾ ಈ ರೀತಿ ಪ್ರಸ್ತಾವಿಸಿರುವರು. "ವೈದಿಕ ಕಾಲದಲ್ಲಿ ಬಹುಪತ್ನಿತ್ವ ನಿಷಿದ್ಧವಾಗಿರಲಿಲ್ಲ. ಸಪತ್ನೀ ಮರ್ದನಕ್ಕಾಗಿರುವ ಒಂದು ಮಂತ್ರ (X-11-17) ಹತ್ತನೆಯ ಮಂಡಲದಲ್ಲಿದೆ. ಸವತಿಯೊಡನೆ ಗಂಡನಿಗಿರುವ ಪ್ರೇಮವನ್ನು ನಾಶಪಡಿಸಿ ತನ್ನಲ್ಲಿ ಪ್ರೀತಿಯುಂಟಾಗುವಂತೆ ಮಾಡಲಿಕ್ಕಾಗಿದೆ ಆ ಪ್ರಾರ್ಥನೆ. ಆ ಮಂತ್ರದ ಋಷಿ ಬಹುಪತ್ನಿಯರನ್ನು ಹೊಂದಿರುವ ಇಂದ್ರನ ಪತ್ನಿಯಾದ ಇಂದ್ರಾಣಿಯಾಗಿದ್ದಾಳೆ. ವಿವಾಹವು ಒಂದು ಅವಶ್ಯ ಕರ್ತವ್ಯವಾಗಿತ್ತು. ವಿಧವಾ ವಿವಾಹ ನಿಷಿದ್ಧವಾಗಿತ್ತು".

ಇನ್ನೊಂದು ಅತಿ ಪ್ರಧಾನ ಹೈಂದವ ಪ್ರಮಾಣ ಗ್ರಂಥವಾದ 'ಮನುಸ್ಮೃತಿ'ಯಲ್ಲಿ ಈ ರೀತಿ ಹೇಳಲಾಗಿದೆ:

ಮದ್ಯಪಾ ಸಾಧುವೃತ್ತಾ ಚ ಪ್ರತಿಕೂಲಾ ಚಯಾ ಭವೇತ್ ।

ವ್ಯಾಧಿತಾ ವಾಧಿವೇತ್ತವ್ಯಾ ಹಿಂಸ್ರಾರ್ಥಘ್ನೀ ಚ ಸವ ದಾ ॥

ಹೆಂಡತಿ ಮದ್ಯಪಾನಿ, ದುಃಶೀಲೆ, ವಿರುದ್ಧವರ್ತನೆಯವಳು, ರೋಗವುಳ್ಳವಳು, ಕ್ರೂರ ಸ್ವಭಾವದವಳು, ದುರ್ವ್ಯಯ ಮಾಡುವವಳು ಆಗಿದ್ದರೆ ಎರಡನೆಯ ವಿವಾಹ ಮಾಡಬಹುದು. (ಅಧ್ಯಾಯ 9, ಶ್ಲೋಕ 80).

ವಂಧ್ಯಾಷ್ಟಮೇಧಿ ಪೇದ್ಯಾಬ್ದೇ ದಶಮೇ ತು ಮೃತ ಪ್ರಜಾ ।

ಏಕಾದಶೇ ಸ್ತ್ರೀಜನನೀ ಸದ್ಯಾಸ್ತ್ವಪ್ರಿಯವಾದಿನೀ॥

ಪತ್ನಿ ಗರ್ಭಿಣಿಯಾಗದವಳಾಗಿದ್ದರೆ ಎಂಟು ವರ್ಷಗಳ ನಂತರ, ಹುಟ್ಟಿ ಸಾಯುವ ಮಕ್ಕಳನ್ನು ಹೆರುವವಳಾಗಿದ್ದರೆ ಹನ್ನೊಂದು ವರ್ಷಗಳ ಬಳಿಕ, ಹೆಣ್ಣು ಹೆರುವವಳಾಗಿದ್ದರೆ ಹನ್ನೊಂದು ವರ್ಷಗಳ ಶೇಷ, ವಿರುದ್ಧ ಮಾತಾಡುವ ಒರಟು ವಚನದವಳಾಗಿದ್ದರೆ ಕೂಡಲೇ, ಬೇರೆ ಮದುವೆಯಾಗಬೇಕು. (ಅಧ್ಯಾಯ 9, ಶ್ಲೋಕ 81)

ಹಿಂದೂ ಮತದಲ್ಲಿ ಒಬ್ಬಳು ಹೆಂಡತಿ ಇರುವಾಗ ಬೇರೆಯೂ ಹೆಂಡಂದಿರನ್ನು ವರಿಸುವ ಅಧಿವೇದನ ಎಂಬ ಸಂಪ್ರದಾಯದ ಕುರಿತು 'ಮನುಸ್ಮೃತಿ'ಯಲ್ಲಿ ಮೇಲಿನಂತೆ ಹೇಳಲಾಗಿದೆ.

ಧರ್ಮಾತ್ಮನಾದ ಶ್ರೀ ಕೃಷ್ಣ ಎಂಟು ಮಂದಿ ಪತ್ನಿಯರನ್ನು ಹೊಂದಿದ್ದರು. ರುಕ್ಮಿಣಿ, ಸತ್ಯ, ಜಾಂಜವತಿ, ಸತ್ಯಭಾಮ, ಕಾಳಿಂದಿ, ಲಕ್ಷ್ಮಣ, ಮಿತ್ರಾವಿಂಡ, ಭದ್ರ (ಶ್ರೀ ಮದ್ಭಾಗವತ: ಸ್ಕಂದ 10, ಅಧ್ಯಾಯ 61). ಮಹರ್ಷಿ ಯಾಜ್ಞವಲ್ಕ್ಯನಿಗೆ ಮೈತ್ರೇಯಾ ಮತ್ತು ಕಾತ್ಯಾಯಿನಿ ಎಂಬೀರ್ವ ಪತ್ನಿಯರಿದ್ದರು. (ಶತಪಥಬ್ರಾಹ್ಮಣಂ 146ನೇ ಕಾಂಡ). ಮಹಾತ್ಮ ಶ್ರೀ ರಾಮಚಂದ್ರರ ತಂದೆಯಾದ ದಶರಥರಿಗೆ ನಾಲ್ವರು ಹೆಂಡಂದಿರಿದ್ದರು.

## ಬಹುಪತ್ನಿತ್ವ ಬೈಬಲಿನಲ್ಲಿ

ಯಹೂದ್ಯ ಮತದ ಮತ್ತು ಕ್ರೈಸ್ತ ಮತದ ಮಹಾಪುರುಷರಲ್ಲಿ ಹಲವರು ಬಹುಪತ್ನಿತ್ವವನ್ನು ಸ್ವೀಕರಿದ್ದರು. ಅಬ್ರಹಾಮ್ ಮೊದಲಾದ ಪ್ರವಾದಿಗಳು ಒಬ್ಬಳಿಗಿಂತ ಹೆಚ್ಚು ಪತ್ನಿಯರನ್ನು ಹೊಂದಿದ್ದರು. ಬೈಬಲಿನ ಹಲವೆಡೆಗಳಲ್ಲಿ ಅದರ ಪ್ರಸ್ತಾವನೆಗಳನ್ನು ಕಾಣಬಹುದು.

1. "ಲೆಮೆಕನು ಆದಾ ಚಿಲ್ಲಾ ಎಂಬ ಇಬ್ಬರು ಹೆಂಡರನ್ನು ಮಾಡಿಕೊಂಡನು." (ಆದಿಕಾಂಡ 4: 19)

2. ಯಾವನಾದರೂ ಇಬ್ಬರು ಹೆಂಡತಿಯರನ್ನು ಮಾಡಿಕೊಂಡು ಅವರಲ್ಲಿ ಒಬ್ಬಳನ್ನು ಪ್ರೀತಿಸಿ ಮತ್ತೊಬ್ಬಳನ್ನು ತಿರಸ್ಕರಿಸುವ ಸಂದರ್ಭದಲ್ಲಿ ಅವರಿಬ್ಬರೂ ಅವನಿಂದ ಮಕ್ಕಳನ್ನು ಪಡೆದವರಾಗಿರಲಾಗಿ ಚೊಚ್ಚಲು ಮಗನು ತಿರಸ್ಕರಿಸಲ್ಪಟ್ಟವಳಲ್ಲಿಯೇ ಹುಟ್ಟಿದ ಪಕ್ಷಕ್ಕೆ ತಂದೆಯು ತನ್ನ ಆಸ್ತಿಯನ್ನು ಮಕ್ಕಳಿಗೆ ಸ್ವಾಸ್ತ್ಯವಾಗಿ ಕೊಡುವಾಗ ಆ ತಿರಸ್ಕರಿಸಲ್ಪಟ್ಟವಳ ಮಗನನ್ನು ತಳ್ಳಿಬಿಟ್ಟು ಪ್ರೀತಿಯ ಹೆಂಡತಿಯ ಮಗನನ್ನೇ ಚೊಚ್ಚಲವನೆಂದು ಭಾವಿಸ ಕೂಡದು. ತಿರಸ್ಕರಿಸಲ್ಪಟ್ಟವಳ ಮಗನೇ ಚೊಚ್ಚಲವನೆಂದು ಒಪ್ಪಿ ಅವನಿಗೆ ಎಂಟು ಭಾಗಗಳನ್ನು ಕೊಡಬೇಕು. ಅವನೇ ತಂದೆಯ ವೀರ್ಯಕ್ಕೆ ಪ್ರಥಮ ಫಲವೂ ಚೊಚ್ಚಲುತನದ ಹಕ್ಕಿಗೆ ಬಾಧ್ಯನೂ ಆಗಿದ್ದಾನಲ್ಲಾ" (ಧರ್ಮೋಪದೇಶ ಕಾಂಡ 21: 15–17)

3. ಯೆಹೋವನ ದೂತನು ಪ್ರತ್ಯಕ್ಷನಾದ "ಗಿದ್ಯೋನನಿಗೆ ಅನೇಕ ಮಂದಿ ಹೆಂಡತಿಯರಿದ್ದರಿಂದ ಅವನಿಗೆ ಎಪ್ಪತ್ತು ಮಂದಿ ಗಂಡು ಮಕ್ಕಳು ಹುಟ್ಟಿದರು." (ನ್ಯಾಯಸ್ಥಾಪಕರು 8 : 30)

4. ಸದ್‌ವೃತ್ತನೂ ಸಾತ್ವಿಕನೂ ಆಗಿದ್ದ "ಎಲ್ಕಾನನಿಗೆ ಹನ್ನಳು, ಪೆನಿನ್ನಳು ಎಂಬ ಇಬ್ಬರು ಹೆಂಡತಿಯರಿದ್ದರು. ಪೆನಿನ್ನಳಿಗೆ ಮಕ್ಕಳಿದ್ದರು; ಹನ್ನಳಿಗೆ ಇರಲಿಲ್ಲ." (I ಸಮುವೇಲನು, 1:2)

5. "ದಾವೀದನ ಹೆಂಡತಿಯರಾಗಿರುವ ಇಜ್ರೇಲ್ಯಳಾದ ಅಹೀನೋವಮಳೂ ಕರ್ಮೆಲ್ಯನಾದ ನಾಬಾಲನ ಹೆಂಡತಿಯಾಗಿದ್ದ ಅಬೀಗೈಲಳೂ ಅವನ ಸಂಗಡ ಇದ್ದರು" (I ಸಮುವೇಲನು, 27 : 3)

6. ಸೊಲೊಮೋನನಿಗೆ ಅನೇಕ ಸತಿಯರಿದ್ದರು. (I ಅರಸುಗಳು, ಅಧ್ಯಾಯ 11 ಮತ್ತು 20)

# ಸ್ತ್ರೀಯರ ಹಕ್ಕುಗಳನ್ನು ಮನ್ನಿಸಿದ ಪ್ರವಾದಿ

● ಮಿರ್ಝಾ ಬಶೀರುದ್ದೀನ್ ಮುಹಮ್ಮೂದ್ ಅಹ್ಮದ್.

ಸಮಾಜದಲ್ಲಿ ಸ್ತ್ರೀಯರ ಸ್ಥಾನವನ್ನು ಉನ್ನತಗೊಳಿಸ ಲಿಕ್ಕೂ ಅವರಿಗೆ ಉತ್ತಮ ಪದವಿ ಲಭಿಸುವಂತೆಯೂ, ಅವರೊಡನೆ ನೀತಿಯುತವಾದ ಒಳ್ಳೆಯ ನಡೆವಳಿಕೆ ತೋರಿ ಸುವಂತೆಯೂ ಮಾಡಲಿಕ್ಕೆ ಮುಹಮ್ಮದ್ ಪೈಗಂಬರ್ (ಸ) ಬದ್ಧಕಂಕಣರಾಗಿದ್ದರು. ಸ್ತ್ರೀಯರಿಗೆ ಸೊತ್ತಿನಲ್ಲಿ ಉತ್ತರಾಧಿಕಾರವನ್ನು ಅನುಗ್ರಹಿಸಿದ ಮೊದಲನೆಯ ಮತ ಇಸ್ಲಾಂ ಆಗಿದೆ. ಮಾತಾಪಿತರ ಸೊತ್ತಿನಲ್ಲಿ ಪುತ್ರರೊಂದಿಗೆ, ಪುತ್ರಿಯರಿಗೂ ಖುರ್‌ಆನ್ ಹಕ್ಕನ್ನು ನೀಡಿರುತ್ತದೆ. ಇದೇ ಪ್ರಕಾರ ಪುತ್ರನ ಅಥವಾ ಪುತ್ರಿಯ ಸೊತ್ತಿನಲ್ಲಿ ತಾಯಿಗೂ ಗಂಡನ ಸೊತ್ತಿನಲ್ಲಿ ಹೆಂಡತಿಗೂ ಹಕ್ಕನ್ನು ನೀಡಿದೆ. ಮೃತಪಟ್ಟ ಒಬ್ಬನ ಸೊತ್ತಿನಲ್ಲಿ ಆತನ ಸಹೋದರನಿಗೆ ಹಕ್ಕು ಲಭಿಸುವಂತೆ ಸಹೋದರಿಗೂ ಹಕ್ಕು ಲಭಿಸುತ್ತದೆ. ಇಸ್ಲಾಮಿಗೆ ಮೊದಲು ಯಾವ ಮತವೂ ಸ್ತ್ರೀಗೆ ಉತ್ತರಾಧಿಕಾರದ ಹಕ್ಕನ್ನೂ ಸೊತ್ತಿನ ಮೇಲಿನ ಹಕ್ಕನ್ನೂ ಅಷ್ಟು ಸ್ಪಷ್ಟವಾಗಿಯೂ ಶಕ್ತಿಯುತವಾಗಿಯೂ ಜ್ಯಾರಿಗೊಳಿಸಿರಲಿಲ್ಲ. ಇಸ್ಲಾಂ ಧರ್ಮದಲ್ಲಿ ಓರ್ವ ಸ್ತ್ರೀಯ ಸೊತ್ತಿನ ಪರಮಾಧಿಕಾರಿ ಸ್ವತಃ ಅವಳೇ ಆಗಿದ್ದಾಳೆ. ಒಬ್ಬ ಗಂಡನಿಗೆ, ಅವನು ಗಂಡನೆಂಬ ಕಾರಣದಿಂದ ಮಾತ್ರ ತನ್ನ ಪತ್ನಿಯ ಸೊತ್ತಿನ ಮೇಲೆ ಯಾವ ನಿಯಂತ್ರಣಾಧಿಕಾರವೂ ಲಭಿಸುವುದಿಲ್ಲ. ಸ್ತ್ರೀಗೆ ಅವಳು ಇಚ್ಛಿಸುವ ರೀತಿಯಲ್ಲಿ ತನ್ನ ಸೊತ್ತನ್ನು ಇಟ್ಟುಕೊಳ್ಳಲಿಕ್ಕೂ ಕೈವರ್ತಿಸಲಿಕ್ಕೂ ಇಸ್ಲಾಂ ಸ್ವಾತಂತ್ರ್ಯ ನೀಡಿದೆ.

---

(9ನೇ ಪುಟದಿಂದ)

7. "ತೆಕೋವದವರ ಮೂಲಪುರುಷನಾದ ಅಷ್ಹೂರನಿಗೆ ಹೆಲಾಹ,ನಾರ ಎಂಬ ಇಬ್ಬರು ಹೆಂಡತಿಯರಿದ್ದರು". (I ಪೂರ್ವಕಾಲ ವೃತ್ತಾಂತ, 4 : 5).

8. "ದಾವೀದನು ಯೆರೂಸಲೇಮಿನಲ್ಲಿ ಸಹ ಕೆಲವು ಮಂದಿ ಸ್ತ್ರೀಯರನ್ನು ಮದುವೆಮಾಡಿಕೊಂಡು ಇನ್ನೂ ಕೆಲವು ಮಂದಿ ಗಂಡು ಹೆಣ್ಣು ಮಕ್ಕಳನ್ನು ಪಡೆದನು". (I ಪೂರ್ವಕಾಲ ವೃತ್ತಾಂತ, 14 : 3)

9. "ರೆಹಬ್ಬಾಮನು ತನ್ನ ಎಲ್ಲಾ ಪತ್ನಿಯರಲ್ಲಿಯೂ ಉಪಪತ್ನಿಯರಲ್ಲಿಯೂ ಅಬ್ಶಾಲೋಮನ ಮಗಳಾದ ಮಾಕಳನ್ನು ಹೆಚ್ಚಾಗಿ ಪ್ರೀತಿಸುತ್ತಿದ್ದನು. ಅವನಿಗೆ ಹದಿನೆಂಟು ಮಂದಿ ಪತ್ನಿಯರಿದ್ದರು" (II ಪೂರ್ವಕಾಲ ವೃತ್ತಾಂತ, 11 : 21).

10. "ಯೆಹೋಯಾದನು ಅವನಿಗೆ (ಯೆಹೋವಾಷನಿಗೆ) ಇಬ್ಬರು ಕನ್ಯೆಯರನ್ನು ಮದುವೆ ಮಾಡಿಕೊಟ್ಟನು; ಅವನು ಗಂಡು ಹೆಣ್ಣು ಮಕ್ಕಳನ್ನು ಪಡೆದನು". (II ಪೂರ್ವಕಾಲ ವೃತ್ತಾಂತ, 24 : 3).

ಪ್ರವಾದಿಗಳಾದ ಅಬ್ರಹಾಮ್, ದಾವೀದ್, ಸೊಲೊಮೋನ್, ಯಾಕೋಬ್ ಎಂಬವರೆಲ್ಲಾ ಬಹುಪತ್ನಿಯರನ್ನು ಹೊಂದಿದ್ದರೆಂದು ಬೈಬಲಿನಿಂದ ಸ್ಪಷ್ಟವಾಗುತ್ತದೆ. "ಹಳೆ ಒಡಂಬಡಿಕೆ" ಯಾರಿಗೆ ಅವತರಿಸಲ್ಪಟ್ಟಿತೋ, ಆ ಮೋಶೆ ಸಹ ಬಹುಪತ್ನಿತ್ವವನ್ನು ಸ್ವೀಕರಿಸಿದ ಓರ್ವ ಪ್ರವಾದಿಯಾಗಿದ್ದರು. ಬಹುಪತ್ನಿಯರನ್ನು ವರಿಸಬಹುದೆಂದು ಬೈಬಲ್ ಕಲಿಸುತ್ತದೆ. ವಿಮೋಚನ ಕಾಂಡ 22 : 16–17, ಧರ್ಮೋಪದೇಶ ಕಾಂಡ 21 : 17, 22 : 28–29, ಸಮುವೇಲನು II 12 : 78 ಈ ವಚನಗಳು ಬಹುಪತ್ನಿತ್ವವನ್ನು ಉಪದೇಶಿಸುವುದಾಗಿ ಕಾಣಬಹುದು.

ಯೇಸು ವಿವಾಹಿತರಾಗಿದ್ದರೆಂದೂ ಕನಿಷ್ಟಪಕ್ಷ ಅವರಿಗೆ ಮೂವರು ಪತ್ನಿಯರಿದ್ದರೆಂದೂ ಕ್ರೈಸ್ತರ ಪೈಕಿಯ ಮೋರ್ಮನ್ ಪಂಥದವರು ಈಗಲೂ ವಾದಿಸುತ್ತಾರೆ. ಮಗ್ದಲನಮರಿಯ, ಮಾರ್ತಾ ಎಂಬವರು ಯೇಸುವಿನ ಪತ್ನಿಯರಾಗಿದ್ದರೆಂದೂ ಅದಲ್ಲದೆ ಕಾನಾದಲ್ಲಿ ಯೇಸುವಿನ ಇನ್ನೊಂದು ವಿವಾಹ ಸಮಾರಂಭ ನಡೆದಿತ್ತೆಂದೂ ಅವರು ಹೇಳುತ್ತಾರೆ.

ಸಂಗತಿ ಹೀಗಿರುವಾಗ, ಬಹುಪತ್ನಿತ್ವದ ಹೆಸರಿನಲ್ಲಿ ಹಿಂದೂ, ಕ್ರೈಸ್ತ, ಮೊದಲಾದವರು ಇಸ್ಲಾಂ ಧರ್ಮವನ್ನು ಆಕ್ಷೇಪಿಸಲಿಕ್ಕೆ ಅವರಿಗೆ ನೈತಿಕ ಹಕ್ಕು ಎಲ್ಲಿದೆ? ●

ಸ್ತ್ರೀಯರೊಡನೆ ದಯಾದಾಕ್ಷಿಣ್ಯದಿಂದ ವರ್ತಿಸುವುದರ ಕುರಿತು ಪೈಗಂಬರರು ಅತ್ಯಂತ ಶ್ರದ್ಧೆವಹಿಸುತ್ತಿದ್ದರು. ಪೈಗಂಬರ ಸುತ್ತಮುತ್ತಲಿದ್ದವರಲ್ಲಿ ಹೆಚ್ಚಿನವರು, ಪತ್ನಿಯನ್ನು ಜೀವನ ಸಂಗಾತಿಯೆಂದು ಮೊದಲೊಮ್ಮೆಯೂ ಪರಿಗಣಿಸಿದವರಲ್ಲ. ಪೈಗಂಬರರು, ಸ್ತ್ರೀಯರಿಗೆ ಉನ್ನತ ಸ್ಥಾನವನ್ನು ನೀಡುವ ಕಾರ್ಯದಲ್ಲಿ ಅತೀವ ತತ್ಪರತೆಯನ್ನು ತೋರಿಸಿದರು.

ಹಝ್ರತ್ ಉಮರ್ (ರ) ಒಮ್ಮೆ ಈ ರೀತಿ ಹೇಳಿದರು : "ನನ್ನ ಸಂಗತಿಯಲ್ಲಿ ನನ್ನ ಪತ್ನಿ ಹಲವು ಬಾರಿ ಅಭಿಪ್ರಾಯ ಹೇಳಲು ಉದ್ಯುಕ್ತಳಾಗುತ್ತಿದ್ದಳು. ಆ ಸಂದರ್ಭಗಳಲ್ಲೆಲ್ಲಾ, ಅರಬಿಯರು ತಮ್ಮ ಸಂಗತಿಯಲ್ಲಿ ಮಧ್ಯೆಪ್ರವೇಶಿಸಲು ಮಹಿಳೆಯರನ್ನು ಬಿಡುತ್ತಿರಲಿಲ್ಲವೆಂದು ಹೇಳುತ್ತಾ ನಾನು ಪತ್ನಿಯನ್ನು ತಡೆಯುತ್ತಿದ್ದೆ. ಆಗ ನನ್ನ ಪತ್ನಿ ಈ ರೀತಿ ಹೇಳುತ್ತಿದ್ದಳು: "ಓಹೋ, ಆ ಕಾಲವೆಲ್ಲ ಹೋಯಿತು! ತನ್ನ ವಿಷಯದಲ್ಲಿ ಮಧ್ಯೆಪ್ರವೇಶಿಸಲಿಕ್ಕೂ ಅಭಿಪ್ರಾಯವನ್ನೀಯಲೂ ಪತ್ನಿಯರನ್ನು ಪೈಗಂಬರರು ಬಿಡುತ್ತಿದ್ದರು. ನಿಮ್ಮ ವಿಚಾರಕ್ಕೆ ಪೈಗಂಬರರು ಬೆಲೆ ಕೊಡುತ್ತಿರಲಿಲ್ಲ. ನೀವೇಕೆ ಪೈಗಂಬರರ ಆದರ್ಶವನ್ನು ಅನುಕರಿಸುವುದಿಲ್ಲ ?"

ಸ್ತ್ರೀಯರಿಗುಂಟಾಗುವ ಸಂಕಟಗಳನ್ನು ಪೈಗಂಬರರಿಗೆ ಸಹಿಸಲು ಸಾಧ್ಯವಾಗುತ್ತಿರಲಿಲ್ಲ. ಒಮ್ಮೆ ಪೈಗಂಬರರ ನೇತೃತ್ವದಲ್ಲಿ ಪ್ರಾರ್ಥನೆ ನಡೆಯುತ್ತಿತ್ತು. ಒಂದು ಮಗು ಗೋಳಾಡುತ್ತಿರುವುದನ್ನು ಕೇಳಿದಾಗ ಪೈಗಂಬರರು ಪ್ರಾರ್ಥನೆಯನ್ನು ಬಹಳ ಬೇಗನೆ ಮುಗಿಸಿದರು. ಮಗು ಅಳುತ್ತಿರುವುದನ್ನು ಕೇಳಿ ತಾನು ಬೇಗನೆ ಪ್ರಾರ್ಥನೆಯನ್ನು ಮುಗಿಸಿದ್ದೆಂದೂ ಮಗುವಿನ ತಾಯಿ ಮಗುವಿನ ಅಳುವಿಕೆಯನ್ನು ಕೇಳಿ ಸಂಕಟಪಡುತ್ತಿರಬಹುದೆಂದು ಭಾವಿಸಿ, ಮಗುವನ್ನು ಎತ್ತಿ ಬೇಗನೆ ಸಮಾಧಾನಪಡಿಸಲು ತಾಯಿಗೆ ಸಂಧರ್ಭಸಿಗಲಿಯೆಂದು ತಾನು ಬಯಸಿದೆನೆಂದೂ ಪೈಗಂಬರರು ಹೇಳಿದರು.

ಯಾತ್ರೆಯಲ್ಲಿ ತಮ್ಮ ಸಂಗಡ ಮಹಿಳೆಯರಿದ್ದರೆ ಒಂಟೆಗಳು ನಿಧಾನವಾಗಿ ಚಲಿಸಿದರೆ ಸಾಕೆಂದೂ ಸಂದರ್ಭಾನುಸಾರ ನೀಗಬೇಕೆಂದೂ ಪೈಗಂಬರರು ನಿರ್ದೇಶಿಸಿದ್ದರು. ಒಮ್ಮೆ ತನ್ನ ಸಂಗಡವಿದ್ದ ಪುರುಷರು ವೇಗವಾಗಿ ಹೋಗಲು ಉದ್ಯುಕ್ತರಾದಾಗ, ಪೈಗಂಬರರು ಈ ರೀತಿ ಹೇಳಿದರು: "ಗಾಜಿನ ಪಾತ್ರೆಗಳ ಬಗ್ಗೆ ಜಾಗ್ರತೆವಹಿಸಿರಿ; ಗಾಜಿನ ಪಾತ್ರೆಗಳ ಬಗ್ಗೆ ಜಾಗ್ರತೆ ವಹಿಸಿರಿ!''. ಸ್ತ್ರೀಯರು ಸಹ ಸಂಗಡ ಇರುವುದರಿಂದ, ಒಂಟೆಗಳೂ ಕುದುರೆಗಳೂ ವೇಗವಾಗಿ ದೌಡಾಯಿಸುವಾಗ ಅವರಿಗೆ ತೊಂದರೆಯಾಗಬಾರದೆಂದು ಪೈಗಂಬರರ ಉದ್ದೇಶವಾಗಿತ್ತು. (ಬುಖಾರಿ, ಕಿತಾಬುಲ್ ಅದಬ್)

ಒಂದು ಯುದ್ಧದಲ್ಲಿ ಕುದುರೆ ಸವಾರರಾದ ಸೈನಿಕರೆಡೆಯಲ್ಲಿ ಏನೋ ಗಲಭೆಯುಂಟಾಯಿತು. ಕುದುರೆಗಳು ನಿಯಂತ್ರಣರಹಿತವಾದವು. ಪೈಗಂಬರರು ಒಂಟೆಯ ಮೇಲಿಂದ ಬಿದ್ದುಬಿಟ್ಟರು. ಕೆಲವು ಸ್ತ್ರೀಯರು ಸಹ ಬಿದ್ದರು. ಪೈಗಂಬರರ ಹಿಂದೆ ಇದ್ದ ಒಂಟೆಯ ಮೇಲೆ ಸವಾರಿ ಮಾಡುತಿದ್ದ ಒಬ್ಬ ಭಟ ಕೂಡಲೇ ಕೆಳಗೆ ಹಾರಿ ಪೈಗಂಬರರ ಸನ್ನಿಧಿಯಲ್ಲಿ ಹಾಜರಾದನು. "ಪೈಗಂಬರರೇ ನಾನೇನು ಮಾಡಲಿ ? '' ಎಂದು ಅವನು ಕೇಳಿದನು. ಪೈಗಂಬರರ ಕಾಲು ಆ ಸಂದರ್ಭದಲ್ಲೂ ಜೀನಿನೊಳಗೆ ಸಿಲುಕಿಕೊಂಡಿತ್ತು. ಬೇಗನೆ ಕಾಲನ್ನು ಹೊರಗೆ ತೆಗೆಯುತ್ತಾ ಅವರು ಹೀಗೆಂದರು: "ಇದು ಪರವಾ ಇಲ್ಲ; ಅದೋ ಅಲ್ಲಿಗೆ ಹೋಗಿ ಸ್ತ್ರೀಯರಿಗೆ ಸಹಾಯ ಮಾಡು."

ತನ್ನ ಮರಣಕ್ಕೆ ಸ್ವಲ್ಪ ಮೊದಲು ಸಹ ಮುಸ್ಲಿಮರಿಗೆ ಆ ಮಹಾತ್ಮ ನೀಡಿದ ಉಪದೇಶ, ಸ್ತ್ರೀಯರೊಡನೆ ಬಹಳ ಕರುಣೆಯಿಂದ ವರ್ತಿಸಬೇಕೆಂದೂ ಅವರ ಸಂಗತಿಯಲ್ಲಿ ಯಾವಾಗಲೂ ವಿಶೇಷ ಪರಿಗಣನೆಯನ್ನು ನೀಡಬೇಕೆಂದೂ ಎಂದಾಗಿದೆ. ತನ್ನ ಹೆಣ್ಣು ಮಕ್ಕಳಿಗೆ ವಿದ್ಯೆ ಕಲಿಸಲಿಕ್ಕೂ ಅವರನ್ನು ಒಳ್ಳೆಯ ರೀತಿಯಲ್ಲಿ ಸಾಕಿ ಸಲಹಲಿಕ್ಕೂ ಯಾವನಾದರೂ ಯತ್ನಿಸುವನಾದರೆ ನರಕಶಿಕ್ಷೆಯಿಂದ ಅವನು ಮುಕ್ತನಾಗುವನೆಂದು ಪೈಗಂಬರರು ಆಗಾಗ್ಗೆ ಹೇಳುತ್ತಿದ್ದರು. (ತಿರ್ಮಿದಿ)

ಎಂತಹ ಪುಟ್ಟ ಅಪರಾಧಕ್ಕೂ ಸ್ತ್ರೀಯರನ್ನು ಹೊಡೆಯುವುದು ಮತ್ತು ಶಿಕ್ಷಿಸುವುದು ಅರೇಬಿಯದಲ್ಲಿ ಸರ್ವಸಾಮಾನ್ಯವಾಗಿತ್ತು. ಸ್ತ್ರೀಯರು ಸಹ ಪುರುಷರಂತೆ ದೇವರ ಸೃಷ್ಟಿಗಳೆಂದೂ ಅವರು ಗಂಡಸರ ಗುಲಾಮರಲ್ಲವೆಂದೂ ಅವರನ್ನೂ ಪ್ರಹರಿಸಬಾರದೆಂದೂ ಪೈಗಂಬರರು ಭೋಧಿಸಿದರು. ಸ್ತ್ರೀಯರಿಗೆ ಇದು ತಿಳಿದಾಗ ಹೆಚ್ಚಿನ ಸ್ವಾತಂತ್ರ್ಯವನ್ನು ತೋರಿಸುತ್ತಾ ಪುರುಷರನ್ನು ಎಲ್ಲಾ ಸಂಗತಿಗಳಲ್ಲೂ ವಿರೋಧಿಸಲು ತೊಡಗಿದರು. ಪರಿಣಾಮ

ವೇನಾಯಿತೆಂದು ಹೇಳಲಿಕ್ಕಿದೆಯೇ? ಹೆಚ್ಚಿನ ಮನೆಗಳಲ್ಲಿ ಕುಟುಂಬ ಕಲಹವುಂಟಾಯಿತು. ಹಝ್ರತ್ ಉಮರ್ ರವರು ಪೈಗಂಬರರಿಗೆ ದೂರಿತ್ತರು. ಸ್ತ್ರೀಯರನ್ನು ಕೆಲವು ಸಂದರ್ಭಗಳಲ್ಲಿ ಶಿಕ್ಷಿಸುವುದಿಲ್ಲವಾದರೆ ಅವರು ಪುರುಷರ ತಲೆಯ ಮೇಲೆ ಏರಿ ಹೋಗುವರು! ನಂತರ ಅವರನ್ನು ನಿಯಂತ್ರಿಸಲಿಕ್ಕಾಗಲಿಕ್ಕಿಲ್ಲ. ಹಝ್ರತ್ ಉಮರ್ ರವರ ಅಭಿಪ್ರಾಯ ಅದಾಗಿತ್ತು. ಸ್ತ್ರೀಯರೊಡನೆ ವರ್ತಿಸುವ ವಿಷಯದಲ್ಲಿ, ವಿಶದವಾಗಿ ಇಸ್ಲಾಮಿಕ ಆಜ್ಞೆಗಳೊಂದು ಸಹ ಲಭಿಸದಿದ್ದ ಸಂದರ್ಭದಲ್ಲಾಗಿತ್ತು ಇದ್ಯ ಸಂಭವಿಸಿದ್ದು. ಗುರುತರವಾದ ಅಪರಾಧಗಳನ್ನೆಸಗುವ ಸ್ತ್ರೀಯರನ್ನು ಶಿಕ್ಷಿಸಬಹುದೆಂದು!ಪೈಗಂಬರರು ಆಗ ನಿರ್ದೇಶಿಸಿದರು. ಹಳೆಯ ಅರಬಿ ಸಂಪ್ರದಾಯಕ್ಕೆ ಹಿಂತೆರಳುವರೆ ಇದು ಕೆಲವರಿಗೆ ಪ್ರಚೋದನೆ ನೀಡಿತು. ಆಗ ಸ್ತ್ರೀಯರ ಕಡೆಯಿಂದ ನಿವೇದನೆಗಳೂ ದೂರುಗೂ ಬಂದವು. ಅವರು ಪೈಗಂಬರರ ಪತ್ನಿಯರನ್ನು ಭೇಟಿಯಾಗಿ ತಮ್ಮ ಸಂಕಟವನ್ನು ನಿವೇದಿಸಿದರು. ಆಗ ಪೈಗಂಬರರು ಪುರುಷರಿಗೆ ಕಟುವಾಗಿ ಎಚ್ಚರಿಕೆ ನೀಡುತ್ತಾ, ಸ್ತ್ರೀಯರೊಡನೆ ನಿರ್ದಯೆಯಿಂದ ವರ್ತಿಸುವವರು ದೈವಾನುಗ್ರಹಗಳಿಗೆ ಪಾತ್ರರಾಗಲಾರರೆಂದು ಬೋಧಿಸಿದರು. ಈ ಮೂಲಕ ಸ್ತ್ರೀಯರ ಹಕ್ಕುಗಳು ಊರ್ಜಿತಗೊಂಡವು. ಮಹಿಳೆಯರು ಸ್ವತಂತ್ರರೆಂದೂ ಅವರಿಗೆ ಸ್ವತಂತ್ರ ಹಕ್ಕುಗಳಿವೆಯೆಂದೂ ಅಂಗೀಕರಿಸಲ್ಪಟ್ಟಿತು.

ಮುಆವಿಯಾ ಅಲ್‌ಖುಶೈರಿ (ರ) ಈ ರೀತಿ ವರದಿ ಮಾಡಿರುವರು: "ನನ್ನ ಪತ್ನಿಗೆ ನನ್ನ ಮೇಲೆ ಯಾವ್ಯಾವ ಹಕ್ಕುಗಳಿವೆಯೆಂದು ನಾನೊಮ್ಮೆ ಪೈಗಂಬರರೊಡನೆ ವಿಚಾರಿಸಿದೆನು. ಪೈಗಂಬರರು ಹೀಗೆ ಉತ್ತರವಿತ್ತರು: 'ಅಲ್ಲಾಹು ನಿಮಗೆ ಆಹಾರದ ಸಂಬಂಧಿಸಿ ಯಾವ ರೀತಿಯಲ್ಲಿ ಅನುಗ್ರಹಿಸಿರುವನೋ, ಅದಕ್ಕೆ ತಕ್ಕ ರೀತಿಯಲ್ಲಿ ನೀವು ನಿಮ್ಮ ಪತ್ನಿಗೆ ಉಣ್ಣಿಸಿರಿ; ಅಲ್ಲಾಹು ನಿಮಗೆ ವಸ್ತ್ರದ ವಿಷಯದಲ್ಲಿ ಹೇಗೆ ಅನುಗ್ರಹಿಸಿರುವನೋ, ಅದಕ್ಕೆ ತಕ್ಕ ರೀತಿಯಲ್ಲಿ ನಿಮ್ಮ ಪತ್ನಿಗೆ ಉಡಿಸಿರಿ; ಅವಳಿಗೆ ಹೊಡೆಯಬೇಡಿರಿ, ಬಯ್ಯಬೇಡಿರಿ, ಅವಳನ್ನು ಮನೆಯಿಂದ ಹೊರಗೆ ಹಾಕಬೇಡಿರಿ".

ಸ್ತ್ರೀಯರ ಉದ್ವೇಗ ವಿಚಾರಗಳನ್ನು ಪೈಗಂಬರರು ಮನ್ನಿಸಿದುದಕ್ಕೆ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ದೂರಯಾತ್ರೆ ಹೋಗುವವರೊಡನೆ ತಮ್ಮ ಜವಾಬ್ದಾರಿಕೆಗಳನ್ನು ಸಾಧ್ಯವಿದ್ದಷ್ಟು ಬೇಗ ನಿರ್ವಹಿಸಿ ಮನೆಗೆ ಹಿಂತೆರಳಬೇಕೆಂದೂ, ಪತ್ನಿ ಮತ್ತು ಮಕ್ಕಳಿಗೆ ಅವಶ್ಯಕ್ಕಿಂತ ಅಧಿಕ ದಿನಗಳು ಅಗಲುವಿಕೆಯ ದುಃಖವನ್ನು ಅನುಭವಿಸಲು ಎಡೆಕೊಡಬಾರದೆಂದೂ ಪೈಗಂಬರರು ನಿಷ್ಕರ್ಷಿಸಿದ್ದರು. ಯಾತ್ರೆ ಮುಗಿಸಿ ಹಿಂತೆರಳುವಾಗ, ಪೈಗಂಬರರು ಹಗಲು ಹೊತ್ತಿನಲ್ಲಿ ಮಾತ್ರ ಮನೆಗೆ ಪ್ರವೇಶಸುತ್ತಿದ್ದರು. ಯಾತ್ರಾಂತ್ಯದಲ್ಲಿ ಕತ್ತಲೆಯಾಗುವುದಾದರೆ, ಮದೀನಕ್ಕೆ ಹೊರಗೆ ಠಿಕಾಣಿ ಹೊಡೆದು ರಾತ್ರಿಯನ್ನು ಕಳೆದ ನಂತರ ಮರುದಿನ ಬೆಳಗಾತ ಮನೆಗೆ ಬರುತ್ತಿದ್ದರು. ದೂರಯಾತ್ರೆ ಮುಗಿಸಿ ವಾಪಾಸು ಬರುವವರು ಮುನ್ಸೂಚನೆಯನ್ನು ನೀಡದೆ ಮನೆಗೆ ಬರಬಾರದೆಂದು ಪೈಗಂಬರರು ತನ್ನ ಶಿಷ್ಯರಿಗೆ ಉಪದೇಶವಿತ್ತಿದ್ದರು. (ಬುಖಾರಿ, ಮುಸ್ಲಿಂ). ಸ್ತ್ರೀ ಪುರುಷರೊಳಗಿನ ಸಂಬಂಧದ ಪ್ರಾಧಾನ್ಯವನ್ನು ಪರಿಗಣಿಸಿ ಪೈಗಂಬರರು ಈ ರೀತಿ ನಿರ್ದೇಶಿಸಿದ್ದರು. ಗಂಡನಿಲ್ಲದಿರುವಾಗ ಆತನ ಹೆಂಡತಿ ತನ್ನ ಶರೀರ ಸೌಂದರ್ಯವನ್ನು ಕಾಪಾಡುವುದರಲ್ಲೂ ವಸ್ತ್ರ ಧರಿಸುವುದರಲ್ಲೂ ಅಷ್ಟೊಂದು ಗಮನವಿರಿಸುವಳೆಂದು ಹೇಳಬರುವುದಿಲ್ಲ. ಅನೀರಿಕ್ಷಿತವಾಗಿ ತನ್ನ ಪತಿ ಬಂದುಬಿಟ್ಟರೆ, ಪತ್ನಿಯ ಅಥವಾ ಪತಿಯ ಮೃದುಲ ಭಾವನೆಗಳಿಗೆ ಕ್ಷತವನ್ನುಂಟುಮಾಡಲು ಅದು ಎಡೆಕೊಡಬಹುದು. ಪುರುಷನು ದೂರಯಾತ್ರೆ ಮುಗಿಸಿ ಹಗಲು ಹೊತ್ತಿನಲ್ಲಿ ಮನೆಗೆ ತಲಪಬೇಕೆಂದೂ, ತಾನು ಬರುವ ವಿಷಯವನ್ನು ಮುಂಚಿತವಾಗಿ ಕುಟುಂಬದವರಿಗೆ ತಿಳಿಸಬೇಕೆಂದೂ ನಿರ್ದೇಶಿಸುತ್ತಾ, ಹಿಂತೆರಳುವವನಿಗೆ ಉಚಿತವಾದ ಸ್ವಾಗತ ನೀಡಲು ಕುಟುಂಬದವರಿಗೂ ಇತರರಿಗೂ ಪೈಗಂಬರರು ಸಂದರ್ಭವನ್ನು ನೀಡಿದ್ದರು.

# ಯೇಸುಕ್ರಿಸ್ತ ಕಾಶ್ಮೀರದಲ್ಲಿ ಮೃತನಾಗಿರುವನೇ?

● ಪೆಟ್ರೀಶಿಯಾ ಸೇಥಿ.

ಯೇಸುಕ್ರಿಸ್ತರು ಕಾಶ್ಮೀರದಲ್ಲಿ ಮೃತರಾದುದರ ಕುರಿತು ಕಿ. ಶ. 1890ರಲ್ಲಿ ಅಹ್ಮದಿಯಾ ಸಂಘಟನೆಯ ಸ್ಥಾಪಕರು ತನ್ನ "ಮಸೀಹ್ ಹಿಂದುಸ್ಥಾನ್ ಮೇ" (ಯೇಸುಕ್ರಿಸ್ತರು ಭಾರತದಲ್ಲಿ) ಎಂಬ ಗ್ರಂಥದಲ್ಲಿ ಘೋಷಿಸಿದ ನಂತರ ಇದನ್ನು ಸಮರ್ಥಿಸಿ ಅನೇಕ ಗ್ರಂಥಗಳು ವಿರಚಿಸಲ್ಪಟ್ಟವು. ಇತ್ತೀಚೆಗೆ ಪಾಶ್ಚಿಮಾತ್ಯ ವಿದ್ವಾಂಸರು ಈ ವಿಷಯದ ಕುರಿತು ಹೆಚ್ಚಿನ ಗಮನ ಕೊಡುತ್ತಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿ ಜರ್ಮನ್ ವಿದ್ವಾಂಸರೊಬ್ಬರು ಬರೆದ ಗ್ರಂಥ ಹಿಂದಿನ ವರ್ಷ ಅಮೇರಿಕದಲ್ಲಿ ಪ್ರಕಟವಾಯಿತು. ಈ ಗ್ರಂಥದ ಕುರಿತು ಈ ಲೇಖನದಲ್ಲಿ ವಿಮರ್ಶಿಸಲಾಗಿದೆ.

—ಅನುವಾದಕ.

**ಏಂಡ್ರಿಯಸ್ ಫೇಬರ್–ಕೈಸರ್ ಎಂಬ ಜರ್ಮನ್ ವಿದ್ವಾಂಸರೊಬ್ಬರು ಇತ್ತೀಚೆಗೆ ಪ್ರಕಟಿತವಾದ ತನ್ನ ಒಂದು ಗ್ರಂಥದಲ್ಲಿ, ಯೇಸುಕ್ರಿಸ್ತ ಶಿಲುಬೆ ಪ್ರಕರಣ ನಂತರ ತನ್ನ ಗಾಯಗಳು ಗುಣಮುಖವಾದ ಬಳಿಕ, ತನ್ನ ತಾಯಿ ಮೇರಿ ಮತ್ತು ಶಿಷ್ಯ ತೋಮಸರ ಜತೆಗೂಡಿ ಪೂರ್ವದಿಕ್ಕಿನತ್ತ ಪ್ರಯಾಣಿಸಿದನೆಂದೂ ಕೊನೆಗೆ ಕಾಶ್ಮೀರದಲ್ಲಿ ನೆಲೆಯೂರಿದನೆಂದೂ ಅಲ್ಲಿ ಆತನು ಪ್ರಕೃತಿ ಸಹಜವಾಗಿಯೇ ಮೃತಪಟ್ಟನೆಂದೂ ಶ್ರೀನಗರಕ್ಕೆ ಸಮೀಪವಿರುವ ರೌಝಾಬಾಲ್ ಎಂಬಲ್ಲಿ ಆತನ ಸಮಾಧಿ ಇದೆಯೆಂದೂ ವಾದಿಸುತ್ತಾರೆ.**

ಒಂದು ಹೊಸ ಗ್ರಂಥ, ಇಲ್ಲಿ ಅಮೇರಿಕದಲ್ಲಿ, ಜನರ ಅಸಾಧಾರಣವಾದ ಗಮನಕ್ಕೆ ಪಾತ್ರವಾಗಿದೆ. ಯಥಾರ್ಥವಾಗಿ ಅದೊಂದು ಬಿರುಗಾಳಿಯನ್ನೆಬ್ಬಿಸಿದೆ. ಅದು ಅತ್ಯುಗ್ರ ಆಕ್ಷೇಪಣೆಗಳಿಗೂ ಸಾರ್ವಜನಿಕ ವಾಗ್ವಾದಗಳಿಗೂ ಗುರಿಯಾಗಿದೆ. ಅದು ಅತಿಥಿಗಳ ಮತ್ತು ಆತಿಥೇಯರ ರಸಭರಿತ ಮಾತುಕತೆಗಳ ಸ್ಥಾನವನ್ನಾಕ್ರಮಿಸಿ ಭಾವೋದ್ವೇಗ ಮತ್ತುಆವೇಶಭರಿತ ವಾಗ್ವಾದಗಳಿಗೆ ಕಾರಣೀಭೂತವಾಗಿದೆ.

ಈ ಗ್ರಂಥದಲ್ಲಿ ಪ್ರತಿಪಾದಿಸಿರುವ ಸಂಗತಿ ಹೀನೈಸಲ್ಪಟ್ಟು ತಿರಸ್ಕಾರಕ್ಕೆ ಪಾತ್ರವಾಗಿದೆ. ಇಂದು ಪ್ರಪಂಚದಲ್ಲಿ ವಿಸ್ತಾರವಾಗಿ ಹಬ್ಬಿರುವ ಶಕ್ತಿಯುತ ಮತಗಳಲ್ಲೊಂದಾದ ಕ್ರೈಸ್ತ ಧರ್ಮದ ತಳಹದಿಗೆ ಹೊಡೆತವನ್ನೀಯುವ ಪ್ರತಿಪಾದಿತ ವಿಷಯವು ಹಲವರ ಆಕ್ಷೇಪಕ್ಕೆ ಪಾತ್ರವಾಗಿದೆ. ಸಂಕ್ಷೇಪವಾಗಿ ಪ್ರತಿಪಾದನೆ ಈ ರೀತಿಯಾಗಿದೆ: "ಯೇಸುಕ್ರಿಸ್ತ ಕಾಶ್ಮೀರದಲ್ಲಿ ಮೃತನಾಗಿರುವನು". ಇದನ್ನು ಸವಿಸ್ತಾರವಾಗಿ ವಿವರಿಸಿರುವ ಜರ್ಮನಿಯ ತತ್ವಜ್ಞಾನಿಯಾದ ಏಂಡ್ರಿಯಸ್ ಫೇಬರ್-ಕೈಸರ್ (Andreas Faber–Kaiser) ತನ್ನ ಇತ್ತೀಚೆಗೆ ಪ್ರಕಟವಾದ "Jesus Died in Kashmir" (ಯೇಸುಕ್ರಿಸ್ತ ಕಾಶ್ಮೀರದಲ್ಲಿ ಮೃತನಾದನು) ಎಂಬ ಗ್ರಂಥದಲ್ಲಿ ಈ ರೀತಿ ಬರೆದಿರುವರು: "ಯೇಸುಕ್ರಿಸ್ತ ಶಿಲುಬೆಯಲ್ಲಿ ಮೃತನಾಗಲಿಲ್ಲ. ಆತನು ಸತ್ತು ಜೀವಂತನಾಗಲೂ ಇಲ್ಲ. ಆತನನ್ನು ಶಿಲುಬೆಯಿಂದ ಸಜೀವವಾಗಿಯೇ ಇಳಿಸಲಾಯಿತು. ಆತನ ಗಾಯಗಳು ಗುಣ ಹೊಂದಿದ ನಂತರ ತನ್ನ ತಾಯಿ ಮೇರಿ ಮತ್ತು ಪ್ರಿಯ ಶಿಷ್ಯ ತೋಮಸರೊಂದಿಗೆ ಆತನು ಪೂರ್ವಕ್ಕೆ ಪ್ರಯಾಣಿಸಿದನು. ಮೇರಿ ಪ್ರಯಾಣದ ಸಂಕಷ್ಟಗಳನ್ನು ಸಹಿಸಲಿಕ್ಕಾಗದೆ ಪಾಕಿಸ್ತಾನ-ಭಾರತ ಗಡಿ ಪ್ರದೇಶದಲ್ಲಿರುವ ಮರ್ರೀ (Murree) ಎಂಬ ಸ್ಥಳದಲ್ಲಿ ಮೃತಳಾದಳು.

"ಯೇಸುಕ್ರಿಸ್ತ ಕಾಶ್ಮೀರದಲ್ಲಿ ವಾಸಿಸಲು ತೊಡಗಿದನು. ಅಲ್ಲಿ ಆತನು ವಿವಾಹಿತನಾಗಿ ಸಂತತಿಯನ್ನು ಪಡೆದರು. (ಶ್ರೀನಗರದ ಒಬ್ಬ ನಿವಾಸಿಯಾದ ಸಾಹಿಬ್‌ಝಾದ ಬಶಾರತ್ ಸಲೀಂರವರ ವಶದಲ್ಲಿರುವ ಒಂದು ಸಂಪೂರ್ಣ

ವಂಶಾವಳಿ ಪಟ್ಟಿಯ ಪ್ರಕಾರ ಅವರ ವಂಶವು ಯೇಸುಕ್ರಿಸ್ತ ನಿಂದ ತೊಡಗಿತೆಂದು ತಿಳಿಯುತ್ತದೆ). ಯೇಸುಕ್ರಿಸ್ತ ಬಹಳ ಕಾಲ ಜೀವಿಸಿ ವೃದ್ಧಾಪ್ಯವನ್ನು ಪ್ರಾಪಿಸಿ, ಸ್ವಾಭಾವಿಕ ಕಾರಣಗಳಿಂದ ಮೃತರಾದನು. ಆತನನ್ನು ಶ್ರೀನಗರದ ಖಾನ್‌ಯಾರ್ ಬೀದಿಯಲ್ಲಿರುವ ರೌಝಾಬಾಲ್‌ನಲ್ಲಿ ಸಮಾಧಿಗೊಳಿಸಲಾಯಿತು. ತೋಮಸ್ ದಕ್ಷಿಣ ಭಾರತಕ್ಕೆ ಪ್ರಯಾಣಿಸಿ ಅಲ್ಲಿ ತನ್ನ ಗುರುವಿನ ತತ್ವಗಳನ್ನು ಪ್ರಚಾರ ಗೊಳಿಸುತ್ತಿರುವಾಗ ಮೃತನಾದನು".

ಮೇಲೆ ವಿವರಿಸಿದ ಸಂಗತಿಗಳು ಸುಲಭಗ್ರಾಹ್ಯವಲ್ಲ ವೆಂದೂ ಜನರನ್ನು ಉದ್ವೇಗಿತರನ್ನಾಗಿ ಮಾಡುವುದೆಂದೂ ಇವುಗಳನ್ನು ಯಾರಾದರೂ ಸುಲಭವಾಗಿ ತಿರಸ್ಕರಿಸಬಹುದು. ಬೈಬಲಿನಲ್ಲಿ ವಿವರಿಸಲಾದ ಯೇಸುಕ್ರಿಸ್ತರ ಚರಿತ್ರೆಯನ್ನು ಪ್ರಶ್ನಾತೀತವಾಗಿ ಸ್ವೀಕರಿಸಿರುವ ಪ್ರಪಂಚಾದ್ಯಂತ ಹಬ್ಬಿರು ವ ಸುಮಾರು ನೂರು ಕೋಟಿ ಕ್ರೈಸ್ತ ಧರ್ಮೀಯರ ಜೀವನ ವನ್ನೇ ಬಾಧಿಸುವ ಈ ವಾದವನ್ನು ಕ್ರೈಸ್ತರು ವಿಶಿಷ್ಟವಾಗಿ ಈ ರೀತಿ ತಳ್ಳುವುದು ಅರ್ಥವತ್ತಾಗಿದೆ. ಆದರೆ ಇದೇ ಸಂದರ್ಭದಲ್ಲಿ ಫೇಬರ್-ಕೈಸರರನ್ನು ಒಬ್ಬ ಅರೆಹುಚ್ಚ ನೆಂದೋ, ಕ್ರಿಸ್ತ-ವಿರೋಧಿಯೆಂದೋ ಪರಿಗಣಿಸುವುದು ಅನುಚಿತವಾಗಿದೆ. ಫೇಬರ್-ಕೈಸರರ ಕೃತಿ ಒಂದು ಗಮನಾರ್ಹ ಸಂಗತಿಯನ್ನು ಸಯುಕ್ತಿಕವಾಗಿ ಪ್ರತಿಪಾದಿಸಿದ ಒಂದು ಉಜ್ವಲ ಗ್ರಂಥವಾಗಿದೆ. ಅವರ ತೀರ್ಮಾನಗಳನ್ನು ನೀವು ಸಮ್ಮತಿಸಬೇಕೆಂದಿಲ್ಲ. ಆದರೆ ಆ ವಿಷಯದ ಕುರಿತು ಸಾವಧಾನವಾಗಿ ಕುಳಿತು ಪಠಿಸುವುದು ಅತ್ಯಗತವಾಗಿದೆ.

ಫೇಬರ್-ಕೈಸರ್ ತನ್ನ ವಾದವನ್ನು ವಿಸ್ತಾರವಾಗಿ ವಿವರಿಸಿದ್ದರೂ ತನ್ನ ವಾದವನ್ನು ವಿವರವಾದ ಸಾಕ್ಷ್ಯಗಳಿಂದ ಸುಭದ್ರವಾಗಿ ಸ್ಥಾಪಿಸಿರುವರು. ಯಾವುದೇ ಸಂಗತಿಯನ್ನು ಆಳವಾಗಿ ಪರಿಶೋಧಿಸದೆ ಬರೇ ಮುಖ ಬೆಲೆಯ ಆಧಾರದ ಮೇಲೆ ಸ್ವೀಕರಿಸಿಲ್ಲವೆಂದು ಅವರು ಹೇಳಿರುವರು. ಅಹ್ಮದಿ ಯಾ ಮುಸ್ಲಿಂ ಸಂಘಟನೆ ಯೇಸುಕ್ರಿಸ್ತರ ಕಾಶ್ಮೀರ ಪ್ರಯಾಣದ ಕುರಿತು ದೀರ್ಘಕಾಲದಿಂದ ಒತ್ತಿ ಹೇಳುತ್ತಾ ಬಂದಿದ್ದು ಫೇಬರ್-ಕೈಸರರ ವಾದಕ್ಕೆ ಬೇಕಾದ ಸಾಮಾಗ್ರಿ ಗಳನ್ನೊದಗಿಸುವುದರಲ್ಲಿ ಶ್ರದ್ಧಾರ್ಹವಾದ ಪಾತ್ರವಹಿಸಿ ದ್ದರೂ ಈ ಸಂಘಟನೆಯೊಡನೆ ತನಗೆ ಸಂಬಂಧವಿಲ್ಲವೆಂದು ತನ್ನ ಗ್ರಂಥದ ಮುನ್ನುಡಿಯಲ್ಲಿ ಬರೆಯುತ್ತಾ "ಈ ಗ್ರಂಥ ಒಂದು ಅಹ್ಮದಿಯಾ ಪ್ರಚಾರ ಪುಸ್ತಕವಲ್ಲ. ಇದು ಯೇಸು ಕ್ರಿಸ್ತರ ಜೀವನದ ರಹಸ್ಯ ಭಾಗಗಳ ಕುರಿತು ಬೆಳಕನ್ನೀಯು ವ ವಿವಿಧ ಸಂಗತಿಗಳ ಒಂದು ಪರಿಶೋಧನೆ ಮಾತ್ರವಾಗಿದೆ" ಎಂದಿರುವರು.

ಬೈಬಲಿನಲ್ಲಿ ಉತ್ತರ ಸಿಗಲಾರದಂತಹ ಹಲವಾರು ಪ್ರಶ್ನೆಗಳು ಜರ್ಮನ್ ವಿದ್ವಾಂಸರ ಗಮನವನ್ನು ಕಾಶ್ಮೀರದ ಕಡೆಗೆ ಹರಿಯುವಂತೆ ಮಾಡಿದುವು. ಯೇಸುಕ್ರಿಸ್ತ ತನ್ನ ಜನನದಿಂದ ಹನ್ನೆರಡನೆಯ ವರ್ಷ ಪ್ರಾಯದವರೆಗೆ ಎಲ್ಲಿ ದ್ದನು? ಅವನು ಕಾಣೆಯಾಗಿ ತನ್ನ 13ನೇ ವಯಸ್ಸಿನಲ್ಲಿ ದೇವಾಲಯದಲ್ಲಿ ಕಾಣಿಸಿಕೊಂಡ ನಂತರ ತನ್ನ 29ನೇ ವರ್ಷ ದಲ್ಲಿ ಸ್ನಾನಿಕನಾದ ಸಂತ ಯೋಹಾನನಿಂದ ಪವಿತ್ರ ಸ್ನಾನ ಮಾಡಿಸಲ್ಪಡುವ ತನಕ ಎಲ್ಲಿದ್ದನು ? ಯೇಸುಕ್ರಿಸ್ತನ ಜೀವನದ ಈ ಕಾಲಗಳ ಕುರಿತು ಬೈಬಲ್ ಏಕೆ ವಿವರಿಸುವು ದಿಲ್ಲ? ಶಿಲುಬೆಗೇರಿಸಲ್ಪಟ್ಟ ಜನರನ್ನು ಸಬ್ಬತ್ ತೊಡಗಿದ ನಂತರ ಶಿಲುಬೆಯಲ್ಲಿ ತೂಗಾಡುತ್ತಾ ಇರಲು ಬಿಡಬಾರ ದೆಂದು ಪಿಲಾತನಿಗೆ ಗೊತ್ತಿದ್ದರೂ ಆತನು ಶುಕ್ರವಾರ ಸಾಯಂಕಾಲ ಯೇಸುಕ್ರಿಸ್ತನನ್ನು ಶಿಲುಬೆಗೇರಿಸಲು ಏರ್ಪ ಡು ಮಾಡಲು ಕಾರಣವೇನು? ಯೇಸುಕ್ರಿಸ್ತ ಯಥಾರ್ಥ ವಾಗಿ ಮೃತನಾಗಿ ಅನಂತರ ಜೀವವನ್ನು ಹೊಂದಿ ಆಕಾಶಾ ರೋಹಣ ಗೈದಿದ್ದರೆ ಅವನ ಸಮಾಧಿಗೆ ಅಡ್ಡವಾಗಿರಿಸಿದ್ದ ಕಲ್ಲನ್ನು ಅಗಲಿಸಲು ಕಾರಣವೇನು ?

ಈ ಪ್ರಶ್ನೆಗಳನ್ನು ಈ ರೀತಿ ಉತ್ತರಿಸಬಹುದು: ಯೇಸುಕ್ರಿಸ್ತನ ಜೀವನದ ವಿಶಿಷ್ಟ ಅವಧಿಗಳ ವಿವರಣೆ ಬೈಬಲ್ ಕೊಡದಿರುವುದಕ್ಕೆ ಕಾರಣ, ಆ ಅವಧಿಯಲ್ಲಿ ಯಾವುದೇ ವಿಶೇಷ ಘಟನೆಗಳು ಸಂಭವಿಸಿಲ್ಲ ಅಥವಾ ಆ ಅವಧಿಯ ಘಟನೆಗಳ ವಿವರ ಕ್ರೈಸ್ತ ಧರ್ಮದ ದೃಷ್ಟಿ ಯಲ್ಲಿ ಅನಾವಶ್ಯಕವಾಗಿವೆ. ಆದರೆ ಫೇಬರ್-ಕೈಸರ್ ದೃಷ್ಟಿ ಯಲ್ಲಿ ಇದು ಸರಿಯಲ್ಲ. ನಿಕೋಲಾಯಿನೋಟೋವಿಚ್ ಎಂಬ ರಶ್ಯನ್ ಪ್ರವಾಸಿ ಲಡಖ್ ಪ್ರದೇಶದಲ್ಲಿ ಸಂಚರಿಸು ತ್ತಿದ್ದಾಗ ಲೆಹ್ (Leh) ಎಂಬ ಸ್ಥಳದಲ್ಲಿರುವ ಹೆಮಿಸ್ ಸನ್ಯಾಸಿ ಮಠದಲ್ಲಿ 84000 ಪ್ರಾಚೀನ ಕೈಬರಹ ಲೇಖನ ಗಳಿರುವ ಸುರುಳಿ ಪತ್ರಗಳನ್ನು ಕಂಡನು. ಅವುಗಳಲ್ಲಿ ಹಲ ವಾರು ಪ್ರವಾದಿಗಳ ಜೀವನ ವೃತ್ತಾಂತ ನಿರೂಪಿತವಾಗಿದ್ದು ಅದರಲ್ಲಿ ಯೇಸುಕ್ರಿಸ್ತರ ಜೀವನವೂ ಸೇರಿದ್ದಿತು. (ಭಾಷಾ ಸಂಬಂಧವಾದ ಮತ್ತು ಅಕ್ಷರ ಸಂಬಂಧವಾದ ವಿವರಣೆಗಳ ಮೂಲಕ ಈಸ, ಯೂಝುಝ್, ಯೂಸು, ಇಸ್ಸಾ, ಯುಝಾ ಮೊದಲಾದವು ಯೇಸುಕ್ರಿಸ್ತನ ಹೆಸರಿನವಿವಿಧರೂಪಗಳೆಂದು ಫೇಬರ್-ಕೈಸರ್ ವ್ಯಕ್ತಗೊಳಿಸಿರುವರು.) ನೋಟೋವಿಚ್

ತಾನು ಕಂಡು ಹಿಡಿದ ದಾಖಲೆಗಳ ಆಧಾರದ ಮೇಲೆ ಈ ರೀತಿ ಬರೆದಿರುವನು: "ಈಸ ಇಸ್ರಾಯೆಲ್ ರಾಜ್ಯದಲ್ಲಿ ಜನಿಸಿದನು.... ಆತನ ತಂದೆ ತಾಯಿ ಬಡವರಾಗಿದ್ದರು... ಸತ್ಯ ಮಾರ್ಗದಲ್ಲಿ ಸ್ಥಿರಚಿತ್ತರಾಗಿ ನೆಲೆನಿಂತ ಈ ಕುಟುಂಬ ವನ್ನು ಅನುಗ್ರಹಿಸಲಿಕ್ಕಾಗಿ ಈ ದಂಪತಿಗಳ ಪ್ರಥಮ ಪುತ್ರ ನನ್ನು ದಾರಿತಪ್ಪಿದವರನ್ನು ಉದ್ಧರಿಸಲಿಕ್ಕಾಗಿಯೂ ಕಷ್ಟ ಪಡುವವರನ್ನು ಸಾಂತ್ವನಗೊಳಿಸಲಿಕ್ಕಾಗಿಯೂ ದೇವರು ಆಯ್ಕೆ ಮಾಡಿದನು........ಇಸ್ರಾಯೆಲ್ ದೇಶದ ಜನರು ಸಾಮಾನ್ಯವಾಗಿ ವಿವಾಹವಾಗುವ ಪ್ರಾಯವಾದ 13ನೇ ವಯಸ್ಸನ್ನು ಈಸ ತಲುಪಿದಾಗ...... ತನ್ನ ತಂದೆ ತಾಯಿಯರ ಮನೆಯಿಂದ ರಹಸ್ಯವಾಗಿಹೊರಟುಹೋದನು. ಆತನು ಜೆರುಸಲೇಂ ತೊರೆದು ಸಿಂಧ್ ದೇಶದ ಕಡೆಗೆ ಹೋದನು."

ಹಸ್ತಪ್ರತಿಗಳು ಯೇಸುಕ್ರಿಸ್ತರ ಪ್ರಯಾಣಗಳ ಕುರಿತು ಸವಿಸ್ತಾರವಾಗಿ ವಿವರಿಸುತ್ತವೆ. (ಆ ಕಾಲಗಳಲ್ಲಿ ಬರೆಯಲ್ಪಟ್ಟ ಇನ್ನಿತರ ಚಾರಿತ್ರಿಕ ಲೇಖನಗಳ ಸಹಾಯ ದಿಂದ ಫೇಬರ್‌ಕೈಸರ್ ಇವುಗಳನ್ನು ಸಮರ್ಥಿಸುತ್ತಾರೆ): ಯೇಸುಕ್ರಿಸ್ತ ಸಿಂಧೂ ದೇಶವನ್ನು ದಾಟಿ ಅಯಿನ್‌ಜಾಬ್ ಅಥವಾ ಪಂಜಾಬ್ ಎಂಬ ಪಂಚನದಿಗಳ ದೇಶದಲ್ಲಿ ವಾಸಿ ಸುತ್ತಾ ತಾನು ಪ್ರವಾದಿಯೆಂದು ಘೋಷಿಸಿದನು. ಅಲ್ಲಿಂದ ಅವನು ಇಂಡಿಯಾ ದೇಶದ ವಿವಿಧ ಭಾಗಗಳಿಗೆ ಭೇಟಿ ಕೊಟ್ಟನು. ಬೆನಾರಿಸ್ (ವಾರಣಾಸಿ), ಜಗನ್ನಾಥ ಮತ್ತು ರಾಜಗ್ರಹಗಳಲ್ಲಿ ಒಟ್ಟಾರೆ ಸುಮಾರು ಆರು ವರ್ಷಗಳಷ್ಟು ಕಾಲ ಕಳೆದನು. ಆತನ ಉಪದೇಶಗಳನ್ನು ಕೇಳಲು ಜನರು ಗುಂಪುಗುಂಪಾಗಿ ಆತನ ಸುತ್ತಲೂ ನೆರೆಯುತ್ತಿದ್ದರು. ಆದರೆ ಯೇಸುಕ್ರಿಸ್ತ ಮಾನವರ ಸಮತ್ವದ ಕುರಿತು ಉಪದೇಶಿಸಿದಾಗ ಬ್ರಾಹ್ಮಣರು ಕೋಪಿಷ್ಠರಾದರು. ಬ್ರಾಹ್ಮಣರೂ ಶೂದ್ರರೂ ಸಮಾನರೆಂಬ ಸೂಚನೆ ಬ್ರಾಹ್ಮ ಣರ ದೃಷ್ಟಿಯಲ್ಲಿ ಧರ್ಮದ್ರೋಹವಾಗಿತ್ತು. ಬ್ರಾಹ್ಮ ಣರು ಉಪದ್ರವಿಸಲು ಪ್ರಯತ್ನಿಸಿದುದರಿಂದ ಯೇಸುಕ್ರಿಸ್ತ ಹಿಮಾಲಯ ಪ್ರದೇಶಗಳಿಗೆ ಓಡಿಹೋಗಿ ಅಲ್ಲಿಂದ ಪರ್ಶಿ ಯಕ್ಕೆ ಹೋಗಿ ಕೊನೆಗೆ ತನ್ನ 29ನೇ ವಯಸ್ಸಿನಲ್ಲಿ ಇಸ್ರಾ ಯೆಲ್ ದೇಶವನ್ನು ತಲುಪಿದನೆಂದು ನೋಟೋವಿಚ್ ತನ್ನ ಭಾಷಾಂತರದಲ್ಲಿ ಬರೆದಿರುವನು. (ಫೇಬರ್‌ಕೈಸರ್ ತನ್ನ ವಾದವನ್ನು ಫೊಟೋ ಮುಖಾಂತರ ಪ್ರತಿಮಾಡಲಾದ ಹಸ್ತಲಿಖಿತ ಲೇಖನಗಳು, ಭಾಷಾಂತರಗಳು ಮತ್ತು ವಿವ ರಣಾ ಪಟ್ಟಿಗಳಿಂದ ಸಮರ್ಥಿಸಿರುವರು).

ಯೇಸುಕ್ರಿಸ್ತನಿಗೆ ಭಾರತದ ಕುರಿತು ಮೊದಲೇ ಇದ್ದ ಆಸಕ್ತಿ ಅಥವಾ ಆಕರ್ಷಣೆ ಆತನು ಶಿಲುಬೆಯ ಸಂಭವದ ನಂತರ ಭಾರತಕ್ಕೆ ಹಿಂತಿರುಗಲು ಪ್ರೇರೇಪಿಸಿತು. ಯೇಸು ಕ್ರಿಸ್ತ ಶಿಲುಬೆಯಲ್ಲಿ ಮೃತಪಟ್ಟಿಲ್ಲವೆಂಬ ವಾದವನ್ನು ಫೇಬರ್ ಕೈಸರ್ ಮೂರು ಪ್ರಧಾನ ಆಧಾರಗಳ ಸಹಾಯ ದಿಂದ ಸಮರ್ಥಿಸುತ್ತಾರೆ. ಪಿಲಾತನು ಯೇಸುಕ್ರಿಸ್ತರ ಕುರಿತು ಬಹಳ ಸಹಾನುಭೂತಿಯುಳ್ಳವನಾಗಿದ್ದನೆಂಬುದು ಪ್ರಥಮ ಆಧಾರವಾಗಿದೆ. ಕ್ರಿ. ಶ. 32ನೆ ಇಸವಿಯಲ್ಲಿ ಪಿಲಾತನು ರೋಮನ್ ಚಕ್ರವರ್ತಿ ಟೈಬೀರಿಯಸ್ ಸೀಜರ ನಿಗೆ ಬರೆದ ಪತ್ರದಲ್ಲಿ ಪಿಲಾತನು ಯೇಸುಕ್ರಿಸ್ತರನ್ನು ದೇವರ ಮಗನೆಂದು ಒಪ್ಪಿಕೊಂಡಿದ್ದಾನೆ. (ಈ ಪತ್ರ ರೋಮಿನ ವೆಟಿಕನ್ ಲೈಬ್ರರಿಯಲ್ಲಿದೆ). ಈ ಕಾರಣದಿಂದ ಲೇ ಯೇಸುಕ್ರಿಸ್ತರನ್ನು ಶಿಲುಬೆಗೇರಿಸುವುದನ್ನು ಪಿಲಾ ತನು ಶುಕ್ರವಾರದ ತನಕ ಮುಂದೂಡಿ ಆತನ ದೇಹ ಶಿಲು ಬೆಯಲ್ಲಿ ಹೆಚ್ಚು ಹೊತ್ತು ತೂಗಾಡದ ಹಾಗೆ ಮಾಡಿದನು.

ಯೇಸುಕ್ರಿಸ್ತರನ್ನು ಶಿಲುಬೆಯಿಂದಿಳಿಸಿದಾಗ ಅವರು ಮೃತರಾಗಿರಲಿಲ್ಲವೆಂಬುದು ಎರಡನೆಯ ಆಧಾರವಾಗಿದೆ. ಮೃತದೇಹದ ಗಾಯದಿಂದ ಬರೇ ರಕ್ತ ಹರಿಯುತ್ತಿದೆ ಯೆಂದು ವೈದ್ಯಕೀಯ ಸಾಕ್ಷ್ಯಗಳಿಂದ ತಿಳಿಯುತ್ತದೆಯೆಂ ದೂ ಆದರೆ ಯೇಸುಕ್ರಿಸ್ತನ ಪಕ್ಕವನ್ನು ಒಬ್ಬ ಸೈನಿಕನು ಈಟಿಯಿಂದ ಚುಚ್ಚಿದಾಗ ರಕ್ತವೂ ನೀರೂ ತಡೆಯಿಲ್ಲದೆ ಹರಿಯಿತೆಂದು ಫೇಬರ್‌ಕೈಸರ್ ಹೇಳುತ್ತಾರೆ.

ಯೇಸುಕ್ರಿಸ್ತನ ದೇಹವನ್ನು ಭೂಗರ್ಭದ ಸಮಾಧಿ ಯಲ್ಲಿ ಯಹೂದ್ಯರ ಆಚಾರಗಳ ಪ್ರಕಾರ ಹೂಳದೆ ಗಾಳಿಯ ಸೌಕರ್ಯವಿದ್ದು ದೊಡ್ಡ ರೂಮಿನಂತಿದ್ದ ಮತ್ತು ಅದರ ಒಳಸೇರಿ ವೈದ್ಯರು ಶುಶ್ರೂಷಿಸಬಹುದಾದ ಶವಕುಟೀರದಲ್ಲಿ ಇರಿಸಲಾಯಿತೆಂಬುದು ತನ್ನ ವಾದವನ್ನು ಸಮರ್ಥಿಸಲಿಕ್ಕಾಗಿ ಫೇಬರ್–ಕೈಸರ್ ವ್ಯಕ್ತಪಡಿಸಿರುವ ಮೂರನೆಯ ಆಧಾರವಾಗಿದೆ.

ತನ್ನ ವಾದವನ್ನು ದೃಢಪಡಿಸಲಿಕ್ಕಾಗಿ ಫೇಬರ್– ಕೈಸರ್, ಸ್ಟುಟ್‌ಗಾರ್ಟ್ ನಗರದ ಜರ್ಮನ್ ಇನ್‌ಸ್ಟಿಟ್ಯೂಟಿ ನ ಡಾಕ್ಟರ್ ಕುರ್ಟ್ ಬೆರ್ನಾರವರು ಪೋಪ್ ಜಾನ್ XXIIರಿಗೆ ಕ್ರಿ. ಶ. 1909ರಲ್ಲಿ ಬರೆದ ಪತ್ರದಿಂದ ಉದ್ಧರಣೆಗಳನ್ನು ಕೊಟ್ಟಿದ್ದಾರೆ. ಶಿಲುಬೆಯಿಂದ ಕೆಳ ಗಿಳಿಸಿದ ಯೇಸುಕ್ರಿಸ್ತನ ಶರೀರವನ್ನು ಆವರಿಸಲು ಉಪ

ಯೋಗಿಸಲ್ಪಟ್ಟುದೆಂದು ನಂಬಲಾದ ಪವಿತ್ರ ವಸ್ತ್ರದ ಕುರಿತು ಬೆರ್ನಾ ಆ ಪತ್ರದಲ್ಲಿ ವಿವರಿಸಿರುವರು. ಶಾರೀರಿಕ ದ್ರವಗಳು, ಗಾಯದ ಗುರುತುಗಳು, ಶರೀರದ ಅವಯವಗಳ ಗುರುತುಗಳು ಆ ವಸ್ತ್ರದಲ್ಲಿ ಮೂಡಿ ಬಂದಿದ್ದು ಆ ವಸ್ತ್ರದಲ್ಲಿ ಸುತ್ತಲ್ಪಟ್ಟ ವ್ಯಕ್ತಿ ಜೀವಂತನೂ ಉಸಿರಾಡುತ್ತಿದ್ದವನೂ ಆಗಿದ್ದನೆಂದು ಸೂಚಿಸುತ್ತದೆಯೆಂದೂ ಆದುದರಿಂದ ಈಗ ಟ್ಯೂರಿನ್ ನಗರದಲ್ಲಿ ಸುರಕ್ಷಿತವಾಗಿ ಇಟ್ಟಿರುವ ಆ ಬಟ್ಟೆಯಲ್ಲಿ ಸುತ್ತಲ್ಪಟ್ಟ ವ್ಯಕ್ತಿ ಖಂಡಿತವಾಗಿಯೂ ಸತ್ತಿರಲಿಲ್ಲವೆಂದು ಕುರ್ಟ್ ಬೆರ್ನಾ ನಿಖರವಾಗಿ ಹೇಳುತ್ತಾರೆ.

ಪ್ಯಾಲೆಸ್ತಿನ್ ದೇಶದಲ್ಲಿ ತಾನುಳಿದರೆ ತನಗೊದಗಬಹುದಾದ ತೊಂದರೆಗಳಿಂದ ಭೀತನಾಗಿ ಯೇಸುಕ್ರಿಸ್ತ ಪೂರ್ವ ದೇಶಗಳ ಕಡೆಗೆ ತೆರಳಿದನೆಂದೂ ಇದಲ್ಲದೆ ಈ ವಿದೇಶ ಯಾತ್ರೆಗೆ ಇನ್ನೊಂದು ಕಾರಣಸಹ ಇದ್ದಿತೆಂದು ಫೇಬರ್-ಕೈಸರ್ ಹೇಳುತ್ತಾರೆ: ಯೇಸು ಕ್ರಿಸ್ತನ ಆಗಮನದ ಪ್ರಥಮ ಉದ್ದೇಶ ಇಸ್ರಾಯೆಲ್ ರಾಜ್ಯದ ಜನರಿಗೆ ಕ್ರೈಸ್ತ ಧರ್ಮವನ್ನೂ, ಸತ್ಯವನ್ನೂ ಬೋಧಿಸುವುದಾಗಿತ್ತು. ಇಸ್ರಾಯೆಲ್ ಮನೆತನದ ಕಳೆದು ಹೋದ ಗೋತ್ರಗಳನ್ನು ಕಂಡು ಹಿಡಿದು ಅವರಿಗೆ ಸಹ ದೇವರ ಸಂದೇಶ ತಲಪಿಸುವುದು ಎರಡನೆಯ ಉದ್ದೇಶವಾಗಿತ್ತು. ಕಾಶ್ಮೀರದಲ್ಲಿ ತನ್ನ ನವಜೀವನದ ಅವಧಿಯಲ್ಲಿ ಯೇಸುಕ್ರಿಸ್ತನು ಇದೇ ಕಾರ್ಯದಲ್ಲಿ ಪ್ರವೃತ್ತನಾಗಿದ್ದನೆಂದು ಫೇಬರ್-ಕೈಸರ್ ಹೇಳುತ್ತಾರೆ.

ಅಫಘಾನಿಸ್ಥಾನ ಮತ್ತು ಕಾಶ್ಮೀರ ರಾಜ್ಯಗಳ ಜನರು ಇಸ್ರಾಯೆಲ್ ಸಂತತಿಗೆ ಸೇರಿದವರೆಂಬುದಕ್ಕೆ ಫೇಬರ್-ಕೈಸರ್ ಅನಿಷೇಧ್ಯ ಪುರಾವೆಗಳನ್ನು ಕೊಟ್ಟಿದ್ದಾರೆ. ಫೇಬರ್ ಕೈಸರ್ ಕಾಶ್ಮೀರದ ಯೂಸ್‌ಮಾರ್ಗ್ ಎಂಬಲ್ಲಿ ಸಂದರ್ಭವಶಾತ್ ಒಂದು ಗುಂಪಿನ ಜನರನ್ನು ಭೇಟಿಯಾದಾಗ, ತಾವು ಇಸ್ರಾಯೆಲ್ ಸಂತತಿಗೆ ಸೇರಿದವರೆಂದೂ ತಾವು ಕ್ರೈಸ್ತರ ಸಮಾಧಿಯನ್ನು ಆದರ ಭಾವದಿಂದ ಕಾಣುವವರೆಂದೂ ಅವರು ಹೇಳಿದರು.........

ಬೈಬಲಿನ ಕೆಲವು ನ್ಯೂನತೆಗಳೂ ದೋಷಗಳೂ ಫೇಬರ್-ಕೈಸರರನ್ನು ಯೇಸುಕ್ರಿಸ್ತನ ಜೀವನದ ಕುರಿತು ಹೆಚ್ಚಿಗೆ ಪರಿಶೋಧಿಸಲು ಪ್ರೇರೇಪಿಸಿದರೆ ಈ ಗ್ರಂಥದ ಪಾರಾಯಣದಿಂದ ಇನ್ನಷ್ಟು ಪ್ರಶ್ನೆಗಳು ಉತ್ತರ ಸಿಗದೆ ನಮ್ಮಲ್ಲಿಯೇ ಉಳಿದುಕೊಳ್ಳುತ್ತವೆ. ಒಂದು ಪ್ರಧಾನ ಪ್ರಶ್ನೆ ಇದಾಗಿದೆ: ಕ್ರೈಸ್ತ ಧರ್ಮದ ಮುಖ್ಯ ಸಾರ ಸತ್ಯ ಮತ್ತು ಭಕ್ತಿಯಾಗಿರುವಾಗ ಶಿಷ್ಯರು ಉದ್ದೇಶಪೂರ್ವಕವಾಗಿಯೇ ತಮ್ಮ ಅನುಯಾಯಿಗಳನ್ನು ದಾರಿ ತಪ್ಪುವಂತೆ ಮಾಡುವರೇ? ಇದೇ ಪ್ರಶ್ನೆಯನ್ನು ಇನ್ನೊಂದು ರೀತಿಯಲ್ಲಿ ಹೀಗೂ ವ್ಯಕ್ತಗೊಳಿಸಬಹುದು: ಮತಾಂತರಗೊಳಿಸುವ ಉದ್ದೇಶದಿಂದ ಶಿಷ್ಯರು ಬೈಬಲ್ ಸಂಭವಗಳನ್ನು (ಪುನರುತ್ಥಾನ, ಆಕಾಶಾರೋಹಣ ಮೊದಲಾದುವುಗಳನ್ನು) ತಪ್ಪಾಗಿಯಾಗಲಿ, ನಾಟಕೀಯವಾಗಿಯಾಗಲಿ ನಿರೂಪಿಸುವ ಅಗತ್ಯವಿತ್ತೇ? ಕ್ರೈಸ್ತಧರ್ಮವು ಇಂತಹ ಟೊಳ್ಳು ಮತ್ತು ಕೃತ್ರಿಮವಾಗಿ ನಿರ್ಮಿತ ಅಸ್ತಿವಾರದ ಮೇಲೆ ನೆಲೆನಿಂತಿದ್ದರೆ ಅದು ಕಾಲದ ಪರೀಕ್ಷೆಯಲ್ಲಿ ಹೇಗೆ ಉತ್ತೀರ್ಣಗೊಂಡಿತು? *

ಫೇಬರ್-ಕೈಸರ್ ಈ ಸುಲಭ ಆದರೆ ಪ್ರಧಾನವಾದ ಪ್ರಶ್ನೆಗಳನ್ನು ಉತ್ತರಿಸಿದ್ದರೆ ಅವರ ವಾದವು ವಿಮರ್ಶಕರ ಆಕ್ರಮಣವನ್ನು ತಡೆದು ನಿಲ್ಲಲು ಹೆಚ್ಚು ಸಮರ್ಥವಾಗುತ್ತಿತ್ತು.

ಕೃಪೆ: TIMES OF INDIA, BOMBAY
(6—11—1977)

ಅನುವಾದಕ: ಎಂ. ಯು. ರಶೀದ್.

---

*ಬೈಬಲಿನಲ್ಲಿ ಸಂಭವಿಸಿರುವ ಹಸ್ತಕ್ಷೇಪಗಳ ಕುರಿತು ಕ್ರೈಸ್ತವ ಲೋಕವೇ ಸಮ್ಮತಿಸಿದೆ. ಯೇಸುಕ್ರಿಸ್ತರ ಶಿಷ್ಯರ ಭಕ್ತಿ ಮತ್ತು ಸತ್ಯ ಸಂಧತೆಯ ಕುರಿತು ಹೇಳುವುದಾದರೆ ಅವರಲ್ಲೊಬ್ಬ ಮೂವತ್ತು ರೂಪಾಯಿಗಳಿಗಾಗಿ ತನ್ನ ಗುರುವನ್ನು ವಿರೋಧಿಗೊಪ್ಪಿಸಲು ಸನ್ನದ್ಧನಾದನು. ಇನ್ನೊಬ್ಬನು ತನ್ನ ಮತ್ತು ಯೇಸುಕ್ರಿಸ್ತರ ಸಂಬಂಧವನ್ನು ಅಲ್ಲಗಳೆದು ಯೇಸುಕ್ರಿಸ್ತರನ್ನು ಶಪಿಸಿದನು—ಈ ಸಂಗತಿಗಳು ಗಮನಾರ್ಹವಾಗಿವೆ. ಕಾಲದ ಪರೀಕ್ಷೆಯಲ್ಲಿ ಉತ್ತೀರ್ಣವಾಗುವ ನಂಬಿಕೆಗಳ ವಿಷಯದಲ್ಲಿ ಈ ರೀತಿ ಹೇಳಬಹುದು: ಎಲ್ಲಾ ಧರ್ಮಗಳಿಗೆ ಸಂಬಂಧಿಸಿದ ಇನ್ನೆಷ್ಟೋ ಐತಿಹ್ಯಗಳೂ ಮೂಢ ನಂಬಿಕೆಗಳೂ "ಕಾಲದ ಪರೀಕ್ಷೆಯಲ್ಲಿ ಉತ್ತೀರ್ಣವಾಗಿ" ಈ ಕಾಲದ ತನಕ ಬಂದಿದ್ದರೂಅವೆಲ್ಲಾ ಈ ಆಧುನಿಕ ಯುಗದಲ್ಲಿ ತಮ್ಮ ಹುಳುಕನ್ನು ಬಯಲುಗೊಳಿಸಿವೆ.
—ಅನುವಾದಕ

# ಅಹ್ಮದಿಯಾ ವಾರ್ತೆಗಳು

## ಕೇರಳ ಅಹ್ಮದಿಯಾ ವಾರ್ಷಿಕ ಸಮ್ಮೇಳನ



ಕಾಸರಗೋಡಿನಲ್ಲಿ ನಡೆದ ಅಹ್ಮದಿಯಾ ವಾರ್ಷಿಕದ ಪ್ರಥಮದಿನ ಸಮ್ಮೇಳನವನ್ನು ಭಾರತದ ಅಹ್ಮದಿಯಾ ಮುಖ್ಯ ಪ್ರಚರಣ ಕಾರ್ಯದರ್ಶಿ ಅಲ್‌ಹಾಜ್ ಮೌಲಾನ ಷರೀಫ್ ಅಹ್ಮದ್ ಅಮೀನಿಯವರೂ (ಬಲಬದಿ ಚಿತ್ರ), ಸಮಾರೋಪ ಸಮ್ಮೇಳನವನ್ನು ಬಿಹಾರದ ಎಡಿಷನಲ್ ಪೋಲೀಸ್ ಐ. ಜಿ. (ಸಿ.ಐ.ಡಿ.) ಸೈಯ್ಯದ್ ಫಝ್ಲುಲ್ ಅಹ್ಮದ್‌ರವರೂ (ಎಡಬದಿ ಚಿತ್ರ) ಉದ್ಘಾಟಿಸಿದರು.

---

21ನೇ ಕೇರಳ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಮೇ 6 ಮತ್ತು 7ರಂದು ಕಾಸರಗೋಡಿನಲ್ಲಿ ಜರಗಿತು.

ಪ್ರಥಮದಿನದ ಸಮ್ಮೇಳನವನ್ನು ಭಾರತದ ಅಹ್ಮದಿಯಾ ಮುಖ್ಯ ಪ್ರಚರಣ ಕಾರ್ಯದರ್ಶಿ ಅಲ್‌ಹಾಜ್ ಮೌಲಾನ ಷರೀಫ್ ಅಹ್ಮದ್ ಅಮೀನಿಯ H. A. (ಖಾದಿಯಾನ್, ಪಂಜಾಬ್) ಅವರು ಉದ್ಘಾಟನೆ ಮಾಡಿದರು. ಎಲ್ಲಾ ಪೂರ್ವಿಕ ಧರ್ಮಗ್ರಂಥಗಳಲ್ಲಿ ಭವಿಷ್ಯ ನುಡಿಯಲ್ಪಟ್ಟ ಲೋಕೋದ್ಧಾರಕ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಆಗಿರುವರೆಂದೂ ಅವರಿಂದ ಸುಮಾರು 90 ವರ್ಷಗಳ ಮೊದಲು ಸ್ಥಾಪಿತಗೊಂಡ ಅಹ್ಮದಿಯಾ ಸಂಘಟನೆಯು ಎಲ್ಲಾ ವಿರೋಧಗಳನ್ನು ಎದುರಿಸುತ್ತಾ ದಿವ್ಯ ವಾಗ್ದಾನಗಳ ಪ್ರಕಾರ ಲೋಕದಲ್ಲೆಲ್ಲೂ ತನ್ನ ಶಾಂತಿಸಂದೇಶದೊಂದಿಗೆ ಮುನ್ನುಗ್ಗುತ್ತಾ ಇದೆಯೆಂದೂ ಈಗ ಅದರ ಸಂಖ್ಯಾಬಲ ಒಂದು ಕೋಟಿಯನ್ನೂ ಮೀರಿರುವುದೆಂದೂ ಅವರು ಹೇಳಿದರು. ಮಾನವರ ಸಹಜ ಗುಣಗಳ ಸದುಪಯೋಗದಿಂದ ಉತ್ತಮ ಸಮಾಜ ನಿರ್ಮಾಣ ಸಾಧ್ಯವೆಂದು ಅವರು ನುಡಿದರು. ಅವರು ಭಾಷಣವನ್ನು ಮುಂದುವರಿಸುತ್ತಾ ಯಾರಿಗಾದರೂ ತಮ್ಮ ದುಷ್ಕೃತ್ಯಗಳ ಶಾಪ ತಪ್ಪುವುದಿಲ್ಲವೆಂದು ಹೇಳಿದರು. ಕೆಲವೇ ತಿಂಗಳುಗಳ ಹಿಂದೆ ಮಿ। ಭುಟ್ಟೋ ಪಾಕಿಸ್ಥಾನದ ಅಹ್ಮದಿಯರನ್ನು ಚಿತ್ರಹಿಂಸೆಗೆ ಗುರಿಮಾಡಿದ್ದರು. ಈಗ ಸ್ವತಃ ಭುಟ್ಟೋ ಅವರೇ ಸಂಕಷ್ಟ ಅನುಭವಿಸುತ್ತಿರುವುದಾಗಿ ಅವರು ನುಡಿದರು. ಅವರು ಮಾಡಿದ ಉರ್ದು ಭಾಷಣವನ್ನು ಕೇರಳ ಕೇಂದ್ರ ಸಮಿತಿಯ ಅಧ್ಯಕ್ಷ ಜನಾಬ್ ಎಸ್. ಅಮೀರಲಿ ಸಾಹೇಬರು ಭಾಷಾಂತರಿಸಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಕೇರಳ ರಾಜ್ಯ ಅಹ್ಮದಿಯಾ ಮಿಶನರಿ ಮೌಲವಿ ಅಬುಲ್ ವಫಾ ಸಾಹೇಬರು ವಹಿಸಿದ್ದರು. ಅಹ್ಮದಿಯಾ ಸಂಘಟನೆಯ ವಿಶ್ವಾಸಾದರ್ಶಗಳ ಕುರಿತೂ ಅಹ್ಮದಿಯರಿಗೆ ಮತ್ತು ಇತರ

ಮುಸ್ಲಿಮರಿಗೆ ಇರುವ ವ್ಯತ್ಯಾಸಗಳೇನೆಂದೂ ಅವರು ವಿವರಿಸಿದರು.

ನಂತರ ಭಾಷಣ ಮಾಡಿದ ಜನಾಬ್ ಎಂ. ಪಿ. ಇಬ್ರಾಹಿಂ ಸಾಹೇಬರು ಮತಸೌಹಾರ್ದಕ್ಕಾಗಿ ಇಸ್ಲಾಂ ಧರ್ಮ ನಿರ್ದೇಶಿಸುವ ಕೆಲವು ತತ್ವಗಳನ್ನು ವಿವರಿಸಿದರು. ಪವಿತ್ರ ಖುರ್‌ಆನಿನ ಅಧ್ಯಾಪನೆಗಳನ್ನೂ ಮುಹಮ್ಮದ್ ಪೈಗಂಬರರ ವಚನಗಳನ್ನೂ ಅಹ್ಮದಿಯಾ ಸಂಘಟನೆಯ ಸ್ಥಾಪಕರ ಹೇಳಿಕೆಗಳನ್ನೂ ಆಧಾರವಾಗಿರಿಸಿಕೊಂಡು ಭಾರತದಲ್ಲಿ ಅವತರಿಸಿದ ಮಹಾತ್ಮರಾದ ಶ್ರೀಕೃಷ್ಣ, ಶ್ರೀರಾಮಚಂದ್ರ, ಶ್ರೀಬುದ್ಧ ಮೊದಲಾದವರನ್ನು ದೇವರ ಸತ್ಯ ಸಂದೇಶವಾಹಕರೆಂದು ಅಹ್ಮದಿಯರು ನಂಬುತ್ತಾರೆಂದು ಅವರು ವಿವರಿಸಿ ಹೇಳಿದರು.

ಜನಾಬ್ ಎಂ. ಮುಹಮ್ಮದ್ ಸಾಹೇಬ್ ಎಂ. ಎ. ಇಂದಿನ ಲೋಕದಲ್ಲಿ ಧರ್ಮದ ನೆಲೆಯೇನೆಂದೂ, ಧರ್ಮವು ಮಾನವರಿಗೆ ಏನನ್ನು ನೀಡುತ್ತದೆಯೆಂದೂ ತಮ್ಮ ಭಾಷಣದಲ್ಲಿ ಹೇಳಿದರು. ಮೌಲವಿ ಮುಹಮ್ಮದ್ ಯೂಸುಫ್ ಸಾಹೇಬರು ಪ್ರವಾದಿತ್ವತದ ಕುರಿತು ಭಾಷಣ ಮಾಡಿದರು.

ಪ್ರಾರಂಭದಲ್ಲಿ, ಎಸ್. ಅಮೀರಲಿ ಸಾಹೇಬರು ಸ್ವಾಗತ ಭಾಷಣ ಮಾಡುತ್ತಾ ಭಾಷಣಗಾರರನ್ನು ಪರಿಚಯಪಡಿಸಿದರು.

## ಸಮಾರೋಪ ಸಮ್ಮೇಳನ:

ತಾರೀಕು 7ರಂದು ಜರಗಿದ ಸಮಾರೋಪ ಸಮ್ಮೇಳನವನ್ನು ಬಿಹಾರದ ಎಡಿಷನಲ್ ಪೊಲೀಸ್ ಐ. ಜಿ. ಸಯ್ಯದ್ ಫಝ್ಲುಲ್ ಅಹ್ಮದ್ ಸಾಹೇಬ್ M.A. ಉದ್ಘಾಟಿಸಿದರು. ಅವರು ಅಹ್ಮದಿಯಾ ಸಂಘಟನೆಯ ಸ್ಥಾಪಕರ ಶಿಷ್ಯರಾದ ಸಯ್ಯದ್ ವಿಸಾರತ್ ಹುಸೈನ್ ಸಾಹೇಬರ ಪುತ್ರ ಹಾಗೂ ಪ್ರಸಿದ್ಧ ಉರ್ದು ಸಾಹಿತಿಯಾದ– ಪಾಟ್ನಾ ವಿಶ್ವವಿದ್ಯಾಲಯದ ಉರ್ದು ವಿಭಾಗದ ಮುಖ್ಯಸ್ಥರಾಗಿದ್ದ — ಪ್ರೊಫೆಸರ್ ಸಯ್ಯದ್ ಅಖ್ತರ್ ಅಹ್ಮದ್ ಸಾಹೇಬರ ಸಹೋದರರಾಗಿದ್ದಾರೆ.

ಲೋಕದಲ್ಲಿರುವ ಮಾನವರೆಲ್ಲರ ಆಧ್ಯಾತ್ಮಿಕ, ನೈತಿಕ, ಸಾಮೂಹಿಕ, ಸಾಂಪತ್ತಿಕ ಹಾಗೂ ರಾಜಕೀಯ ಸಹೋದರತೆಯನ್ನು ಇಸ್ಲಾಂ ಮತವು ಬಯಸುತ್ತದೆಯೆಂದು 'ಇಸ್ಲಾಂ ಹಾಗೂ ಲೋಕಶಾಂತಿ' ಎಂಬ ವಿಷಯದಲ್ಲಿ ಭಾಷಣ ಮಾಡುತ್ತಾ ಫಝ್ಲುಲ್ ಸಾಹೇಬರು ನುಡಿದರು. ಇಸ್ಲಾಂ ಧರ್ಮದ ಪಾವಿತ್ರ್ಯವನ್ನು ಕಾಪಾಡಿಕೊಳ್ಳುವುದೇ ಯಥಾರ್ಥ ಜಿಹಾದ್. ಮತದ ಹೆಸರಿನಲ್ಲಿ ಕಠಾರಿ ಎತ್ತುವುದು, ರಕ್ತ ಹರಿಯಿಸುವುದು ಜಿಹಾದ್ ಅಲ್ಲವೆಂದು ಅವರು ಅಭಿಪ್ರಾಯಪಟ್ಟರು.

ಅಧ್ಯಕ್ಷತೆಯನ್ನು ಜನಾಬ್ ಎಸ್. ಅಮೀರಲಿ ಸಾಹೇಬರು ವಹಿಸಿದ್ದರು.

"ದೈವಾಸ್ತಿತ್ವ-ವೈಜ್ಞಾನಿಕ ದೃಷ್ಟಿಯಲ್ಲಿ" ಎಂಬ ವಿಷಯದಲ್ಲಿ ಮಾತನಾಡಿದ ಹೈದರಾಬಾದಿನ ಉಸ್ಮಾನಿಯಾ ಯುನಿವರ್ಸಿಟಿಯ ಖಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ। ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾವುದ್ದೀನ್ ಸಾಹೇಬ್, M. Sc. Ph D. ಅವರು ಎಲ್ಲಾ ಧರ್ಮಗಳು ಅನುಯಾಯಿಗಳಿಗೆ ದೈವಾಸ್ತಿತ್ವದ ಭೋಧನೆಯನ್ನು ನೀಡುತ್ತದೆಯೆಂದು ಹೇಳಿದರು. ಪವಿತ್ರ ಖುರ್‌ಆನಿನ ಅನೇಕ ವಾಕ್ಯಗಳನ್ನು ಉದಾಹರಿಸುತ್ತಾ ಅವರು ಇಸ್ಲಾಂ ಧರ್ಮ ದೈವಾಸ್ತಿಕ್ಯವನ್ನು ಹೇಗೆ ಸಮರ್ಥಿಸುತ್ತಿದೆಯೆಂದು ವಿವರಿಸಿದರು.

"ಖಿಲಾಫತಿ"ನ ಕುರಿತು ಮಾತನಾಡಿದ ಮೌಲವಿ ಅಬುಲ್ ವಫಾ ಸಾಹೇಬರು, ಖಿಲಾಫತ್ ಇಸ್ಲಾಮಿನ ಅವಿಭಾಜ್ಯ ಘಟಕವೆಂದು ಅಭಿಪ್ರಾಯಪಟ್ಟರು. ಖಿಲಾಫತ್ ಇಲ್ಲದೆ ಆದ ನಂತರ ಮುಸ್ಲಿಮರ ಐಕ್ಯಕ್ಕೆ ಭಂಗವುಂಟಾಯಿತೆಂದು ಅವರು ಹೇಳಿದರು.

"ಇಸ್ಲಾಂ ಮತ್ತು ಇತರ ಮತಗಳು" ಎಂಬ ವಿಷಯದ ಕುರಿತು ಭಾಷಣ ಮಾಡಿದ ಮೌಲವಿ ಮುಹಮ್ಮದ್ ಯೂಸುಫ್ ಸಾಹೇಬರು ವಿವಿಧ ಧರ್ಮಗಳ ಕುರಿತು ವಿವರಿಸಿದರು.

ಕೊನೆಗೆ ಸಮ್ಮೇಳನದ ಕನ್ವೀನರ್ ಎ. ಕ್ಯೂ. ಮುಸ್ಲಿಂ ಕೃತಜ್ಞತೆಗಳನ್ನು ಅರ್ಪಿಸಿದರು.

ಸಮ್ಮೇಳನದ ಅಂಗವಾಗಿ ನಡೆಸಿದ ಸ್ಪರ್ಧೆಗಳಲ್ಲಿ ಈ ಕೆಳಗಿನವರು ಪ್ರಥಮ ಬಹುಮಾನವನ್ನು ಪಡೆದರು. ಖುರ್‌ಆನ್ ಪಾರಾಯಣ: ಸೈನುದ್ದೀನ್ (ಪಳ್ಳಿಪುರ)

ಭಾಷಣ: ಅಬ್ದುಲ್ ರವೂಫ್ (ಕಣ್ಣನ್ನೂರ್) ಭಕ್ತಿಗೀತೆ: ಕಮರುದ್ದೀನ್ (ಮಂಜೇರಿ).

## ಫರ್ಝುಲ್ ಅಹ್ಮದ್ ಸಾಹೇಬರ ಸಂದರ್ಶನ

**ಮಂಜೇಶ್ವರ:** ಜನಾಬ್ ಎಂ. ಅಬ್ದುಲ್ ರಶೀದ್ (ಯುಗರಶ್ಮಿ ಸಂಪಾದಕರ ತಂದೆ) ಅವರ ಆಮಂತ್ರಣ ವನ್ನು ಸ್ವೀಕರಿಸಿ, ಜನಾಬ್ ಸಯ್ಯದ್ ಫರ್ಝುಲ್ ಅಹ್ಮದ್ ಸಾಹೇಬರು 7ನೇ ತಾರೀಕಿನಂದು ಮಧ್ಯಾಹ್ನ ಮಂಜೇಶ್ವರ ಕ್ಕೆ ಭೇಟಿಯಿತ್ತರು. ರಶೀದ್ ಸಾಹೇಬರ ಮನೆಯಲ್ಲಿ ಅವರಿಗೆ ಸತ್ಕಾರವನ್ನು ನೀಡಲಾಯಿತು. ಅಮೀನಿ ಸಾಹೇಬರೂ, ಹಾಫಿಝ್ ಸಾಹೇಬರೂ ಅವರ ಸಂಗಡ ವಿದ್ದರು.

**ಮಂಗಳೂರು:** 9ನೇ ತಾರೀಕಿನಂದು ಮಧ್ಯಾಹ್ನ ಕಣ್ಣನ್ನೂರಿನಿಂದ ಮದ್ರಾಸ್ ಮೈಲಿನಲ್ಲಿ ಆಗಮಿಸಿದ ಫರ್ಝುಲ್ ಸಾಹೇಬರನ್ನು ಮಂಗಳೂರು ರೈಲ್ವೇ ನಿಲ್ದಾಣದಲ್ಲಿ ಸ್ಥಳೀಯ ಪೋಲೀಸ್ ಅಧಿಕಾರಿಗಳು ಎದುರುಗೊಂಡರು. ಒಂದು ದಿನ ಇಲಾಖೆಯ ಅತಿಥಿಯಾಗಿ ಉಳಕೊಂಡ ಫರ್ಝುಲ್ ಸಾಹೇಬರು ಅಂದು ಸಾಯಂಕಾಲ ಪಣಂಬೂರಿನ ನವಬಂದರಕ್ಕೆ ಭೇಟಿಯಿತ್ತು ಬೋಟಿನಲ್ಲಿ ಸಮುದ್ರ ವಿಹಾರವನ್ನು ಮಾಡಿದರು. ಮರುದಿನ ಬೆಳಗಾತ ವಿಮಾನ ಮೂಲಕ ಬೆಂಗಳೂರಿಗೆ ಪ್ರಯಾಣಿಸಿದ ಫರ್ಝುಲ್ ಸಾಹೇಬರನ್ನು ಪೋಲೀಸ್ ಡಿಪ್ಯುಟಿ ಸುಪರಿಂಟೆಂಡೆಂಟ್ ಪುಷ್ಪರಾಜ ಶೆಟ್ಟರೂ, ಯುಗರಶ್ಮಿ ಸಂಪಾದಕ ಮುಹಮ್ಮದ್ ಯೂಸುಫ್ ಮತ್ತು ಸ್ಥಳೀಯ ಅಹ್ಮದಿಯಾ ಶಾಖೆಯ ಸೆಕ್ರೆಟರಿ ಎಸ್. ಅಶ್ರಫಲಿ ಅವರೂ ಬೀಳ್ಕೊಟ್ಟರು.

## ಯೇಸುವಿನ ಶಿಲುಬೆಯ ಮೇಲಿನ ಮರಣ ಲಂಡನಿನಲ್ಲಿ ಅಂತಾರಾಷ್ಟ್ರೀಯ ಸೆಮಿನಾರ್

ಲಂಡನ್: ಯು. ಕೆ. ಅಹ್ಮದಿಯಾ ಶಾಖೆಗಳ ವತಿಯಿಂದ "ಶಿಲುಬೆಯಿಂದ ಕ್ರಿಸ್ತನ ವಿಮೋಚನೆ"ಯನ್ನು ಆಧಾರವಾಗಿರಿಸಿ ಕೊಂಡಿರುವ ಒಂದು ಅಂತಾರಾಷ್ಟ್ರೀಯ ಸೆಮಿನಾರನ್ನು ಅಹ್ಮದಿಯಾ ಸಂಘಟನೆಯ ಇಮಾಂ ಹಝ್‌ರತ್ ಹಾಫಿಝ್ ಮಿರ್ಝಾ ನಾಸಿರ್ ಅಹ್ಮದ್ ರವರು ಜೂನ್ 2ನೇ ಶುಕ್ರವಾರದಂದು ಉದ್ಘಾಟನೆ ಮಾಡಿದರು.

ಮೂರುದಿನಗಳ ಈ ಸುಪ್ರಸಿದ್ಧ ಸೆಮಿನಾರ್‌ನ ಅಂಗವಾಗಿ ಒಂದು ಅಂತಾರಾಷ್ಟ್ರೀಯ ಪ್ರದರ್ಶನವನ್ನು ಸಹ ಸಂಘಟಿಸಲಾಗಿದೆ. ಲೋಕ ಅಹ್ಮದಿಯಾ ಕೇಂದ್ರ ರಬ್‌ವಾದಿಂದ ಹೊರಟು ಯುರೋಪಿನ ಕೆಲವು ಪ್ರಧಾನ ಕೇಂದ್ರಗಳನ್ನು ಸಂದರ್ಶಿಸಿದ ನಂತರ ಅಹ್ಮದಿಯಾ ಇಮಾಂ ಲಂಡನ್ ತಲುಪಿರುವರು.

ಯೇಸು ಶಿಲುಬೆಯ ಮೇಲೆ ಮೃತಪಟ್ಟಿಲ್ಲವೆಂಬುದಕ್ಕೆ ಮತಗ್ರಂಥಗಳ ಮತ್ತು ಇತಿಹಾಸ ಸಂಶೋಧನೆಗಳ ಪುರಾವೆಗಳ ಕುರಿತು ಪ್ರಧಾನವಾಗಿ ಸೆಮಿನಾರ್‌ನಲ್ಲಿ ಚರ್ಚೆ ಮಾಡಲಾಗುವುದು. ಈ ಕೆಳಗಿನ ಪ್ರಬಂಧಗಳನ್ನು ಸೆಮಿನಾರ್‌ನಲ್ಲಿ ಸಮರ್ಪಿಸಲಾಗುವುದು.

"ಶಿಲುಬೆಯಿಂದ ಯೇಸುವಿನ ವಿಮೋಚನೆ – ಖುರ್ ಆನ್ ಮತ್ತು ಇಸ್ಲಾಮಿಕ ಪುರಾವೆಗಳು"—ಪ್ರೊಫೆಸರ್ ಅಬ್ದುಸ್ಸಲಾಂ ಮಾಡ್‌ಸನ್ (ಡೆನ್ಮಾರ್ಕ್), "ಶಿಲುಬಾ ಪ್ರಕರಣ — ಬೈಬಲ್ ಪುರಾವೆಗಳು"—ಲಂಡನ್ ಮಸೀದಿಯ ಇಮಾಂ ಮೌಲಾನ ಬಿ. ಎ. ರಫೀಕ್, "ಶಿಲುಬಾ ಸಂಭವದ ನಂತರ ಯೇಸುವಿನ ಯಾತ್ರೆಗಳು"—ಶೈಕ್ ಅಬ್ದುಲ್ ಖಾದರ್ (ಲಾಯಲ್‌ಪುರ್), "ಕಾಶ್ಮೀರದಲ್ಲಿ ಯೇಸುವಿನ ಸಮಾಧಿ"— ಪ್ರೊಫೆಸರ್ ಎಫ್. ಎಂ. ಹಸ್ನೈನ್ (ಕಾಶ್ಮೀರ್), "ಯೇಸುವಿನ ಪದವಿ–ಮನುಷ್ಯನೋ ದೇವನೋ"—ಸರ್ ಮುಹಮ್ಮದ್ ಝಫರುಲ್ಲಾ ಖಾನ್, "ಕಾಣೆಯಾದ ಇಸ್ರಾಯಿಲ್ ಗೋತ್ರಗಳು"— ಎಂ.ಎಂ. ಅಹ್ಮದ್ (ವಾಷಿಂಗ್ಟನ್), "ಟ್ಯೂರಿನ್‌ನಲ್ಲಿರುವ ಪವಿತ್ರ ಬಟ್ಟೆಯ ನಿಜತ್ವ" —ಏಂಡ್ರಿಯಸ್ ಫೇಬರ್-ಕೈಸರ್ (ಸ್ಪೈನ್).

ಪವಿತ್ರ ಬಟ್ಟೆಯ ವಿಶ್ರುತ ಸಂಶೋಧಕನಾದ ಪಶ್ಚಿಮ ಜರ್ಮನಿಯ ಕುರ್ಟ್ ಬರ್ನಾ, ಜೆಕೋಸ್ಲೋವಾಕಿಯದ ಡಾ। ಎಲ್. ಎಸ್. ಫಿಲಿಪ್ಸ್ ಎಂಬವರೂ ಉಪನ್ಯಾಸಗಳನ್ನು ಸಾದರಪಡಿಸುವರು. ಸೆಮಿನಾರಿನ

ಅಂಗವಾಗಿ ವ್ಯವಸ್ಥೆಗೊಳಿಸುವ ಒಂದು ಪ್ರತ್ಯೇಕ ಸಮಾರಂಭದಲ್ಲಿ ಸರ್ ಮುಹಮ್ಮದ್ ಝಫರುಲ್ಲಾ ಖಾನರ "ಶಿಲುಬೆಯಿಂದ ವಿಮೋಚನೆ" ಎಂಬ ಗ್ರಂಥದ ಬಿಡುಗಡೆ ಮಾಡಲಾಗುವುದು. ಇದೇ ಕಳೆದ ಸಪ್ಟೆಂಬರ್‌ನಲ್ಲಿ ಕ್ರೈಸ್ತ ಪಂಡಿತರು ಟ್ಯೂರಿನ್‌ನಲ್ಲಿರುವ ಪವಿತ್ರ ಬಟ್ಟೆಯ ಸಂಬಂಧಿಸಿದ ಸಂಶೋಧನೆಗಳ ಬಗ್ಗೆ ಒಂದು ಅಂತಾರಾಷ್ಟ್ರೀಯ ಸೆಮಿನಾರನ್ನು ಲಂಡನಿನಲ್ಲಿ ಏರ್ಪಡಿಸಿದುದು ಇಲ್ಲಿ ಸ್ಮರಣಾರ್ಹವಾಗಿದೆ.

ಯೇಸುವನ್ನು ಯಹೂದಿಯರು ವಧಿಸಲೂ ಇಲ್ಲ; ಶಿಲುಬೆಗೆ ಹಾಕಿ ಕೊಲ್ಲಲೂ ಇಲ್ಲವೆಂದು ಖುರ್‌ಆನ್ ಸಾರುತ್ತದೆ. ಶಿಲುಬೆಯ ಶಿಕ್ಷೆಯಿಂದ ಮುಕ್ತನಾದ ನಂತರ ಕ್ರಿಸ್ತನು ಪೂರ್ವದೇಶಕ್ಕೆ ಪ್ರಯಾಣಿಸಿದನೆಂದೂ ಕಾಶ್ಮೀರದಲ್ಲಿ ತನ್ನ 120ನೇ ಪ್ರಾಯದಲ್ಲಿ ಮೃತ್ಯುವಶನಾದನೆಂದೂ ಯೇಸುವಿನ ಸಮಾಧಿ ಶ್ರೀನಗರದಲ್ಲಿದೆಯೆಂದೂ ಅಹ್ಮದಿಯಾ ಸಂಘಟನೆ ಘೋಷಿಸುತ್ತದೆ. ಈ ವಸ್ತುತವನ್ನು ರುಜುಪಡಿಸಿ ತೋರಿಸುವ ಹೊಸ ಹೊಸ ಸಂಶೋಧನೆಗಳು ಇತ್ತೀಚೆಗಿನ ಕಾಲದಲ್ಲಿ ನಡೆದಿವೆ. ಟ್ಯೂರಿನ್‌ನಲ್ಲಿರುವ ಪವಿತ್ರ ಬಟ್ಟೆಯ ಸಂಬಂಧಿಸಿದ ಶೋಧನೆ ಇದಕ್ಕೊಂದು ಉದಾಹರಣೆಯಾಗಿದೆ.

ಲಂಡನಿನ "ಶಿಲುಬೆಯಿಂದ ವಿಮೋಚನೆ ಸೆಮಿನಾರ್" ದೂರವ್ಯಾಪಕವಾದ ಪರಿಣಾಮಗಳನ್ನುಂಟುಮಾಡುವ ಒಂದು ಸಮ್ಮೇಳನವಾಗಿರಬಹುದೆಂದು ಪ್ರತೀಕ್ಷಿಸಲಾಗಿದೆ.

(ಮಾತೃಭೂಮಿ 6—6—1978)

**ರೆಕಾರ್ಡಿಂಗ್:** ಪ್ರಸ್ತುತ ಸಮ್ಮೇಳನದ ಎಲ್ಲಾ ಕಾರ್ಯಕ್ರಮಗಳನ್ನು ಧ್ವನಿಮುದ್ರಣ ಮಾಡಲಿಕ್ಕಾಗಿ ಲಂಡನಿನ ಡಿಕ್ಸನ್ ಕಂಪೆನಿ ಒಪ್ಪಿಕೊಂಡಿದೆ. ಅದರ ಕ್ಯಾಸೆಟ್ ಸೆಟ್ಟನ್ನು ಖರೀದಿಸಲಿಚ್ಛಿಸುವವರು ಲಂಡನ್ ಮಸೀದಿಯನ್ನು ಸಂಪರ್ಕಿಸಬಹುದು.

**ಫಿಲ್ಮ್:** ಪ್ರಸ್ತುತ ಸಮ್ಮೇಳನದಲ್ಲಿ ಭಾಗವಹಿಸುವರೆ ಆಗಮಿಸಿದ ಅಹ್ಮದಿಯಾ ಖಲೀಫರ ಭೇಟಿ, ಶುಕ್ರವಾರದ ಖುತ್‌ಬಾ ಭಾಷಣ, ಸಮ್ಮೇಳನದಲ್ಲಿ ಅವರ ಭಾಷಣ ಮೊದಲಾಧ ಕಾರ್ಯಕ್ರಮಗಳನ್ನು ಚಿತ್ರೀಕರಿಸಿದ ಸೂಪರ್ 8 mm ಫಿಲ್ಮ್ 200 ಡಾಲರುಗಳಿಗೆ ಲಭಿಸುತ್ತದೆ. ಫಿಲ್ಮ್‌ನ ಪ್ರತಿ ಖರೀದಿಸಲು ಇಚ್ಛಿಸುವವರು ಈ ಕೆಳಗಿನ ವಿಳಾಸದಲ್ಲಿ ವ್ಯವಹರಿಸಬಹುದು:

Mr. M. D. Shams, Deputy Imam, London Mosque, 16 Gressenhall Road, Southfieids, London, S. W. 18, 5QL.

## ಜಪಾನಿನ ರಾಜಕುಮಾರನಿಗೆ ಅಹ್ಮದಿಯಾ ಸಾಹಿತ್ಯಗಳ ಕೊಡುಗೆ

ಇತ್ತೀಚೆಗೆ ಜಪಾನಿನ ಅಹ್ಮದಿಯಾ ಮಿಶನರಿಯಾದ ಜನಾಬ್ ಅತಾವುಲ್ ಮುಜೀಬ್ ರಾಶಿದ್ ಸಾಹೇಬರು, ಡಾ। ನಾಸಿರ್ ಅಹ್ಮದ್ ಪರ್ವಾಝಿ (Professor, Osaka University of Foreign Studies) ಮತ್ತು ಮಲಿಕ್ ಲಾಲ್‌ಖಾನ್ ಸಾಹೇಬರ ಜೊತೆಗೂಡಿ ಜಪಾನಿನ ರಾಜನ ತಮ್ಮ ರಾಜಕುಮಾರ ಮಿಕಾಸಾನೊ ಮಿಯಾರನ್ನು ಭೇಟಿಯಾಗಿ ಅವರಿಗೆ ಅಹ್ಮದಿಯಾ ಸಂಘಟನೆಯ ಸ್ಥಾಪಕರು ಅರಬಿ ಭಾಷೆಯ ಕುರಿತು ಬರೆದ ಒಂದು ಸಂಶೋಧಕ ಗ್ರಂಥದ ಪ್ರತಿಯನ್ನೂ ಇನ್ನಿತರ ಸಾಹಿತ್ಯಗಳನ್ನೂ ಕಾಣಿಕೆಯಿತ್ತರು.

ಜಪಾನ್ ಓರಿಯೆಂಟಲ್ ಅಸೋಸಿಯೇಶನಿನ ಅಧ್ಯಕ್ಷರಾದ ರಾಜಕುಮಾರ ಮಿಕಾಸಾನೊಮಿಯಾ ಪ್ರಖ್ಯಾತ ಪೌರ್ವಾತ್ಯ ಭಾಷಾತಜ್ಞರಲ್ಲಿ ಒಬ್ಬರಾಗಿದ್ದಾರೆ. ಅವರು ಅರಬಿ ಭಾಷೆಯಲ್ಲಿ ತುಂಬಾ ಆಸಕ್ತಿಯುಳ್ಳವರಾಗಿದ್ದಾರೆ.

ರಾಜಕುಮಾರರು ಪುಸ್ತಕಗಳನ್ನು ಸ್ನೇಹಾದರದಿಂದ ಸ್ವೀಕರಿಸಿ, ಒಂದೊಂದನ್ನೇ ಬಿಡಿಸಿ ನೋಡಿ ಕೃತಜ್ಞತೆಯನ್ನು ಸಲ್ಲಿಸಿದರು.

## ಲೈಬೀರಿಯಾದ ಅಧ್ಯಕ್ಷರಿಗೆ ಖುರ್‌ಆನಿನ ಪಾರಿತೋಷಕ

ಕಳೆದ ಜನವರಿ ತಿಂಗಳಲ್ಲಿ ಲೈಬೀರಿಯಾ ಮಿಶನರಿ ಜನಾಬ್ ಅಬ್ದುಲ್ ಕರೀಂ ಸಾಹೇಬ್ ಷಾಹಿದ್ ಅವರು ಇತರ ಕೆಲವು ಅಹ್ಮದಿಯರ ಜತೆಯಲ್ಲಿ ಲೈಬೀರಿಯಾದ ಅಧ್ಯಕ್ಷರಾದ ಡಾ। ಡಬ್ಲ್ಯೂ. ಆರ್. ಟಾಲ್ಬರ್ಟ್ ಅವರನ್ನು ಭೇಟಿಯಾಗಿ ಖುರ್‌ಆನಿನ ಇಂಗ್ಲಿಷ್ ತರ್ಜುಮೆ

ಯನ್ನೂ ಕೆಲವು ಅಹ್ಮದಿಯಾ ಸಾಹಿತ್ಯಗಳನ್ನೂ ಕಾಣಿಕೆಯಾಗಿತ್ತರು. ಪವಿತ್ರ ಖುರ್‌ಆನ್ ಮತ್ತು ಪೈಗಂಬರರ ಕುರಿತು ಷಾಹಿದ್ ಸಾಹೇಬರು ಅಧ್ಯಕ್ಷರಿಗೆ ವಿವರಿಸಿ ಹೇಳಿದರು. ಲೈಬೀರಿಯಾದಲ್ಲಿ ಅಹ್ಮದಿಯಾ ಪ್ರವರ್ತನೆಗಳ ಕುರಿತು ಅಧ್ಯಕ್ಷರು ವಿಚಾರಿಸಿದರು. ಈ ಭೇಟಿಯ ಸಮಾಚಾರವನ್ನು ವಾರ್ತಾ ಪತ್ರಿಕೆಗಳು ವರದಿಮಾಡಿದುವು; ಮಾತ್ರವಲ್ಲ ಅಲ್ಲಿಯ ರೇಡಿಯೋ ಹಾಗೂ ಟೆಲಿವಿಷನ್ ಕೇಂದ್ರಗಳೂ ಬಿತ್ತರಿಸಿದುವು.

## "ಯೇಸುವಿನ ಅನ್ವೇಷಣೆಯಲ್ಲಿ" ಚಲಚಿತ್ರ ಸಂಘದ ಪ್ರತಿನಿಧಿ ಖಾದಿಯಾನಿನಲ್ಲಿ

ಪ್ರಸಿದ್ಧ ಹಾಲಿಹುಡ್ ಕಂಪೆನಿಯು "ಯೇಸುವಿನ ಅನ್ವೇಷಣೆ"ಯಲ್ಲಿ ಎಂಬ ಒಂದು ಚಲಚಿತ್ರವನ್ನು ತಯಾರಿಸುವ ಸಿದ್ಧತೆಯಲ್ಲಿದೆ. ಅದರ ಪ್ರತಿನಿಧಿ ಸಂಘದ ನಾಯಕರಾದ ಅಮೇರಿಕದ ಹಾರ್ವರ್ಡ್ ಯುನಿವರ್ಸಿಟಿಯ ಪ್ರೊಫೆಸರ್ ಗ್ಲೇಡ್‌ಸ್ಟನ್ ಅವರು ಕಳೆದ ಎಪ್ರಿಲ್ 8ರಂದು ಮಧ್ಯಾಹ್ನ ಭಾರತದ ವಿದೇಶ ಇಲಾಖೆಯ ಓರ್ವ ಉನ್ನತಾಧಿಕಾರಿಯಾದ ಶ್ರೀ ಪಿ. ಎನ್. ಗಲ್‌ಹಾಟಿಯ ಜೊತೆಯಲ್ಲಿ ಖಾದಿಯಾನನ್ನು ಸಂದರ್ಶಿಸಿದರು. ರಾತ್ರೆ ಅವರಿಗೆ ಅಹ್ಮದಿಯಾ ಅತಿಥಿಗೃಹದಲ್ಲಿ ಉಳಕೊಳ್ಳುವರೆ ಏರ್ಪಾಡು ಮಾಡಲಾಯಿತು. ಇಬ್ಬರು ಅತಿಥಿಗಳಿಗೂ ಖುರ್‌ಆನಿನ ಇಂಗ್ಲಿಷ್ ಭಾಷಾಂತರದ ಒಂದೊಂದು ಪ್ರತಿಗಳನ್ನೂ ಇತರ ಪುಸ್ತಕಗಳನ್ನೂ ಅರ್ಪಿಸಲಾಯಿತು.

ಮರುದಿನ ಬೆಳಗಾತ, ವಾಘಾಗಡಿಯುನ್ನು ತಲಪುವ ತನ್ನ ಸಂಘದ ಇತರ ನಾಲ್ವರನ್ನು ಕೂಡಿಕೊಳ್ಳಲು ಪ್ರೊಫೆಸರರು ತೆರಳಿದರು. ಅಲ್ಲಿಂದ ಅವರು ಲಡಾಖ್ ಮತ್ತು ಶ್ರೀನಗರಕ್ಕೆ ಹೋಗುವ ಕಾರ್ಯಕ್ರಮವನ್ನು ಇರಿಸಿ ಕೊಂಡಿದ್ದರು.

## ಬಂಗ್ಲಾದೇಶದಲ್ಲಿ 400 ಮಂದಿ ಅಹ್ಮದಿಯತ್ ಸ್ವೀಕರಿಸಿದರು

ಕೆಲವು ಕಾಲ ಮೊದಲು ಬಂಗ್ಲಾದೇಶದ ಅಲ್ ಹಾಜ್ ಡಾ। ಅಬ್ದುಲ್ ಸಮದ್ ಖಾನ್ ಚೌಧರಿಯವರ ಮೂಲಕ ಓರ್ವ ಪೀರ್ ಸಾಹೇಬರು ಅಹ್ಮದಿಯತ್ತನ್ನು ಆಶ್ಲೇಷಿಸಿದ್ದರು. ಇತ್ತೀಚೆಗೆ ಪೀರ್ ಸಾಹೇಬರ ಊರಿನಲ್ಲಿ ಒಂದು ಅಹ್ಮದಿಯಾ ಸಭೆಯನ್ನು ಏರ್ಪಡಿಸಲಾಗಿತ್ತು. ಆ ಸಭೆಯಲ್ಲಿ ಪೀರ್ ಸಾಹೇಬ್, ಡಾ। ಅಬ್ದುಲ್ ಸಮದ್ ಖಾನ್ ಮತ್ತು ಇತರ ಅಹ್ಮದಿಯಾ ಪಂಡಿತರು ಭಾಷಣವಿತ್ತರು. ಪೀರ್ ಸಾಹೇಬರು ಅಹ್ಮದಿಯಾ ಸಂದೇಶವನ್ನು ಜನರಿಗೆ ಸವಿವರವಾಗಿ ಹೇಳಿದರು. ಭಾಷಣವನ್ನು ಶ್ರವಿಸಿದ ಪೀರ್ ಸಾಹೇಬರ ಶಿಷ್ಯರಲ್ಲಿ 400 ಮಂದಿ ತಾವು ಅಹ್ಮದಿಯತನ್ನು ಸ್ವೀಕರಿಸಲು ಸನ್ನದ್ಧರಾದರು.

## ಸ್ಪೈನ್‌ನಲ್ಲಿ ಇಸ್ಲಾಂ ಮತ ಪ್ರಚಾರ

ಸ್ಪೈನಿನ ಅಹ್ಮದಿಯಾ ಮಿಶನರಿಯಾದ ಮೌಲವಿ ಅಬ್ದುಲ್ ಸತ್ತಾರ್‌ಖಾನ್ ಸಾಹೇಬ್ ಷಾಹಿದ್ ಅವರ ನೇತೃತ್ವದಲ್ಲಿ ಇತ್ತೀಚೆಗೆ ಸ್ಪೈನಿನ ರಾಜಧಾನಿ ಮ್ಯಾಡ್ರಿಡ್‌ನಲ್ಲೂ ಪುಯೆರ್‌ಲಜನೊ (Puerlajano), ಟೊರೆಜೊನ್ (Torejon), ಟೆರುಯೆಲ್ (Teruel), ಝರಗೋಝು (Zaragoza), ಖರ್ತಬಾ, ಗರ್ನಾತಾ, ಎಂಬೀ ಪಟ್ಟಣಗಳಲ್ಲೂ ಅಹ್ಮದಿಯಾ ಪ್ರಚಾರವನ್ನು ನಡೆಸಲಾಯಿತು. ಸಾವಿರಾರು ಅಹ್ಮದಿಯಾ ಕಿರುಕೃತಿಗಳನ್ನು ಅಲ್ಲೆಲ್ಲಾ ಹಂಚಲಾಯಿತು.

# ಸಂಪಾದಕರಿಗೆ ಪತ್ರ

…………ಮತ ಸೌಹಾರ್ದದ ಕುರಿತು ನಿಮ್ಮ ಕಳಕಳಿ, ಶ್ರೀಕೃಷ್ಣ, ಜೊರಾಸ್ಟರ್ ಮತ್ತು ಕನ್‌ಫ್ಯೂಶಿಯಸನಂತಹ ಇತರ ಪ್ರವಾದಿಗಳ ಹಾಗೂ ಮಹಾಪುರುಷರ ಬೋಧನೆಗಳ ಬಗ್ಗೆ ನಿಮ್ಮ ಅಧ್ಯಯನಾಪೇಕ್ಷೆ ನಿಜಕ್ಕೂ ಶ್ಲಾಘನೀಯ. ವಿಶಾಲ ಮನೋಭಾವದಿಂದ ವಿಶ್ವಭ್ರಾತೃತ್ವದ ತಳಹದಿಯ ಮೇಲೆ ಅಹ್ಮದೀಯ ಪಂಥದ ಕಡೆಗೆ ಮುಸ್ಲಿಂ ಬಾಂಧವರನ್ನು ಆಕರ್ಷಿಸುವಲ್ಲಿ ಮತ್ತು ಇಸ್ಲಾಮಿನ ಉತ್ತಮ ತತ್ವಗಳನ್ನು ಕನ್ನಡಿಗರಿಗೆ ಪರಿಚಯಿಸುವಲ್ಲಿ "ಯುಗರಶ್ಮಿ" ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಕೃಷ್ಣಮೂರ್ತಿ ನಿಟಿಲಾಪುರ, B.Sc., ವಿದ್ವಾನ್,
ಮಣಿಪಾಲ. ಉಪ ಸಂಪಾದಕ, ಉದಯವಾಣಿ.

**

…………ಕೆಲವು ವಾರಗಳ ಹಿಂದೆ ನಿಮ್ಮ ಪತ್ರಿಕೆ ನೋಡಿದೆ. ನಿಜ ಹೇಳುವುದಾದರೆ ಈಗಿನ ಕಾಲಕ್ಕೆ ಬಹಳ ಉಪಯೋಗವಾಗಿದೆ ನಿಮ್ಮ ಪತ್ರಿಕೆ.

ತಾವು ಹೆಚ್ಚಾಗಿ ಎಲ್ಲರ ಧರ್ಮಗಳ ಮತ್ತು ಬೋಧನೆಗಳ ಪರಿಚಯ ಮಾಡುತ್ತೀರೆಂದೂ ಹೊಸ ಹೊಸ ವಿಷಯ ಶೋಧಿಸಿ ಪ್ರಕಟಿಸುತ್ತೀರೆಂದೂ ನನಗೆ ನಂಬಿಕೆ ಇದೆ. ನಿಮಗೆ ಯಾವ ರೀತಿಯಲ್ಲೂ ಸಹಾಯಮಾಡಲು ನಾನು ಸಿದ್ಧನಿದ್ದೇನೆ.

ಎಚ್. ಎಸ್. ಜಾಫರ್
ಮಂಡ್ಯ. Social Worker.

**

…………ಯುಗರಶ್ಮಿ ಪ್ರಗತಿಯತ್ತ ಮುಂದುವರಿಯುತ್ತಿದೆ. ''ಭುಟ್ಟೋ ಪತನ'' ದೈವಾಸ್ತಿತ್ವದ ಕುರಿತು ಸಂಶಯಿಸುವವರಿಗೊಂದು ಸವಾಲು. ಮತ ಯಾವುದಾದರೂ ಆಕ್ರಮ ಮತ್ತು ಅನೀತಿಯ ಬಗ್ಗೆ ಅಲ್ಲಾಹುವಿನ ಪ್ರತಿಭಟನೆ ಎಷ್ಟರಮಟ್ಟಿಗಿದೆ ಎಂಬುದು ದಂಗುಬಡಿಸುವಂತಹದ್ದು.

ದುಬೈ. ತ. ಅ. ರಶೀದ್.

---

# ಸಾದರ ಸ್ವೀಕಾರ

**ಬದುಕಿನ ಹಿನ್ನೋಟ**

ಲೇಖಕ: ಟಿ. ಚಂದ್ರರಾಜ ಶೆಟ್ಟಿ, ಸಿದ್ಧಕಟ್ಟೆ.

ಕ್ರಯ: 4-00 ಪುಟ: 112

ಭಾರದ್ವಾಜ ಪ್ರಕಾಶನ, ಕದಿರೆ, ಮಂಗಳೂರು.

ಟಿ. ಚಂದ್ರರಾಜ ಶೆಟ್ಟಿಯವರು 'ಬದುಕಿನ ಹಿನ್ನೋಟ' ಎಂಬ ಪುಸ್ತಕದಲ್ಲಿ ತನ್ನ ಜೀವನದ ಕೆಲವು ಘಟನೆಗಳನ್ನು ಸರಳ ಭಾಷೆಯಲ್ಲಿ ಉತ್ಪ್ರೇಕ್ಷಾರಹಿತವಾಗಿ ಸ್ವಾರಸ್ಯಕರವಾಗಿ ಬರೆದಿದ್ದಾರೆ. ಶ್ರೀಮಾನ್ ಚಂದ್ರರಾಜ ಶೆಟ್ಟಿಯವರು ಅಧ್ಯಾಪಕನಾಗಿ, ಸಾಹಿತಿಯಾಗಿ, ಕಲಾಕಾರನಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಶ್ರೀಮಾನರು ಕಳೆದ 36 ವರ್ಷಗಳಿಂದ ಕನ್ನಡನಾಡಿನ ಬರಹಗಾರರ ವಿಷಯ ಸಂಗ್ರಹಣ ಕಾರ್ಯದಲ್ಲಿ ನಿರತರಾಗಿರುವುದು ಶ್ಲಾಘನೀಯ.

—ಅ. ಶ್ಯಾ. ಅ.

**ಪುಸ್ತಕ ವಿಭಾಗ**

# ಯೇಸುಕ್ರಿಸ್ತರು ಮೃತರಾದುದು ಎಲ್ಲಿ?

ಲೇಖಕ: ಮೌಲಾನ ಜಲಾಲುದ್ದೀನ್ ಶಮ್ಸ್, ಲಂಡನ್.

ಭಾಷಾಂತರ: ಅಬೂ ತಾಹಿರ್.

## ಅಧ್ಯಾಯ - 14

### ಒಂದು ಮಹತ್ವಾದ ಭವಿಷ್ಯವಾಣಿ

ಮೆಸ್ಸಾಯ (ಮಸೀಹ) ಮುಸ್ಲಿಮರಲ್ಲಿ ಆವತರಿಸುವರೆಂದೂ ಅವರು ಡಮಾಸ್ಕಸ್ ಪಟ್ಟಣಕ್ಕೆ ಪೂರ್ವಕ್ಕಿರುವ ರಾಜ್ಯದಲ್ಲಿ (ಎಂದರೆ ಇಂಡಿಯಾದಲ್ಲಿ) ಜನ್ಮವೆತ್ತುವರೆಂದೂ ಅವರು ಶಿಲುಬೆಯನ್ನು ಛಿದ್ರಗೊಳಿಸುವರೆಂದೂ (ಎಂದರೆ, ಯೇಸುಕ್ರಿಸ್ತರು ಶಿಲುಬೆಯಲ್ಲಿ ಪ್ರಾಣಾರ್ಪಣೆಮಾಡಿದರೆಂಬ ಇಂದಿನ ಪರಂಪರಾಗತ ಕ್ರೈಸ್ತ ಧರ್ಮದ ಬೆನ್ನೆಲುಬಾಗಿರುವ ವಿಶ್ವಾಸದ ಮಿಥ್ಯೆಯನ್ನು ಸ್ಪಷ್ಟಗೊಳಿಸುವರೆಂದೂ), ಇಸ್ಲಾಮಿನ ಸ್ಥಾಪಕರಾದ ಹಝ್ರತ್ ಮುಹಮ್ಮದ್ ಪೈಗಂಬರ್ ಭವಿಷ್ಯ ನುಡಿದಿರುವರು. ಕ್ರೈಸ್ತ ವಾಚಕರು ಈ ಭವಿಷ್ಯವಾಣಿಯ ಮಹತ್ವವನ್ನು ತ್ವರಿತವಾಗಿ ಮನಗಾಣಲಾರರಾದ ಕಾರಣ ನಾನು ಈ ವಿಷಯದ ಕುರಿತು ಸ್ವಲ್ಪ ವಿವರವಾಗಿ ಬರೆಯಲಿಚ್ಛಿಸುತ್ತೇನೆ.

ಯಹೂದಿಗಳೂ ಕ್ರೈಸ್ತರೂ ಯೇಸುಕ್ರಿಸ್ತರು ಶಿಲುಬೆಯಲ್ಲಿ ಮಡಿದಿದ್ದರೆಂಬ ವಿಶ್ವಾಸವನ್ನು ಮಹಮ್ಮದ್ ಪೈಗಂಬರರ ಆಗಮನದ ಮೊದಲು ಹೊಂದಿದ್ದರು. ಯೇಸುಕ್ರಿಸ್ತರು ಶಿಲುಬೆಯಲ್ಲಿ ಮರಣ ಹೊಂದಿ, ತಾನು ಸುಳ್ಳು ಪ್ರವಾದಿಯೆಂದೂ ಶಾಪಗ್ರಸ್ತನೆಂದೂ ತೋರಿಸಿಕೊಟ್ಟರೆಂದು ಯಹೂದಿಗಳು ನಂಬಿದ್ದರು. ಯೇಸುಕ್ರಿಸ್ತರನ್ನು ಮನುಷ್ಯರ ಪಾಪಪರಿಹಾರಕ್ಕಾಗಿ ದೇವರು ಬಲಿಯರ್ಪಿಸಿದನೆಂದೂ ಮೂರನೆಯ ದಿವಸ ಯೇಸುಕ್ರಿಸ್ತರು ಸತ್ತವರಿಂದ ಎದ್ದರೆಂದೂ ಅನಂತರ ನಲ್ವತ್ತು ದಿವಸ ಪ್ರಪಂಚದಲ್ಲಿ ಜೀವಿಸಿ ಸ್ಥೂಲದೇಹದೊಂದಿಗೆ ಸ್ವರ್ಗಾರೋಹಣಗೈದರೆಂದೂ ಕ್ರೈಸ್ತರು ನಂಬಿದ್ದರು. ಈ ವಿಶ್ವಾಸಕ್ಕೆ ವಿರುದ್ಧವಾಗಿ ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಲಿಲ್ಲವೆಂದು ಪವಿತ್ರ ಖುರ್‌ಆನ್ ಘೋಷಿಸಿತು. ಯೇಸುಕ್ರಿಸ್ತರು ನೂರಇಪ್ಪತ್ತನೆಯ ಪ್ರಾಯದಲ್ಲಿ ಮೃತರಾದರೆಂದು ಮುಹಮ್ಮದರು ಪೈಗಂಬರ್ ಸ್ಪಷ್ಟವಾಗಿ ಹೇಳಿರುವರು.* ಮುಹಮ್ಮದ್ ಪೈಗಂಬರ್ ನಿಧನ ಹೊಂದಿದಾಗ, ಎಲ್ಲಾ ಮುಸ್ಲಿಮರು "ಮಹಮ್ಮದ್ ಪೈಗಂಬರರ ಮೊದಲು ಬಂದಿದ್ದ ಎಲ್ಲಾ ಪ್ರವಾದಿಗಳೂ ನಿಧನ ಹೊಂದಿರುವರು" ಎಂಬ ವಿಷಯದ ಕುರಿತು ತಮ್ಮ ಐಕ್ಯಮತ್ಯವನ್ನು ವ್ಯಕ್ತಗೊಳಿಸಿದರು. ಒಬ್ಬ ಶಿಷ್ಯ ಪೈಗಂಬರ್ ಮರಣ ಹೊಂದಿದರ ಕುರಿತು ಸಂಶಯಪಟ್ಟಾಗ ಮತ್ತು ಇತರ ಕೆಲವರು "ಮುಹಮ್ಮದರು ಪೈಗಂಬರರಾಗಿದ್ದರೆ ಮರಣ ಹೊಂದುತ್ತಿರಲಿಲ್ಲ" ಎಂದು ಹೇಳಿದಾಗ ಹಝ್ರತ್ ಅಬೂಬಕರ್‌ರವರು ಎದ್ದು ಭಾಷಣ ಮಾಡಿದರು. ಆ ಭಾಷಣದಲ್ಲಿ ಅವರು ಪವಿತ್ರ ಖುರ್ ಆನಿನ ಈ ವಚನವನ್ನು ಪಾರಾಯಣ ಗೈದರು :

---

* ಇಸಾಬ ಫೀ ಶುರ್‌ಹಿಸ್ಸಹಾಬ ಸಂಪುಟ5, ಪುಟ54, ಕಂಜುಲ್ ಉಮ್ಮಾಲ್ ಸಂಪುಟ 7–ಹಝ್ರತ್ ಇಬ್ನು ಉಮರ್‌ರವರ ವರದಿ ಈ ಗ್ರಂಥಗಳಲ್ಲಿ ಉಲ್ಲೇಖಿತವಾಗಿದೆ. ತಬ್ರಾನಿಯ ಗ್ರಂಥದಲ್ಲಿ ಹಝ್ರತ್ ಫಾತಿಮಾರವರ ವರದಿ ಉಲ್ಲೇಖಿತವಾಗಿದೆ.

"ಮುಹಮ್ಮದ್ ಒಬ್ಬ ದೂತರಾಗಿರುವರು. ಅವರ ಮೊದಲು ಆಗಮಿಸಿದ ಎಲ್ಲಾ ಪ್ರವಾದಿಗಳು ಗತಿಸಿರುವರು. ಆದುದರಿಂದ ಮುಹಮ್ಮದ್ ಮೃತರಾದರೆ ಅಥವಾ ಕೊಲ್ಲಲ್ಪಟ್ಟರೆ ನೀವು ನಿಮ್ಮ ಹಿಮ್ಮಡಿಗಳ ಕಡೆಗೆ ಹಿಂದಿರುವಿರೋ?"

(ಪವಿತ್ರ ಖುರ್‌ಆನ್ 3 : 145)

ಈ ವಚನ ಕೇಳಿದ ನಂತರ ಪೈಗಂಬರರ ಮರಣದ ಕುರಿತಾಗಿರುವ ಎಲ್ಲಾ ಸಂಶಯಗಳು ಶಿಷ್ಯಗಣದ ಹೃದಯದಿಂದ ದೂರ ಸರಿದು ಪೈಗಂಬರರ ಮೊದಲು ಬಂದ ಎಲ್ಲಾ ಪ್ರವಾದಿಗಳಂತೆಯೇ ಅವರೂ ಸಹ ಮೃತರಾಗಿರುವರೆಂಬ ವಿಶ್ವಾಸದಲ್ಲಿ ದೃಢತೆಯನ್ನು ಹೊಂದಿದರು.

( ಈ ಸಂಭವ ಪೈಗಂಬರರ ವಚನಗಳ ಪ್ರಸಿದ್ಧ ಸಂಗ್ರಹವಾದ "ಸಾಹೀಹ್ ಬುಖಾರಿ''ಯಲ್ಲಿ ಉಲ್ಲೇಖಿತವಾಗಿದೆ: ಬುಖಾರಿ, ಸಂಪುಟ 3, ಪುಟ 63, Osmaniyya Misiriyya Press, 1932)

ಪ್ರವಾದಿಗಳ ಮತ್ತು ರಾಜರ ಕುರಿತು ಅಬೂಜಾಫರ್ ಮುಹಮ್ಮದ್ ಇಬ್ನು ಜರೀರ್ ಅತ್ತಬರೀ ಬರೆದ ಪ್ರಸಿದ್ಧ ಚಾರಿತ್ರಿಕಗ್ರಂಥದಲ್ಲಿ ಈ ರೀತಿ ಉಲ್ಲೇಖಿತವಾಗಿದೆ: ಮುಹಮ್ಮದ್ ಪೈಗಂಬರ್ ನಿಧನ ಹೊಂದಿದಾಗ, ಬಹರೈನಿನ ನಿವಾಸಿಗಳು "ಮುಹಮ್ಮದರು ಪ್ರವಾದಿಯಾಗಿದ್ದರೆ ಅವರು ಮೃತರಾಗುತ್ತಿರಲಿಲ್ಲ" ಎಂದು ಹೇಳಿ ತಮ್ಮ ಪೂರ್ವ ವಿಶ್ವಾಸಕ್ಕೆ ಮರಳಿದರು. ಆಗ, ಅಬ್ದುಲ್ ಖೈಸ್ ಗೋತ್ರಕ್ಕೆ ಸೇರಿದ, ಮದೀನದಲ್ಲಿ ಸಾಕಷ್ಟು ಧಾರ್ಮಿಕ ವ್ಯಾಸಂಗ ನಡೆಸಿದ್ದ ಜರೂದ್ ಎಂಬ ವ್ಯಕ್ತಿ (ಇವರು ಮುಅಲ್ಲಾರವರ ಪುತ್ರರಾಗಿದ್ದರು) ತನ್ನ ಗುಂಪಿನವರೊಡನೆ ಈ ರೀತಿ ಸಂವಾದ ಮಾಡಿದರು :–

"ಹಿಂದಿನ ಕಾಲದಲ್ಲಿಯೂ ದೇವರಿಂದ ನಿಯುಕ್ತರಾದ ಪ್ರವಾದಿಗಳು ಬಂದಿದ್ದರೆಂದು ನಿಮಗೆ ಗೊತ್ತಿಲ್ಲವೆ? ''

"ಗೊತ್ತಿದೆ''

"ಇದು ನಿಮ್ಮ ಊಹೆಯೋ ಅಥವಾ ನಿಮಗೆ ಖಚಿತವಾಗಿ ಗೊತ್ತೋ? "

"ನಮಗೆ ಖಚಿತವಾಗಿ ಗೊತ್ತಿದೆ."

"ಅವರಿಗೇನಾಯಿತೆಂದು ನೀವು ಹೇಳ ಬಲ್ಲಿರಾ"

"ಅವರೆಲ್ಲಾ ಮೃತರಾದರು"

"ಮುಹಮ್ಮದ್‌ರು ಸಹ ಅದೇ ರೀತಿ ಮೃತರಾದರು, ಆರಾಧಿಸಲು ಅಲ್ಲಾಹುವಲ್ಲದೆ ಬೇರೆ ಯಾರೂ ಅರ್ಹರಲ್ಲ ಮತ್ತು ಮುಹಮ್ಮದ್ ದೇವರ ದೂತ ಎಂಬುದಕ್ಕೆ ಸಾಕ್ಷಿ ವಹಿಸಿರಿ ?"

ಹಝ್ರತ್ ಜರೂದ್‌ರವರ ಉಪದೇಶದ ಪ್ರಕಾರ ಎಲ್ಲರೂ ವರ್ತಿಸಿ ಅವರನ್ನು ತಮ್ಮ ನಾಯಕನನ್ನಾಗಿ ಆರಿಸಿದರು.

(ತಾರೀಖುರ್ರಸೂಲ್‌ವಲ್ ಮುಲೂಕ್, ಪುಟ 1058-59 Brill, 1890.)

ಹೀಗೆ, ಪೈಗಂಬರರ ನಿಧನದ ಸಮಯದಲ್ಲಿ ತಲೆದೋರಿದ ಸಂಶಯಗಳು ತ್ವರಿತವಾಗಿ ನಿವಾರಣೆಗೊಂಡು ಎಲ್ಲರೂ ದೃಢವಿಶ್ವಾಸಿಗಳಾದರು. ಹಿಂದಿನ ಎಲ್ಲಾ ಪ್ರವಾದಿಗಳು ಮೃತರಾದ ಹಾಗೆಯೇ ಮುಹಮ್ಮದ್ ಪೈಗಂಬರರೂ ನಿಧನ ಹೊಂದಿರುವರೆಂದು ಎಲ್ಲರೂ ಗ್ರಹಿಸಿದರು. ಯೇಸು ಕ್ರಿಸ್ತರು ಮುಹಮ್ಮದ್ ಪೈಗಂಬರರ ಮೊದಲು ಬಂದ ಪ್ರವಾದಿಯಾದ ಕಾರಣ ಅವರು ಸಹ ಮರಣಗೊಂಡಿರುವರೆಂದು ಪೈಗಂಬರರ ಶಿಷ್ಯರು ಐಕ್ಯಮತ್ಯದಿಂದ ಸ್ವೀಕರಿಸಿದಂತಾಯಿತು.

ಆದರೆ ಕಾಲಕ್ರಮೇಣ ವಿವಿಧ ರಾಜ್ಯಗಳ ಸಾವಿರಾರು ಕ್ರೈಸ್ತರು ಇಸ್ಲಾಂ ಮತ ಸ್ವೀಕರಿಸಿದರು. ಈ ನವ ಮುಸ್ಲಿಮರು ಪವಿತ್ರ ಖುರ್‌ಆನಿನ ಕುರಿತು ಮತ್ತು ಇಸ್ಲಾಮಿನ ಉಪದೇಶಗಳ ಕುರಿತು ಸರಿಯಾದ ಜ್ಞಾನಗಳಿಸದೆ ತಮ್ಮ ಹಿಂದಿನ ಆಚಾರವಿಚಾರಗಳಿಗೆ ಅಂಟಕೊಂಡು ಯೇಸು ಕ್ರಿಸ್ತರ ಕುರಿತು ತಮ್ಮ ಹಿಂದಿನ ನಂಬಿಕೆಗಳನ್ನು ಮುಸ್ಲಿಮರೆಡೆಯಲ್ಲಿ ಪ್ರಚಾರಗೊಳಿಸಿದರು. ಈ ನವ ಮುಸ್ಲಿಮರ ಮೇಲೆ ಸ್ವಧರ್ಮೀಯರೆಂದು ವಿಶ್ವಾಸವಿರಿಸಿದ ಇತರ ಮುಸ್ಲಿಮರು ಅವರ ಹೇಳಿಕೆಗಳನ್ನು ಪೂರ್ಣಸತ್ಯಗಳೆಂದು ನಂಬಿ ಅವರು ಪ್ರಚಾರಗೊಳಿಸಿದ ಕಥೆಗಳಿಗನುಸಾರವಾಗಿ ಪವಿತ್ರ ಖುರ್-ಆನಿನ ವಚನಗಳನ್ನು ವ್ಯಾಖ್ಯಾನಿಸತೊಡಗಿದರು. ಇದರ ಫಲವಾಗಿ ಯೇಸು ಕ್ರಿಸ್ತರ ಮರಣದ ಕುರಿತು ಒಮ್ಮತಾಭಿಪ್ರಾಯವನ್ನು ಪ್ರಕಟಿಸಿದ ಪೈಗಂಬರರ ಶಿಷ್ಯರ ಅಭಿಪ್ರಾಯ ತಿರಸ್ಕರಿಸಲ್ಪಟ್ಟು, ಅದರ ಸ್ಥಾನದಲ್ಲಿ ಯೇಸುಕ್ರಿಸ್ತರು ಸ್ಥೂಲ ಶರೀರದೊಂದಿಗೆ ಸ್ವರ್ಗಾರೋಹಣಗೈದ ವಿಶ್ವಾಸ ನೆಲೆ ನಿಂತಿತು. ಹೀಗೆ ಸ್ವರ್ಗವನ್ನೇರಿದ ಯೇಸುಕ್ರಿಸ್ತರು ಕೊನೆಗಾಲದಲ್ಲಿ ಸ್ವರ್ಗದಿಂದ ಇಳಿದು ಬರುವರೆಂಬ ವಿಶ್ವಾಸ ಮುಸ್ಲಿಮರಲ್ಲಿ ಎಷ್ಟು ವಿಪುಲವಾಗಿ ಪ್ರಚಾರಗೊಂಡಿತೆಂದರೆ ಇದರ ವಿರುದ್ಧ ಮಾತನಾಡುವುದು ಧರ್ಮರಾಹಿತ್ಯವೆಂದು ಪರಿಗಣಿಸಲಾಯಿತು.

ಯೇಸುಕ್ರಿಸ್ತರು ಶಿಲುಬೆಯ ಮೇಲೆ ಮರಣ ಹೊಂದಲಿಲ್ಲವೆಂದು ಸೂಚಿಸುವ ಪವಿತ್ರ ಖುರ್ ಆನಿನ ವಚನ ಈ ಕೆಳಗಿನಂತಿದೆ :–

"ಅವರು (ಯಹೂದಿಗಳು) ಹೇಳುವುದು, 'ದೇವರ ದೂತ ಹಾಗೂ ಮಸೀಹ್ ಆದ ಮರ್‌ಯಮ್ ಪುತ್ರ ಈಸಾನನ್ನು ನಾವು ಖಚಿತವಾಗಿ ಕೊಂದೆವು' ಎಂದಾಗಿದೆ. ಆದರೆ ಅವರು ಆತನನ್ನು ಕೊಲ್ಲಲೂ ಇಲ್ಲ; ಶಿಲುಬೆಯ ಮರಣಕ್ಕೆ ಗುರಿಮಾಡಲೂ ಇಲ್ಲ; ಅವರಿಗೆ ಆ ರೀತಿ ತೋರಿಕೆಯಾಯಿತು (ಅಂದರೆ ಅವರು ಮೃತಪಟ್ಟಂತೆ)......... ಅವರು (ಈಸಾನನ್ನು) ಕೊಂದಿಲ್ಲವೆಂಬುದು ಖಂಡಿತ. ಆದರೆ ಆತನನ್ನು ಅಲ್ಲಾಹು ತನ್ನ ಕಡೆಗೆ ಎತ್ತಿ ತನ್ನ ಸಾಮಿಪ್ಯವನ್ನು ಅನುಗ್ರಹಿಸಿದನು. ದೇವರು ಶಕ್ತಿವಂತನೂ ಬುದ್ಧಿವಂತನೂ ಆಗಿರುವನು."

(4 : 158, 159)

ಯೇಸುಕ್ರಿಸ್ತರನ್ನು ಯಹೂದಿಗಳು ಕೊಲ್ಲಲಿಲ್ಲವೆಂದು ಪವಿತ್ರ ಖುರ್ ಆನ್ ಹೇಳಿರುವುದರಿಂದ, "ಯೇಸುಕ್ರಿಸ್ತರು ಶಿಲುಬೆಯಲ್ಲಿ ಮರಣಕ್ಕೆ ಗುರಿಯಾದರು'' ಎಂದು ಯಾವನೇ ಒಬ್ಬ ಮುಸ್ಲಿಮನು ಹೇಳಲು ಸಾಧ್ಯವಿಲ್ಲ. ಶಿಲುಬೆಗೇರಿಸಲ್ಪಟ್ಟ ವ್ಯಕ್ತಿ ಮೃತನಾದನೆಂದು ನವ ಮುಸ್ಲಿಮರಾದ ಕ್ರೈಸ್ತರ ಹೇಳಿಕೆಗಳನ್ನು ನಂಬಿ ಮುಸ್ಲಿಮರು "ಶಿಲುಬೆಗೇರಿಸಲ್ಪಟ್ಟದ್ದು ಯೇಸುಕ್ರಿಸ್ತರಲ್ಲ"ಎಂದು ಹೇಳತೊಡಗಿದರು.

"ಯೇಸುಕ್ರಿಸ್ತರನ್ನು ಒಂದು ಕೋಣೆಯಲ್ಲಿ ಯಹೂದಿಗಳು ಬಂಧನದಲ್ಲಿರಿಸಿದಾಗ, ದೇವರು ತನ್ನ ದಿವ್ಯ ದೂತನನ್ನು ಕಳುಹಿಸಿ ಬೆಳಗಂಡಿ ಮೂಲಕ ಮೇಲೆತ್ತಿದನು; ಕಾವಲಿಗಿದ್ದ ವ್ಯಕ್ತಿಗೆ ಯೇಸುಕ್ರಿಸ್ತರ ಸ್ವರೂಪವು ಕೊಡಲ್ಪಟ್ಟಿತು; ಆತನನ್ನು ಯೇಸುಕ್ರಿಸ್ತರೆಂದೇ ಗ್ರಹಿಸಿ ಯಹೂದಿಗಳು ಶಿಲುಬೆಗೆ ಏರಿಸಿದರು" ಎಂದು ಕೆಲವು ಮುಸ್ಲಿಮರು ಹೇಳಲು ತೊಡಗಿದರು. "ಯೇಸುಕ್ರಿಸ್ತರು ಸ್ವಾಭಾವಿಕವಾಗಿ ಮರಣ ಹೊಂದಿದರು. ಆದರೆ ಮೂರು ದಿನಗಳ ನಂತರ ಪುನರುಜ್ಜೀವಿಸಲ್ಪಟ್ಟು ಆಕಾಶಕ್ಕೇರಿಸಲ್ಪಟ್ಟರು'' ಎಂದು ಕೆಲವು ಮುಸ್ಲಿಮ್ ವ್ಯಾಖ್ಯಾನಗಾರರು ಬರೆದಿರುವರು. ಬೇರೊಬ್ಬ ವ್ಯಕ್ತಿ ಯೇಸುಕ್ರಿಸ್ತರ ಹಾಗೆ ಪರಿವರ್ತಿಸಲ್ಪಟ್ಟನೆಂಬ ಅಭಿಪ್ರಾಯ ಪವಿತ್ರ ಖುರ್ ಆನಿನಲ್ಲಿ ಕಾಣುವುದಿಲ್ಲ. ಇದನ್ನು ಸಮರ್ಥಿಸುವ ಒಂದೇ ಒಂದು ಪೈಗಂಬರ್ ವಚನ ಸಹ ದೊರೆತಿಲ್ಲ. ಈ ವಿಷಯದ ಕುರಿತಿರುವ ಎಲ್ಲಾ ಕಥೆಗಳೂ ಅನಧಿಕೃತವೂ ಅವಿಶ್ವಸನೀಯವೂ ಆಗಿದೆ.

ಬೇರೊಬ್ಬ ವ್ಯಕ್ತಿಯನ್ನು ಯೇಸುಕ್ರಿಸ್ತರಂತೆ ಪರಿವರ್ತಿಸಿ ಯಹೂದಿಗಳ ಕೈಗೆ ನೀಡುವುದರ ಉದ್ದೇಶ ಸಯುಕ್ತಿಕವಾಗಿ ಕಾಣುವುದಿಲ್ಲ. ದೇವರು ಯೇಸುಕ್ರಿಸ್ತರನ್ನು ಆಕಾಶಕ್ಕೆತ್ತಿದ್ದರೆ ಅವರ ಹಾಗೆ ಇನ್ನೋರ್ವನನ್ನು ಪರಿವರ್ತಿಸಿ ಯಹೂದಿಗಳಿಗೆ ಒಪ್ಪಿಸುವುದರಲ್ಲಿ ಯಾವ ಅನಿವಾರ್ಯತೆಯಿದೆ?. "ನಾವು ಯೇಸುವನ್ನು ಕೊಂದು ಆತನು ಶಾಪಗ್ರಸ್ತನೆಂದು ಸಾದರಪಡಿಸಿರುವೆವು" ಎಂದು ಯಹೂದಿಗಳು ಬಡಾಯಿಕೊಚ್ಚಿಕೊಳ್ಳುವಂತೆ ಅವರನ್ನು ಸಮಾಧಾನಪಡಿಸುವುದು ದೇವರ ಉದ್ದೇಶವಾಗಿತ್ತೇ? ಈ ಬದಲಾದ ವ್ಯಕ್ತಿಯಾದರೋ, "ನಾನು ಯೇಸುವಲ್ಲ" ಎಂದು ಹೇಳಿದಂತೆ ಎಲ್ಲಿಯೂ ಉಲ್ಲೇಖಿತವಾಗಿಲ್ಲ. ಈ ರೀತಿ ತನ್ನ ನಿರಾಕರಣೆಯನ್ನು ವ್ಯಕ್ತಗೊಳಿಸಿ ಆತನಿಗೆ ರಕ್ಷೆ ಪಡೆಯಲು ಸಾಧ್ಯವಿದ್ದಿತು. ಕಾವಲುಗಾರ ಕಾಣೆಯಾದ ಸಂಗತಿ ಸರಿಯಾಗಿದ್ದರೆ ಆತನ ಸ್ನೇಹಿತರೂ, ಸಂಬಂಧಿಕರೂ ಆತನನ್ನು ಹುಡುಕುತ್ತಿದ್ದರು. ಈ ಕಥೆ ಸತ್ಯವಾದರೆ, "ಯೇಸುಕ್ರಿಸ್ತ ವಂಚಕ, ಕಳ್ಳ ಪ್ರವಾದಿ" ಎಂದು ಯಹೂದಿಗಳು ಹೇಳುವುದನ್ನು ಖಂಡಿಸುವುದರಲ್ಲಿ ನ್ಯಾಯವಿರುವುದಿಲ್ಲ. ಯೇಸುಕ್ರಿಸ್ತರು ಆಕಾಶಕ್ಕೇರುವುದನ್ನು ಯಹೂದಿಗಳು ಕಾಣಲಿಲ್ಲ. ಯೇಸುಕ್ರಿಸ್ತರ ಹಾಗೆ ಪರಿವರ್ತಿತನಾದ ವ್ಯಕ್ತಿ "ನಾನು ಮಸೀಹನಾದ ಯೇಸುವಲ್ಲ" ಎಂದು ನಿರಾಕರಿಸಲೂ ಇಲ್ಲ. ಆತನು ಯೇಸುಕ್ರಿಸ್ತನೆಂದೇ ಗ್ರಹಿಸಿ ಯಹೂದಿಗಳು ಆತನನ್ನು ಶಿಲುಬೆಗೆ ಕೊಟ್ಟರು. ಆದರೆ ಕಥೆಯಂತೆ ಸಂಭವ ನಡೆದಿದ್ದರೆ ಯೇಸುಕ್ರಿಸ್ತರನ್ನು ನಿರಾಕರಿಸಿದ ಪಾಪದಿಂದ ಯಹೂದಿಗಳು ದೇವರ ದೃಷ್ಟಿಯಲ್ಲಿ ಮುಕ್ತರಾಗುವರು. "ನಾವು ಯೇಸುಕ್ರಿಸ್ತರನ್ನು ಶಿಲುಬೆಗೆ ಕೊಟ್ಟು ಕೊಂದಿರುವೆವು" ಎಂದು ಯಹೂದಿಗಳು ಹೇಳುವುದರಿಂದ ಯಹೂದಿಗಳು ದೇವರ ಶಾಪಕ್ಕೆ ಗುರಿಯಾಗಿರುವರು—ಎಂಬ ಅರ್ಥವನ್ನು ಸೂಚಿಸುವ ಮೇಲೆ ವಿವರಿಸಿದ ಪವಿತ್ರ ಖುರ್‌ಆನ್‌ನ ವಚನಕ್ಕೆ ಇದು ವಿರುದ್ಧವಾಗಿದೆ.

ಮೇಲಿನ ವಚನವಲ್ಲದೆ ಪವಿತ್ರ ಖುರ್‌ಆನಿನ ಇನ್ನಿತರ ಎಷ್ಟೋ ವಚನಗಳು ಯೇಸುಕ್ರಿಸ್ತರು ಸ್ವಾಭಾವಿಕ ಮರಣ ಹೊಂದಿದರೆಂದು ತೋರಿಸಿ ಕೊಡುತ್ತವೆ. ಈ ಕೆಳಗಿನ ವಚನವನ್ನು ಗಮನಿಸಿರಿ :–

"ಮರ್ಯಮನ ಪುತ್ರನಾದ ಈಸಾ, ನೀನು ಹೇಳಿರುವಿಯಾ, 'ನನ್ನನ್ನೂ ನನ್ನ ತಾಯಿಯನ್ನೂ ಏಕ ದೇವರ ಸ್ಥಾನದಲ್ಲಿ ಇಬ್ಬರು ದೇವರುಗಳಾಗಿ ಸ್ವೀಕರಿಸಿರಿ' ಎಂದು ದೇವರು ವಿಚಾರಿಸಿದಾಗ, ಯೇಸು ಹೀಗೆ ಉತ್ತರಿಸುವರು: 'ಪರಮಾತ್ಮನೇ ನೀನು ಮಹಾಮಹಿಮನು. ನಾನು ಹೇಳಬಾರದು ಒಂದು ಸಂಗತಿಯನ್ನು ಹೇಳಲು ನನಗೆ ಯಾವ ಅಧಿಕಾರವಿದೆ? ನಾನು ಆ ರೀತಿ ಹೇಳಿದ್ದರೆ ಅದನ್ನು ನೀನು ತಿಳಿದಿರಬಹುದು. ನನ್ನ ರಹಸ್ಯಗಳನ್ನು ನೀನು ಬಲ್ಲೆ. ನಿನ್ನ ಅಂತರಂಗದ ಸಂಗತಿ ನಾನರಿಯೆ. ನೀನು ಅಗೋಚರ ಸಂಗತಿಗಳನ್ನೆಲ್ಲಾ ತಿಳಿದಿರುವೆ. ನೀನು ಆಜ್ಞಾಪಿಸಿದುದನ್ನಲ್ಲದೆ ಬೇರೆ ಏನನ್ನೂ ನಾನು ಉಪದೇಶಿಸಲಿಲ್ಲ. ನನ್ನ ಮತ್ತು ನಿಮ್ಮ ಪೋಷಕನಾದ ದೇವರನ್ನು ಆರಾಧಿಸಿರಿ, ಎಂದು ಮಾತ್ರ ನಾನು ಉಪದೇಶಿಸಿದೆ. ನಾನು ಅವರ ಮಧ್ಯೆ ಜೀವಿಸಿದ್ದ ಕಾಲ ನಾನು ಅವರ ನಡೆವಳಿಕೆಗೆ ಸಾಕ್ಷಿಯಾಗಿದ್ದೆ. ನೀನು ನನ್ನನ್ನು ಮೃತಪಡಿಸಿದ ನಂತರ ನೀನೇ ಅವರ ಮೇಲ್ನೋಟಗಾರನಾಗಿರುವೆ. ನೀನು ಎಲ್ಲದರ ಕುರಿತು ಸಾಕ್ಷಿಯಾಗಿರುವೆ''.

(ಪವಿತ್ರ ಖುರ್‌ಆನ್ 5 : 117, 118)

ಯೇಸುಕ್ರಿಸ್ತರನ್ನು ಮರಣಾನಂತರದ ಅಂತಿಮ ವಿಚಾರಣೆಯ ದಿವಸ ದೇವರು ಪ್ರಶ್ನಿಸಿದಾಗ, "ನಾನು ಜೀವಿಸಿದ್ದ ಕಾಲದ ತನಕ ನನ್ನ ಅನುಯಾಯಿಗಳು ನನ್ನನ್ನು ದೇವರೆಂದು ಆರಾಧಿಸಿರಲಿಲ್ಲ" ಎಂದು ಅವರು ಉತ್ತರಿಸುವುದಾಗಿ ಮೇಲಿನ ವಚನದಿಂದ ಸ್ವತಃಸಿದ್ಧವಾಗುತ್ತದೆ. ಯೇಸು ಕ್ರಿಸ್ತರು ಈಗಲೂ ಆಕಾಶದಲ್ಲಿ ಜೀವಿಸಿದ್ದು ಪುನಃ ಅವರು ಲೋಕಕ್ಕೆ ಬರುವರೆಂಬ ಜನ ಸಾಮಾನ್ಯರ ವಿಶ್ವಾಸ ಮೇಲಿನ ವಚನಗಳಿಗೆ ವಿರುದ್ಧವಾಗಿದೆ. ಅವರು ಈ ಪ್ರಪಂಚಕ್ಕೆ ಲೋಕಾಂತ್ಯದ ಮೊದಲು ಇನ್ನೊಮ್ಮೆ ಬರುವರಾದರೆ ಲೋಕದ ಮಿಲಿಯಾಂತರ ಕ್ರೈಸ್ತರು ತನ್ನನ್ನು ದೇವರನ್ನಾಗಿ ಆರಾಧಿಸುವುದು ತಿಳಿಯುವಂತಾಗುತ್ತದೆ. ಹಾಗಿರುವಾಗ ಲೋಕಾಂತ್ಯದ ನಂತರದ ವಿಚಾರಣೆಯಲ್ಲಿ ಯೇಸುಕ್ರಿಸ್ತರಿಗೆ ಮೇಲಿನಂತೆ ಉತ್ತರಿಸುವುದು ಅಸಾಧ್ಯವಾಗುತ್ತದೆ. ಯಥಾರ್ಥ ಸಂಗತಿಗಳು ಹೀಗಿದ್ದರೂ, ಯೇಸುಕ್ರಿಸ್ತರು ಶಿಲುಬೆಗೆ ಸಿಲುಕಿಸಲ್ಪಟ್ಟರೂ ಶಿಲುಬೆಯಲ್ಲಿ ಮೃತರಾಗಲಿಲ್ಲವೆಂದೂ ಪ್ರಕೃತಿ ಸಹಜವಾದ ಮರಣ ಹೊಂದಿದರೆಂದೂ ಇರುವ ಸತ್ಯ ಸಂಗತಿ ಮುಸ್ಲಿಮರಿಗೆ ಶತಮಾನಗಳ ತನಕ ತಿಳಿಯದೆ ಹೋಯಿತು. ಕೊನೆಗೆ ವಾಗ್ದಾನ ಮಾಡಲ್ಪಟ್ಟ ಮಸೀಹರಾದ ಹಝ್ರತ್ ಅಹ್ಮದರು ಈ ಸತ್ಯವನ್ನು ಬಹಿರಂಗಗೊಳಿಸಿದರು. "ಮಸೀಹ್ ಹಿಂದುಸ್ತಾನ್‌ಮೇ" (ಭಾರತದಲ್ಲಿ ಯೇಸುಕ್ರಿಸ್ತರು) ಎಂಬ ತನ್ನ ಗ್ರಂಥದ ಎರಡನೆಯ ಅಧ್ಯಾಯದಲ್ಲಿ ಯೇಸುಕ್ರಿಸ್ತರು ಶಿಲುಬೆಯಲ್ಲಿ ಮರಣ ಹೊಂದಿಲ್ಲವೆಂಬ ಪವಿತ್ರ ಖುರ್‌ಆನಿನ ವಚನವನ್ನು ಅವರು ಈ ರೀತಿ ವ್ಯಾಖ್ಯಾನಿಸಿರುವರು:– "ಯಹೂದಿಗಳು ಯೇಸುಕ್ರಿಸ್ತರನ್ನು ಕೊಲ್ಲಲಿಲ್ಲವೆಂದೂ ಶಿಲುಬೆಗೆ ಸಿಲುಕಿಸಿ ಅವರನ್ನು ಹತ್ಯೆಗೊಳಿಸಲಿಲ್ಲವೆಂದೂ ದೇವರು ಈ ವಚನದಲ್ಲಿ ವಿವರಿಸುತ್ತಾನೆ.* ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾದುದಾಗಿ ಯಹೂದಿಗಳು ಶಂಕಿಸಿದರು. ಯೇಸು ಕ್ರಿಸ್ತರು ಶಿಲುಬೆಯಲ್ಲಿ ಯಥಾರ್ಥವಾಗಿ ಮೃತಿ ಹೊಂದಿದರೆಂದು ಮನದಟ್ಟಾಗುವಂತಹ ಸಾಕ್ಷ್ಯಾಧಾರಗಳು ಅವರಿಗೆ ಲಭಿಸಿರಲಿಲ್ಲ. ಯೇಸುಕ್ರಿಸ್ತರನ್ನು ಕೊಲ್ಲಲಿಕ್ಕಾಗಿ ಶಿಲುಬೆಗೇರಿಸಿದುದು ಯಥಾರ್ಥವಾಗಿದ್ದರೂ ಯಹೂದಿಗಳು ಆ ವಿಷಯದಲ್ಲಿ ದೃಢಚಿತ್ತರಾಗಿದ್ದರೂ ಆ ರೀತಿ ಯೇಸು ಕ್ರಿಸ್ತರ ಮರಣ ಸಂಭವಿಸಿದೆಯೆಂದು ಯಹೂದಿಗಳೂ ಕ್ರೈಸ್ತರೂ ಊಹಿಸುವುದು ತಪ್ಪಾಗಿದೆ. ಯೇಸುಕ್ರಿಸ್ತರು ಮರಣದಿಂದ ರಕ್ಷಣೆಯನ್ನು ಪ್ರಾಪಿಸುವಂತೆ ದೇವರು ಸಂದರ್ಭವೊದಗಿಸಿದನು. ಯಹೂದಿಗಳೂ ಕ್ರೈಸ್ತರೂ ನಂಬಿದುದು ತಪ್ಪೆಂದು ಪವಿತ್ರ ಖುರ್‌ಆನ್ ಹೇಳಿದುದು ಸತ್ಯವೆಂದು ಬಹಿರಂಗಗೊಂಡುದು ನ್ಯಾಯವಂತರು ಸಮ್ಮತಿಸಬೇಕಾಗಿದೆ. ಯೇಸುಕ್ರಿಸ್ತರು ಶಿಲುಬೆಯ ಮರಣದಿಂದ ರಕ್ಷಣೆಯನ್ನು ಪಡೆದರೆಂದು ಒಬ್ಬ ಉನ್ನತ ಮಟ್ಟದ ಆಧುನಿಕ ಸಂಶೋಧಕನು ಸಾದರಪಡಿಸಿರುವನು. ಯೇಸು

---

* "ಮಾ ಸಲಬೂಹು" ಎಂಬ ಖುರ್‌ಆನ್ ಪದದಿಂದ "ಯೇಸುಕ್ರಿಸ್ತರನ್ನು ಅವರು ಶಿಲುಬೆಗೆ ಸಿಲುಕಿಸಲಿಲ್ಲ" ಎಂಬುದಾಗಿ ಮುಸ್ಲಿಮ್ ವ್ಯಾಖ್ಯಾನಕಾರರು ತಪ್ಪಾಗಿ ಗ್ರಹಿಸಿದರು. ಆದುದರಿಂದ ಯೇಸುಕ್ರಿಸ್ತರನ್ನು ಶಿಲುಬೆಗೇರಿಸಿದುದನ್ನು ಈ ವ್ಯಾಖ್ಯಾನಗಾರರು ನಿರಾಕರಿಸಿದರು. "ಸುಲ್‌ಬ್'' ಎಂಬ ಅರಬಿ ಪದಕ್ಕೆ 'to creceify' ಎಂಬ ಇಂಗ್ಲಿಷ್ ಪದಕ್ಕೆ ಸಮಾನವಾದ ಅರ್ಥವಿದೆ. "ಕೈಕಾಲುಗಳನ್ನು ಶಿಲುಬೆಗೆ ಜಡಿದು ಕೊಲ್ಲುವುದು'' ಎಂದು ಈ ಶಬ್ದದ ಅರ್ಥವನ್ನು Chamber's Twentieth Century Dictionary ಸೂಚಿಸಿದೆ. ಆದುದರಿಂದ "ಸಲಬೂಹು'' ಎಂದರೆ "ಶಿಲುಬೆಗೆ ಜಡಿದು ಕೊಲ್ಲುವುದು'' ಎಂದು ಅರ್ಥ. (Lane's Aratic–English Lexicon)

ಕ್ರಿಸ್ತರು ಎಲುಬುಗಳು ಮುರಿಯದಿರುವಾಗ ಅವರು ಶಿಲುಬೆಗೆ ಸಿಲುಕಿಸಲ್ಪಟ್ಟನಂತರ ಎರಡೋ ಮೂರೋ ಗಂಟೆಗಳೊಳಗೆ ಹೇಗೆ ಮೃತರಾದರು?' ಎಂಬ ಪ್ರಶ್ನೆಗೆ ಯಹೂದಿಗಳು ಉತ್ತರಿಸಲು ಸಮರ್ಥರಾಗಲಿಲ್ಲವೆಂದು ಲಿಖಿತ ದಾಖಲೆಗಳ ಪರಿಶೀಲನೆಯಿಂದ ತಿಳಿಯುತ್ತದೆ. ಇದಕ್ಕೆ ಬೇಕಾಗಿ 'ನಾವು ಯೇಸುಕ್ರಿಸ್ತರನ್ನು ಖಡ್ಗದಿಂದ ಕೊಂದೆವು' ಎಂಬೊಂದು ವಾದವನ್ನು ಯಹೂದಿಗಳು ತಯಾರುಮಾಡಿದರು. ಆದರೆ ಯೇಸುಕ್ರಿಸ್ತರನ್ನು ಖಡ್ಗದಿಂದ ಕೊಂದುದಾಗಿ ಯಹೂದಿಗಳ ಪುರಾತನ ಚರಿತ್ರೆಗಳು ಸೂಚಿಸುವುದಿಲ್ಲ. ಯೇಸುಕ್ರಿಸ್ತರನ್ನು ಶಿಲುಬೆಗೇರಿಸಿದ ಸಮಯದಲ್ಲಿ ಕತ್ತಲೆಯಾವರಿಸಿದುದು, ಒಂದು ಭೂಕಂಪವಾದುದು, ಪಿಲಾತನ ಪತ್ನಿ ಒಂದು ಕನಸುಕಂಡದ್ದು, ಸಬ್ಬತ್ ರಾತ್ರೆ ತೊಡಗಲಿರುವ ಕಾರಣ ಸೂರ್ಯಾಸ್ತಮಾನವಾದೊಡನೆ ತೊಡಗುವ ಸಬ್ಬತ್ ಕಾಲದಲ್ಲಿ ಶಿಲುಬೆಯಲ್ಲಿ ಯಾವುದೇ ಶರೀರವಿರುವುದು ಕಾನೂನಿಗೆ ವಿರುದ್ಧವಾಗಿರುವುದರಿಂದ ತನ್ನ ಪತ್ನಿಯ ಕನಸಿನ ಕಾರಣದಿಂದಾಗಿ ನ್ಯಾಯಾಧೀಶನಾದ ಪಿಲಾತನು ಯೇಸುಕ್ರಿಸ್ತರನ್ನು ಬಿಡುಗಡೆಗೊಳಿಸಲು ಉತ್ಸುಕನಾದದ್ದು— ಇವೆಲ್ಲಾ ಸಂಭವಗಳು ಯೇಸುಕ್ರಿಸ್ತರನ್ನು ರಕ್ಷಿಸಲಿಕ್ಕಾಗಿ ದೇವರು ತನ್ನ ಮಹತ್ತಾದ ಶಕ್ತಿಯಿಂದ ಸಂಭವಿಸುವಂತೆ ಮಾಡಿದನು. ಅಲ್ಲದೆ ಯೇಸುಕ್ರಿಸ್ತರು ಮೃತರಾದವರಂತೆ ಕಾಣಿಸಿಕೊಳ್ಳುವಂತೆ ಮೂರ್ಛಿತರೂ ಆದರು.

''ಭಯಗೊಳಿಸುವ ಚಿಹ್ನೆಗಳೂ ಭೂಕಂಪಗಳೇ ಮೊದಲಾದುವು ಯಹೂದಿಗಳಲ್ಲಿ ದೈವಿಕ ಶಿಕ್ಷೆಯ ಹೆದರಿಕೆಯನ್ನುಂಟುಮಾಡಿತು. ಸಬ್ಬತ್ ದಿನದಲ್ಲಿ ಶವಗಳು ಶಿಲುಬೆಯಲ್ಲಿ ಬಾಕಿಯಾಗುವ ಹೆದರಿಕೆಯೂ ಅವರಿಗಿತ್ತು. ಮೂರ್ಛಿತರಾದ ಯೇಸುಕ್ರಿಸ್ತರನ್ನು ಮೃತರಾಗಿರುವರೆಂದೇ ಯಹೂದಿಗಳು ಭಾವಿಸಿದರು. ಆಗ ಕತ್ತಲೆ ಕವಿದಿತ್ತು. ಮತ್ತು ಭೂಕಂಪದ ಕಾರಣ ಜನರೆಲ್ಲರೂ ಉದ್ವೇಗಗೊಂಡಿದ್ದರು. ಅವರಿಗೆಲ್ಲ ತಮ್ಮ ಮನೆಗಳ ಚಿಂತೆಯಾಗಿತ್ತು. ಈ ಕತ್ತಲೆಯಲ್ಲಿಯೂ ಭೂಕಂಪದ ಅವಸ್ಥೆಯಲ್ಲಿಯೂ ತಮ್ಮ ಮಕ್ಕಳು ಹೇಗಿರುವರೋ ಎಂಬುದೇ ಅವರ ಯೋಚನೆಯಾಗಿತ್ತು.

"ಈ ಮನುಷ್ಯ ಸುಳ್ಳುಗಾರನೂ ಧರ್ಮಭ್ರಷ್ಟನೂ ಆಗಿದ್ದರೆ ಆತನ ಯಾತನೆಯ ಕಾಲದಲ್ಲಿ ಇಂತಹ ಭಯಂಕರ ಚಿಹ್ನೆಗಳು ವ್ಯಕ್ತವಾದುದು ಹೇಗೆ? ಇಂತಹ ಚಿಹ್ನೆಗಳು ಹಿಂದೆ ಒಮ್ಮೆಯೂ ವ್ಯಕ್ತವಾಗಿಲ್ಲವಲ್ಲ? ಎಂದು ಪ್ರಶ್ನಿಸುತ್ತಾ ಯಹೂದಿಗಳು ಭಯವಿಹ್ವಲರಾಗಿದ್ದರು. ಅವರು ದಿಗ್ಭ್ರಮೆಗೊಂಡಿದ್ದುದರಿಂದ ಯೇಸುಕ್ರಿಸ್ತರು ಯಥಾರ್ಥವಾಗಿ ಮೃತರಾಗಿರುವರೋ ಇಲ್ಲವೋ ಎಂದು ದೃಢೀಕರಿಸಿ ತಿಳಿದುಕೊಳ್ಳಲು ಅಸಮರ್ಥರಾಗಿದ್ದರು. ಯೇಸುಕ್ರಿಸ್ತರ ಯಥಾರ್ಥ ಶಾರೀರಿಕ ಸ್ಥಿತಿಯನ್ನು ಪರಿಶೋಧಿಸುವ ತಾಳ್ಮೆ ಅವರಿಗಿರಲಿಲ್ಲ.

''ಈ ಸಂಭವಿಸಿದ ಘಟನೆಗಳೆಲ್ಲವೂ ಯೇಸುಕ್ರಿಸ್ತರನ್ನು ರಕ್ಷಿಸಲು ದೇವರು ಕೈಗೊಂಡ ಕಾರ್ಯಕ್ರಮದ ಅಂಶಗಳಾಗಿದ್ದುವು. 'ಅವರಿಗೆ ಆ ರೀತಿ ತೋರಿಕೆಯಾಯಿತು' ಎಂಬ ಪವಿತ್ರ ಖುರ್-ಆನ್ ವಚನದಿಂದ ಯಹೂದಿಗಳು ಯೇಸುಕ್ರಿಸ್ತರನ್ನು ಕೊಲ್ಲಲಿಲ್ಲ; ಆದರೆ ಯೇಸುಕ್ರಿಸ್ತರನ್ನು ತಾವು ಕೊಂದಿರುವೆವು ಎಂದು ಯಹೂದಿಗಳು ಭಾವಿಸುವಂತೆ ದೇವರು ಮಾಡಿದನು ಎಂದು ತಿಳಿಯುತ್ತದೆ. ಭಕ್ತರು ದೇವರ ಮೇಲೆ ಪೂರ್ಣಭರವಸೆ ಇಡಬೇಕೆಂದೂ ದೇವರು ತನ್ನ ಸೇವಕರನ್ನು ತಾನಿಚ್ಛಿಸಿದ ರೀತಿಯಲ್ಲಿ ರಕ್ಷಿಸುವನೆಂದೂ ಈ ವಚನದಿಂದಲೂ ಸಂಭವದಿಂದಲೂ ತಿಳಿಯುತ್ತದೆ".

ಹಝ್ರತ್ ಅಹ್ಮದರು ಅದೇ ಪುಸ್ತಕದಲ್ಲಿ ಈ ರೀತಿ ಸಹ ಬರೆದಿರುವರು:

''ಯೇಸುಕ್ರಿಸ್ತರ ಕಾಲದಲ್ಲಿ ಬುದ್ಧದರ್ಮದ ತತ್ವಗಳು ಪಾಲೆಸ್ತೀನ್ ರಾಜ್ಯವನ್ನು ತಲುಪಿದ್ದಿತು ಎಂದು ಐರೋಪ್ಯ ಸಂಶೋಧಕರು ಸ್ಥಿರಪಡಿಸಲಿಚ್ಛಿಸುವ ವಾದವನ್ನು ನಾನು ಪುರಸ್ಕರಿಸುವುದಿಲ್ಲ. ಬೌದ್ಧ ಧರ್ಮದ ಪುರಾತನ ಗ್ರಂಥಗಳಲ್ಲಿ ಯೇಸುಕ್ರಿಸ್ತರ ಹೆಸರು ಸೂಚಿತವಾಗಿರುವುದರಿಂದ ಬೌದ್ಧಮತದ ಕುರುಹುಗಳನ್ನು ಪಾಲೆಸ್ತೀನ್ ದೇಶದಲ್ಲಿ ಹುಡುಕಲೆತ್ನಿಸುವುದು ಅಸಮಂಜಸವಾಗಿದೆ. ಯೇಸುಕ್ರಿಸ್ತರ ಅನುಗ್ರಹೀತ ಪಾದಸ್ಪರ್ಶದ ಗುರುತುಗಳನ್ನು ನೇಪಾಳ, ಟಿಬೇಟ್ ಮತ್ತು ಕಾಶ್ಮೀರ್ ರಾಜ್ಯಗಳ ಶಿಲಾವೃತ ಭೂಮಿಯಲ್ಲಿ ಇವರು ಏಕೆ ಹುಡುಕಬಾರದು ?

"ಅಂಧಕಾರದ ಸಹಸ್ರ ಪರದೆಗಳಡಿಯಲ್ಲಿ ಹುದುಗಿರುವ ಸತ್ಯವನ್ನು ಈ ಸಂಶೋಧಕರು ಕಂಡುಹಿಡಿಯಲಾರರು. ಅದು ದೇವರ ಅನುಗ್ರಹದಿಂದಲೇ ಕಾರ್ಯಸಿದ್ಧ

ಯನ್ನು ಪಡೆಯಿತು. ಮಾನವಾರಾಧನೆ ಎಲ್ಲಾ ಪರಿಧಿಗಳನ್ನು ದಾಟಿ ಪ್ರಪಂಚದಾದ್ಯಂತ ಹರಡಿರುವುದೂ ಶಿಲುಬೆಯ ಆರಾಧನೆ ಮತ್ತು ಒಬ್ಬ ಮನುಷ್ಯನ ತಥಾಕಥಿತ ಬಲಿದಾನದ ವಿಶ್ವಾಸ ಕೋಟ್ಯಾಂತರ ಜನರನ್ನು ಸತ್ಯದೇವರಿಂದ ಅಗಲುವಂತೆ ಮಾಡಿದುದೂ ದೇವರ ಶ್ರದ್ಧೆಯನ್ನು ಪ್ರತ್ಯೇಕವಾಗಿ ಆಕರ್ಷಿಸಿ ದೇವರು ತನ್ನೊಬ್ಬ ಸೇವಕನನ್ನು ನಜರೆತಿನ ಯೇಸುಕ್ರಿಸ್ತರಿಗೆ ಹೋಲಿಕೆಯುಳ್ಳವನಾಗಿ ಶಿಲುಬೆಯ ವಿಶ್ವಾಸವನ್ನು ನಿವಾರಿಸಲಿಕ್ಕಾಗಿ ಕಳುಹಿಸಿದನು. ಪುರಾತನವಾದ ವಾಗ್ದಾನಗಳ ಪ್ರಕಾರ ಆತನು "ವಾಗ್ದತ್ತ ಮೆಸ್ಸಾಯ" (Promised Messiah)ನಾಗಿ ಬಂದನು. ಆಗಲೇ ಶಿಲುಬೆಯೊಡೆಯುವ ಕಾಲ ಸನ್ನಿಹಿತವಾಯಿತು. ಎಂದರೆ, ಶಿಲುಬೆಯಲ್ಲಿ ಯೇಸುಕ್ರಿಸ್ತರ ಮರಣವನ್ನು ಆಶ್ರಯಿಸಿ ಕಲ್ಪಿತವಾದ ವಿಶ್ವಾಸಾದರ್ಶಗಳ ಮಿಥ್ಯೆಯನ್ನು ಬಹಿರಂಗಗೊಳಿಸುವ ಸಮಯ ಒದಗಿ ಬಂದಿತು.........

ಯೇಸುಕ್ರಿಸ್ತರು ಆಕಾಶಕ್ಕೇರಿದುದು ಒಂದು ತಪ್ಪು ಗ್ರಹಿಕೆಯಾಗಿದ್ದರೂ ಅದರಲ್ಲೊಂದು ರಹಸ್ಯವಿದ್ದಿತು. ಮೆಸ್ಸಾಯಸ್ಥಾನದ ಯಥಾರ್ಥ ಸಂಗತಿ ಮರೆತುಹೋಗಿ ಅದು ಶವವು ಸಮಾಧಿಯ ಹುಳಗಳಿಂದ ತಿನ್ನಲ್ಪಟ್ಟು ಕೊನೆಗೊಳ್ಳುವಂತೆ ಅವಸಾನಗೊಂಡಿತ್ತು. ಈ ಮೆಸ್ಸಾಯ ಸ್ಥಾನದ ಯಥಾರ್ಥ ಶಕ್ತಿ ಒಬ್ಬ ಮಾನವನ ಸ್ಥೂಲಶರೀರದ ರೂಪದಲ್ಲಿ ಆಕಾಶದಲ್ಲಿ ಇದೆಯೆಂದು ನಂಬಲ್ಪಡುತ್ತಿತ್ತು. ಕೊನೆಗಾಲಗಳಲ್ಲಿ ಈ ಮೆಸ್ಸಾಯ ಶಕ್ತಿ ಭೂಮಿಗೆ ಇಳಿದು ಬರುವುದು ಅನಿವಾರ್ಯವಾಗಿತ್ತು. ಮೆಸ್ಸಾಯ ಶಕ್ತಿ ಈ ಯುಗದಲ್ಲಿ ಜೀವಂತ ಮನುಷ್ಯರೂಪದಲ್ಲಿ ಭೂಮಿಗೆ ಇಳಿದು ಶಿಲುಬೆಯನ್ನು ಶಿಥಿಲಗೊಳಿಸಿದೆ...... ಆದುದರಿಂದ ನಾನು ಒಂದು ಖಡ್ಗದೊಂದಿಗೆ ಬಂದಿರುವೆನೆಂದು ಗ್ರಹಿಸಬೇಡಿರಿ. ನಾನು ಆ ರೀತಿ ಬಂದಿಲ್ಲ. ನಾನು ಎಲ್ಲಾ ಖಡ್ಗಗಳನ್ನು ಅವುಗಳ ಒರೆಗಳೊಳಗಿರಿಸಲು ಬಂದಿರುವೆನು. ಲೋಕದ ಜನರು ಅಂಧಕಾರದಲ್ಲಿ ಅತಿಯಾಗಿ ಹೋರಾಡುತ್ತಿದ್ದರು. ಎಷ್ಟೋ ಜನರು ತಮ್ಮ ಹಿತೈಷಿಗಳನ್ನು ಆಕ್ರಮಿಸಿರುವರು, ಸಹಾನುಭೂತಿ ಸೂಚಿಸುವ ತಮ್ಮ ಸ್ನೇಹಿತರ ಹೃದಯಗಳನ್ನು ಅವರು ಘಾಸಿಗೊಳಿಸಿರುವರು, ಪ್ರೀತಿಗೆ ಪಾತ್ರರಾದವರನ್ನು ಅವರು ಗಾಯಗೊಳಿಸಿರುವರು, ಆದರೆ ಆ ಅಂಧಕಾರ ಈಗ ಇಲ್ಲ. ರಾತ್ರೆಹೋಗಿ ಹಗಲು ಬಂದಿದೆ. ಇದರ ಫಲದಿಂದ ವಂಚಿತನಾಗದವನು ಭಾಗ್ಯವಂತನು''.

ವಾಗ್ದತ್ತ ಮಸೀಹ (Promised Messiah) ಬಂದು ಶಿಲುಬೆಯನ್ನು ಒಡೆದು, ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾದರೆಂಬ ವಿಶ್ವಾಸ ಮಿಥ್ಯವೆಂದು ತೋರಿಸುಕೊಡುವರೆಂದು ಸುಮಾರು 1350* ವರ್ಷಗಳ ಮೊದಲು ಪೈಗಂಬರ್ ಮುಹಮ್ಮದ್ (ದೇವರ ಇಷ್ಟಾಶೀರ್ವಾದಗಳು ಅವರ ಮೇಲೆ ಸುರಿಯಲಿ) ನುಡಿದ ಭವಿಷ್ಯವಾಣಿ ಈ ರೀತಿ ಪೂರ್ತಿಗೊಂಡಂತಾಯಿತು. ತನ್ನ ದ್ವಿತೀಯಾಗಮನದ ಕಾಲದಲ್ಲಿ "ಭೂಲೋಕದ ಎಲ್ಲಾ ಕುಲದವರು ಎದೆ ಬಡಿದುಕೊಳ್ಳುವರು.'' (ಮತ್ತಾಯ 24 : 30) ಎಂದು ಯೇಸುಕ್ರಿಸ್ತರು ಸ್ವತಃ ನುಡಿದ ಭವಿಷ್ಯವಾಣಿ ಸಹ ಇದರಿಂದ ಪೂರ್ತಿಗೊಂಡಂತಾಗುವುದು. ಕ್ರೈಸ್ತರೂ, ಯಹೂದಿಗಳೂ, ಮುಸ್ಲಿಮರೂ ತಮ್ಮ ನಂಬಿಕೆಗಳು ತಪ್ಪೆಂದು ತಿಳಿದಾಗ ಪಶ್ಚಾತ್ತಾಪಪಡುವರು ಎಂದು ಇದರ ಅರ್ಥವಾಗಿದೆ.

ಕ್ರಿ.ಶ. ಮೂರನೆಯ ಶತಮಾನದಲ್ಲಿ ಕಾನ್‌ಸ್ಟೆಂಟೈನ್ ಚಕ್ರವರ್ತಿಯ ಕಾಲದಲ್ಲಿ ಶಿಲುಬೆಯು ಕ್ರೈಸ್ತ ಧರ್ಮದ ಚಿಹ್ನೆಯಾಗಿ ಬಹಿರಂಗವಾಗಿ ಸ್ವೀಕರಿಸಲ್ಪಟ್ಟಿತು. ಆದರೆ ವಾಗ್ದತ್ತ ಮಸೀಹದ ಆಗಮನದ ನಂತರ ಮೂರು ಶತಮಾನಗಳೊಳಗೆ ಕ್ರೈಸ್ತರು ತಮ್ಮ ನಂಬಿಕೆಗಳು ಸುಳ್ಳೆಂದು ತಿಳಿದುಕೊಂಡು ಶಿಲುಬೆಗಳನ್ನು ಒಡೆಯುವರೆಂದು ವಾಗ್ದತ್ತ ಮಸೀಹರು ದೇವರಿಂದ ಜ್ಞಾನಪಡೆದು ಈ ರೀತಿ ಭವಿಷ್ಯ ನುಡಿದಿರುವರು:

"ಯೇಸುಕ್ರಿಸ್ತರ ಆಗಮನವನ್ನು ನಿರೀಕ್ಷಿಸುತ್ತಿರುವ ಕ್ರೈಸ್ತರೂ ಮುಸ್ಲಿಮರೂ ಈ ದಿನದಿಂದ ಮೂರು ಶತಮಾನಗಳ ಕಾಲ ಕಳೆಯುವಷ್ಟರಲ್ಲಿಯೇ ತಾವು ಶ್ರದ್ಧೆಯಿಂದ ನಂಬಿಕೊಂಡು ಬಂದಿದ್ದ ವಿಶ್ವಾಸದ ಕುರಿತು ನಿರಾಶೆ ಹೊಂದಿ ಅದನ್ನು ತ್ಯಜಿಸುವರು. ಆಗ ಪ್ರಪಂಚಕ್ಕೊಂದೇ ಧರ್ಮ ಮತ್ತು ಒಬ್ಬನೇ ನಾಯಕನಿರುವನು. ನಾನು ಪ್ರಪಂಚದಲ್ಲಿ ಒಂದು ಬೀಜ ಬಿತ್ತಲು ಬಂದಿರುವೆನು, ಅದನ್ನು ಬಿತ್ತಿರುವೆನು. ಅದು ಮೊಳಕೆ ಹೊಂದಿ ದೊಡ್ಡ ವೃಕ್ಷವಾಗಿ ಹೂ ಮತ್ತು ಹಣ್ಣನ್ನು ತಕ್ಕ ಕಾಲಗಳಲ್ಲಿ ನೀಡುವುದು ಮತ್ತು ಅದನ್ನು ಕಿತ್ತು ಹಾಕಲು ಯಾರಿಗೂ ಸಾಧ್ಯವಾಗಲಿಕ್ಕಿಲ್ಲ.'' (ತಝ್‌ಕಿರತುಶ್ಶಹಾದತೈನ್, ಪುಟ 65, ಕ್ರಿ.ಶ. 1903ರಲ್ಲಿ ಪ್ರಕಟಿತವಾದುದು)

* ಈ ಗ್ರಂಥ ವಿರಚಿತವಾದುದು ಕ್ರಿ. ಶ. 1945ರಲ್ಲಿ ಎಂಬುದು ಗಮನಿಸಬೇಕಾಗಿದೆ. – ಅನುವಾದಕ.

ಈ ಗ್ರಂಥವನ್ನು ಕೊನೆಗೊಳಿಸುವ ಮೊದಲು ಈ ಕಾಲದ ಪ್ರವಾದಿಯೂ ವಾಗ್ದತ್ತ ಮಸೀಹರೂ ವಿವಿಧ ಜನಾಂಗಗಳಲ್ಲಿ ಅವತರಿಸಿದ ಪ್ರವಾದಿಗಳು ನುಡಿದ ಭವಿಷ್ಯ ನುಡಿಗಳಿಗನುಸಾರವಾಗಿ ದೇವರಿಂದ ಕಳುಹಿಸಲ್ಪಟ್ಟವರೂ ಆದ ಹಝ್ರತ್ ಅಹ್ಮದ್ ಅವರ ಈ ಕೆಳಗಿನ ವಚನಗಳ ಮೂಲಕ ನಾನು ಪ್ರಾರ್ಥಿಸಲು ಇಚ್ಛಿಸುತ್ತೇನೆ:

"ನಮಗೆ ಅತ್ಯಂತ ಪ್ರಿಯನಾದ ದೇವರೇ, ಕ್ರೈಸ್ತರನ್ನು ಒಬ್ಬ ಮನುಷ್ಯನನ್ನು ದೇವರೆಂದು ಪೂಜಿಸುವುದರಿಂದ ರಕ್ಷಿಸಿ ಈ ಯುಗದ ಕುರಿತು ನಿನ್ನ ಪ್ರವಾದಿಗಳು ನುಡಿದ ಭವಿಷ್ಯವಾಣಿಗಳು ಪೂರ್ಣವಾಗಲಿ. ಮುಳ್ಳಿಗೆ ಸಿಲುಕಿ ಗಾಯಗೊಂಡವರನ್ನು ನೀನು ಮೇಲೆತ್ತು. ನಿನ್ನ ಜ್ಞಾನದಲ್ಲಿಯೂ ನಿನ್ನ ಪ್ರೇಮದಲ್ಲಿಯೂ ನೆಲೆಗೊಂಡಿರುವ ಮೋಕ್ಷವೆಂಬ ಒರತೆಯಲ್ಲಿ ಅವರನ್ನು ಪರಿಶುದ್ಧಗೊಳಿಸು. ಮನುಷ್ಯನ ರಕ್ತದಿಂದ ಯಾವುದೇ ಮೋಕ್ಷ ದೊರೆಯಲಾರದು. ದಯಾಮಯನಾದ ದೇವರೇ, ಕ್ರೈಸ್ತರು ಒಬ್ಬ ಮನುಷ್ಯನನ್ನು ದೀರ್ಘಕಾಲದಿಂದ ಪೂಜಿಸುತ್ತಾ ಬಂದಿರುವರು. ಈಗ ಅವರ ಮೇಲೆ ದಯೆದೋರಿ ಅವರ ಕಣ್ಣುಗಳನ್ನು ತೆರೆ. ಸರ್ವಶಕ್ತ ದಯಾಮಯ ದೇವರೇ, ಎಲ್ಲವೂ ನಿನಗೆ ಸಾಧ್ಯ. ಆದುದರಿಂದ ಅವರು ಶಿಲುಬೆಯ ಮೇಲಿನ ಬಲಿ ಮತ್ತು ಯೇಸುಕ್ರಿಸ್ತರ ರಕ್ತ ತರ್ಪಣದಂತಹ ಮಿಥ್ಯ ಸಿದ್ಧಾಂತಗಳಿಂದ ಬಿಡುಗಡೆ ಹೊಂದುವಂತೆ ಮಾಡು. ಸರ್ವಶಕ್ತ ದೇವರೇ, ಅವರ ಒಳಿತಿಗಾಗಿ ನನ್ನ ಪ್ರಾರ್ಥನೆಯನ್ನು ಆಲಿಸಿ ಅವರ ಹೃದಯದಲ್ಲಿ ನಿನ್ನ ಪ್ರಕಾಶವು ಪ್ರಜ್ವಲಿಸಿ ನಿನ್ನನ್ನು ಅವರು ಕಾಣುವಂತೆ ಆಗಲಿ. ನಿನ್ನನ್ನು ಅವರು ನೋಡಬಲ್ಲರೆಂದು ಯಾರಿಗೆ ತಾನೆ ಊಹಿಸಲು ಸಾಧ್ಯ ? ನಿನ್ನ ಸೃಷ್ಟಿಯಾದ ಒಬ್ಬ ಮನುಷ್ಯನನ್ನು ಪೂಜಿಸುವುದನ್ನು ತ್ಯಜಿಸಿ ನಿನ್ನ ಧ್ವನಿಗೆ ಕಿವಿಗೊಡುವರೆಂದು ಯಾರಿಗೆ ತಾನೆ ಯೋಚಿಸಲು ಸಾಧ್ಯ ? ಆದರೆ ದೇವರೇ, ಎಲ್ಲವೂ ನಿನಗೆ ಸಾಧ್ಯ. ಆದುದರಿಂದ ಪ್ರವಾದಿ ನೋಹರ ಕಾಲದಲ್ಲಿ ನೀನು ನಾಶಮಾಡಿದಂತೆ ಅವರನ್ನು ನಾಶ ಮಾಡಬೇಡ. ಅವರು ನಿನ್ನ ಸೃಷ್ಟಿಗಳಷ್ಟೆ. ಅವರ ಮೇಲೆ ದಯೆದೋರು. ಅವರು ಸತ್ಯವನ್ನು ಸ್ವೀಕರಿಸುವಂತೆ ಅವರ ಹೃದಯಗಳನ್ನು ತೆರೆ.''

ಲಂಡನ್ — ಜಲಾಲುದ್ದೀನ್ ಶಮ್ಸ್,
14ನೆ ಮಾರ್ಚ್ 1945. — ಲಂಡನ್ ಮಸೀದಿಯ ಇಮಾಂ

(ಮುಗಿಯಿತು)

**Read the following books to know more about Jesus christ and christianity**

1. JESUS IN INDIA
   By Hazrat Mirza Ghulam Ahmad

2. THE TOMB OF JESUS
   By Sufi M. R. Bengali

3. THE CHRISTIAN DOCTRINE OF ATONEMENT
   By Dr. Mufti Muhammad Sadiq, D.D., LL.D., S.S.P. (Lond)

4. LATEST FINDINGS ABOUT JESUS CHRIST

5. A REVIEW OF CHRISTIANITY FROM A NEW POINT OF VIEW

6. HOW TO GET RID OF THE BONDAGE OF SIN?

7. JESUS IN KASHMIR

8. FOUR QUESTIONS BY A CHRISTIAN & THEIR ASWERS


9. WHY DID EARLY CHRISTIANS ACCEPT ISLAM?
   By J. D. Shams.

10. MUHAMMAD IN BIBLE.

Write to:

**NAZIR DAWAT-O-TABLIGH**

**P. O. QADIAN-143516 (Punjab).**




ಇತ್ತೀಚೆಗೆ ಸ್ವೀಡನಿನ ಗೋಟೆನ್‌ಬರ್ಗ್ ಪಟ್ಟಣದಲ್ಲಿ ನಿರ್ಮಿಸಲ್ಪಟ್ಟ ಅಹ್ಮದಿಯಾ ಮಸೀದಿ. ಈ ಮಸೀದಿಯ ನಿರ್ಮಾಣಕ್ಕೆ 25 ಲಕ್ಷ ರೂಪಾಯಿ ಖರ್ಚಾಗಿದೆ. ಇದು ಸ್ವೀಡನಿನಲ್ಲಿ ಪ್ರಥಮ ಮಸೀದಿಯಾಗಿದೆ.

Regd. with the Registrar of Newspapers for India. Regd. No. R. N. 27354/75
YUGARASHMI Kannada Quarterly, April-June 1978/Shahadath-Ihsan 1357

**English Translation of Holy Quran**
**with**

# Arabic Text and Extensive Index




**Price: Rs. 15-00** **Postal Charges Extra**

Write to:
**NAZIR DAWAT-O-TABLIGH**
**QADIAN (Punjab) 143516**

Printed by: B. Madhava Kulal, at Chandra Printers, Lower Car Street, Mangalore
Edited and Published by Muhammad Yusuf on behalf of Jamath Ahamadiyya
Mangalore at 23/1008 Ansari Road, Bunder, Mangalore-575001.